ಮಾನಸಿ

ತಿಂಗಳ ಪತ್ರಿಕೆ

ಮಾರ್ಚ್ : 2000

★ ಸ್ವಾಯತ್ತ ಮಹಿಳಾ ಸಮಾವೇಶದ ಇತಿಹಾಸ

★ ಗಡಿಗಳೆಲ್ಲ ಮರೆಯಾಗಿ ಜಗತ್ತೆ ಒಂದಾಗುವ ದಿನ ಬರಬಹುದು

★ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ

★ ಸಂಭ್ರಮದ ದಿನವಲ್ಲ, ಸಂಕಟದ ದಿನ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 15 ಸಂಚಿಕೆ : 2

ಫೆಬ್ರವರಿ - ಮಾರ್ಚ್ : 2000

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.

ಚಂಪಾವತಿ ಎಚ್. ಎಸ್., ಸರಸ್ವತಿ ದು.

ಸವಿತ ಎ., ಗೀತಾ, ವೆಂ. ವನಜಾ, ನೀಲಾಂಜನ

ಶ್ಯಾಮಲ, ಬಿ. ಎನ್. ಶಾರದ

ಹೆಚ್. ಎಸ್. ಪುಷ್ಪ

ಸಲಹೆ - ಸಹಕಾರ :

ಇಳಾ ವಿಜಯಾ

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಮನುಷ್ಯರು ಮನುಷ್ಯರನ್ನು ಸಹಿಸಿಕೊಳ್ಳಲಾಗದ ದುರಂತ ನಮ್ಮ ನಿಮ್ಮ ಮುಂದಿದೆ. ಅಸಹನೆ, ದ್ವೇಷ, ಸಿಟ್ಟು, ಭಯಂಕರವಾದ, ನಮ್ಮೆಲ್ಲರನ್ನೂ ಆತಂಕದಲ್ಲಿ ನಿದ್ರೆಗೆಡಿಸಿಬಿಡುವ ರೀತಿಯ ಹಿಂಸೆಗಳಲ್ಲಿ ವ್ಯಕ್ತಗೊಳ್ಳುತ್ತಿರುವುದು ಇನ್ನೂ ದುರಂತದ ವಿಚಾರವಾಗಿದೆ. ಮತಾಂಧರಿಗೆ ಸತ್ಯ ಬೇಕಿಲ್ಲ. ದೀಪಾ ಮೆಹ್ತಾ 'ವಾಟರ್' ಸಿನೆಮಾದಲ್ಲಿ ವಿಧವೆಯರ ಧಾರುಣ ಸ್ಥಿತಿಯ ಮೇಲೆ ಬೆಳಕು ಚಲ್ಲುವದು ಹಿಂದೂ ಮೂಲಭೂತವಾದಿಗಳ 'ಸಂಸ್ಕೃತಿ'ಗೆ ಧಕ್ಕೆಯಾಗುತ್ತದೆ. ತಸ್ಲೀಂ ನಜರೀನ್ ಬಾಂಗ್ಲಾದೇಶದ ಹಿಂದೂ ಕುಟುಂಬವೊಂದರ ದುರಂತದ ಬಗ್ಗೆ ಮಾತಾಡಿ, ಬರೆದು ಮುಸ್ಲಿಂ ಮೂಲಭೂತವಾದಿಗಳ 'ಸಂಸ್ಕೃತಿ'ಗೆ ಮಾರಕವಾಗಿಬಿಡುತ್ತಾರೆ. ಜಾತಿವಾದಿಗಳ ದಳ್ಳುರಿಗೆ ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರು ಜೀವಂತ ದಹನವಾಗಿದ್ದಾರೆ. 'ಹಿಂದೂ' ಸಂಸ್ಕೃತಿಯನ್ನು ವಿಜೃಂಭಿಸಿ ಮಾತನಾಡುವ ಸಂಸ್ಕೃತಿಯ ವಕ್ತಾರರು, ಈ ಜೀವಂತ ದಹನದ ಒಳಗೆ ಹೊಗೆಯಾಡುತ್ತಿರುವ ಜಾತಿ, ಭೂಮಿ, ಲೈಂಗಿಕತೆ, ಆರ್ಥಿಕತೆ, ಸಾಮಾಜಿಕ ಸ್ಥಾನ-ಮಾನ, ಪೋಲೀಸ್, ಅಧಿಕಾರ, ಇವುಗಳ ಸಿಕ್ಕುಗಳ ಬಿಡಿಸಿ, ಸತ್ಯ ಮಾತನಾಡುತ್ತಾರೆಯೇ? ಇನ್ನೆಷ್ಟು ದಲಿತರ ಬದುಕು ದಹನಕ್ಕೆ ಕಂಬಾಲಪಲ್ಲಿ 'ಮಾದರಿ'ಯಾಗಿ ಭಯಾನಕ ವಾತಾವರಣ ಹುಟ್ಟು ಹಾಕಬಹುದು ಎಂಬುದನ್ನು ಸಾರ್ವಜನಿಕವಾಗಿ ಮಾತನಾಡಲು ಸಿದ್ಧರಿದ್ದಾರೆಯೇ?

ನಾವೆಲ್ಲರೂ ಹಿಂಸೆಗಳಿಗೆ, ಜೀವಂತ ದಹನಗಳಿಗೆ ಸಾಕ್ಷಿಯಾಗುತ್ತಿದ್ದೇವೆ. ಜೀವಂತವಾಗಿದ್ದು ಸತ್ತು ಹೋಗುತ್ತಿರುವ ನಮ್ಮ ಪ್ರಜ್ಞೆಗಳೊಡನೆಯೇ ಹೋರಾಡಿ ಬದುಕುತ್ತಿದ್ದೇವೆ. ಸಾಯಲಾರದೇ ಬದುಕುತ್ತೇವೆ, ಬದುಕಲಾರದೇ ಜೀವಂತವಾಗಿ ಸಾಯುತ್ತಿದ್ದೇವೆ.

ಸಾಧ್ಯವಿಲ್ಲವೆನಿಸುತ್ತದೆ. ಎಲ್ಲೋ ನಾವೆಲ್ಲ ಧ್ವನಿ ಎತ್ತಬೇಕಾಗಿದೆ. ಮೂಲಭೂತವಾದಿಗಳ, ಜಾತಿವಾದಿಗಳ ಅಬ್ಬರಿಸುವ ಧ್ವನಿಗೆ ಮೀರಿ ನಾವು ಒಕ್ಕೊರಲಿನಿಂದ ಕೂಗಬೇಕಿದೆ. 'ಇದೆಲ್ಲ ನಿಲ್ಲಿಸಿ' ಎಂದು ಒತ್ತಡ ಹಾಕಬೇಕಾಗಿದೆ. ನಮ್ಮ ತಾತ್ವಿಕ ಚಿಂತನೆ, ಭಿನ್ನತೆ ಎಲ್ಲಾ ಮೀರಿ ಈ ವಿಚಾರಗಳಲ್ಲಿ ಒಟ್ಟಾಗಬೇಕಿದೆ. ನಿಮ್ಮ ದಹನದಾಸೆಗೆ, ಅಸಹನೆಗೆ, ಕೋಪಕ್ಕೆ, ದ್ವೇಷಕ್ಕೆ ಜನರ ಬದುಕುವ ಹಕ್ಕು ಕಸಿದುಕೊಳ್ಳುವ ಹಕ್ಕು ನಿಮಗಿಲ್ಲ ಎಂಬುದನ್ನು ಎಲ್ಲಾ ಮತಾಂಧರಿಗೆ, ಜಾತೀವಾದಿಗಳಿಗೆ ಎದುರು ನಿಂತು ಹೇಳಬೇಕಿದೆ. ನಾವು ಮೂಕ ಸಾಕ್ಷಿಗಳಾಗಲಾರವೆಂಬುದನ್ನು ತೋರಿಸಬೇಕಿದೆ. ಎಲ್ಲೆಲ್ಲಿ ಸಾಧ್ಯವೋ, ಹೇಗೆ ಸಾಧ್ಯವೋ, ಪ್ರಜ್ಞಾವಂತರೆಲ್ಲಾ ಇವುಗಳನ್ನು ಪ್ರತಿಭಟಿಸಬೇಕು. ಪ್ರತಿಭಟನೆ ಮೂಲಕ, ಜನಾಂದೋಲನದ ಮೂಲಕ ಈ ಎಲ್ಲಾ ದುರಂತಗಳಿಗೆ ಒಂದು ವಿರೋಧಿ ಶಕ್ತಿಯನ್ನು ಬೆಳೆಸುವ ತುರ್ತಿನ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ.

ಸ್ವಾಯತ್ತ ಮಹಿಳಾ ಸಮಾವೇಶದ ಇತಿಹಾಸ

- ಸಹೇಲಿ

ಸ್ವಾಯತ್ತ ಮಹಿಳಾ ಸಂಘಟನೆಗಳ ರಾಷ್ಟ್ರೀಯ ಸಮಾವೇಶ 1980ರಲ್ಲಿ ಬಾಂಬೆಯಲ್ಲಿ ನಡೆದಿತ್ತು. ಕಳೆದ ರಾಷ್ಟ್ರೀಯ ಸಮಾವೇಶ ಡಿಸೆಂಬರ್ 1997ರಲ್ಲಿ ರಾಂಚಿಯಲ್ಲಿ ನಡೆಯಿತು. ಈ ಸಮಾವೇಶದಲ್ಲಿ 4,000 ಜನ ಮಹಿಳೆಯರು ಭಾಗವಹಿಸಿದ್ದರು. ಈ ಎರಡು ಸಮಾವೇಶದವರೆಗೆ ಕಂಡುಬರುವ ಬದಲಾವಣೆಗಳನ್ನು ಕೇವಲ ಸಮಾವೇಶಗಳಲ್ಲಿ ಭಾಗವಹಿಸಿದ ಮಹಿಳೆಯರ ಸಂಖ್ಯೆಯ ದೃಷ್ಟಿಕೋನದಿಂದ ಮಾತ್ರವಲ್ಲದೆ, ಮಹಿಳೆಯರ ಸಮಸ್ಯೆಗಳನ್ನು ಹೇಗೆ, ಯಾವ ದೃಷ್ಟಿಕೋನದಿಂದ ನೋಡಲಾಗಿದೆಯೆಂಬುದನ್ನು ವಿಶ್ಲೇಷಿಸಬೇಕಾಗುತ್ತದೆ. ಈ 19 ವರ್ಷಗಳಲ್ಲಿ ಆರು ರಾಷ್ಟ್ರೀಯ ಸಮಾವೇಶಗಳು ನಡೆದಿವೆ. ಮಹಿಳೆಯರ ಅನುಭವಗಳನ್ನು ಹಂಚಿಕೊಳ್ಳುವುದು, ಸಮಸ್ಯೆಗಳನ್ನು ವಿಶ್ಲೇಷಿಸುವುದು, ಪ್ರಗತಿ ಪರ ಸಂಘಟನೆಗಳೊಂದಿಗೆ ಸಂಪರ್ಕ ಹಾಗೂ ಚಳುವಳಿಗಳನ್ನು ಬಲಪಡಿಸುವುದು, ಸಾಮಾಜಿಕ ಬದಲಾವಣೆಗಾಗಿ ತಂತ್ರಗಳನ್ನು ರೂಪಿಸುವುದು ಈ ರಾಷ್ಟ್ರೀಯ ಸಮಾವೇಶಗಳ ಉದ್ದೇಶವಾಗಿತ್ತು. ರಾಷ್ಟ್ರೀಯ ಸಮಾವೇಶಗಳು ನಡೆದ ಸಂದರ್ಭಗಳು ಸಮಾವೇಶದ ಕೇಂದ್ರ ವಸ್ತುವಿನ ಆಯ್ಕೆ, ಸ್ವರೂಪ, ಭಾಗವಹಿಸಿದ ಸಂಘಟನೆಗಳನ್ನು ನಿರ್ಣಯಿಸುತ್ತಿದ್ದವು. ಸಮಾವೇಶ ನಡೆಯಬೇಕಾಗಿದ್ದ ಸ್ಥಳದ ಬಗ್ಗೆ ನಡೆದ ಚರ್ಚೆ ಮತ್ತು ಗೊಂದಲಗಳು ಮಾತ್ರವಲ್ಲದೆ, ಸಮಾವೇಶಗಳ ನಡುವಿನ ಅವಧಿಯು ಸಹ ಚರ್ಚೆಗೆ ಒಳಗಾಗಿತ್ತು. ಪಿತೃ ಪ್ರಧಾನತೆ, ಸ್ವಾಯತ್ತತೆಯಂತಹ ಪದಗಳನ್ನು ಹೇಗೆ ಬಳಸಬೇಕು ಎಂಬ ಚರ್ಚೆಯೊಡನೆ, ಮಹಿಳಾ ಚಳುವಳಿ ಪ್ರತ್ಯೇಕವಾಗಿ ತನ್ನ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲವಾದುದರಿಂದ ಇತರ ಪ್ರಗತಿ ಪರ ಚಳುವಳಿಗಳೊಂದಿಗೆ ಹೋರಾಡಬೇಕಾಗುತ್ತದೆ. ಸಾಮಾಜಿಕ ಬದಲಾವಣೆಗಾಗಿ ನಡೆಯುವ ಹೋರಾಟಗಳು ಮಹಿಳೆಯರ ಅನುಭವಗಳನ್ನು ಒಳಗೊಳ್ಳಬೇಕಾಗುತ್ತದೆ.

ಒಂದು ಮಹಿಳಾ ಸಂಘಟನೆ, ಅದರ ಸಂಘಟನಾತ್ಮಕ ರೂಢಿಗಳು ಏನನ್ನು ಒಳಗೊಂಡಿದೆ ಎಂಬುದು ಮೊದಲನೆಯದಾಗಿ ಸ್ಪಷ್ಟವಾಗಬೇಕಾಗುತ್ತದೆ. ಭಾರತದ ಯಾವುದೇ ಸಂದರ್ಭದಲ್ಲಿ ಒಂದೇ ಮಾದರಿಯ, ಒಂದೇ ರೀತಿಯ ಮಹಿಳಾ ಚಳುವಳಿ ಇರಲಿಲ್ಲ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಿಭಿನ್ನ ಮಾದರಿಯ ಮಹಿಳಾ ಸಂಘಟನೆಗಳ ಅಸ್ತಿತ್ವ, ವಿವಿಧ ಚಳುವಳಿಗಳಲ್ಲಿ ಸ್ತ್ರೀಯರು ಭಾಗವಹಿಸಿರುವುದು, ಮಹಿಳಾ ಚಳುವಳಿಯ ಬಹುಮುಖಿ ಗ್ರಹಿಕೆ, ಅದಕ್ಕೆ ವಿವಿಧ ರೀತಿಯಲ್ಲಿ ಪರಿಹಾರ ಕಂಡುಕೊಂಡಿರುವುದು ಕಂಡುಬರುತ್ತದೆ.

ಹಾಗಾಗಿ ಭಾರತದಲ್ಲಿ ಮಹಿಳಾ ಚಳುವಳಿಯನ್ನು ಅರ್ಥೈಯಿಸುವಾಗ, ಅದು ಅರ್ಥೈಸುವವರ ಗ್ರಹಿಕೆಯನ್ನು ಅವಲಂಬಿಸಿರುತ್ತದೆ. ತಾತ್ವಿಕ ನಿಲುವು ಹಾಗೂ ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ಭಾರತದಲ್ಲಿ ಮಹಿಳೆಯರ ಶೋಷಣೆಯನ್ನು ವಿವರಿಸುವ ಒಂದೇ ವ್ಯಾಖ್ಯಾನವನ್ನು ನೋಡಲು ಸಾಧ್ಯವಿಲ್ಲ. ಹಾಗೇ ಒಂದೇ ವರ್ಗದ ಮಹಿಳೆಯರನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭಾರತದ ಮಹಿಳೆಯರನ್ನು ಒಂದೇ ಸ್ವರೂಪದ ಹಿನ್ನೆಲೆಯಲ್ಲಿ ವರ್ಗೀಕರಿಸಲು ಸಾಧ್ಯವಿಲ್ಲ. ಸಾಮಾಜಿಕವಾಗಿ ಅವರು ವಿಭಿನ್ನವಾದ ನೆಲೆಯಲ್ಲಿ ನೆಲೆಯೂರಿರುವುದನ್ನು ಕಾಣಬಹುದು. ಆದುದರಿಂದ ಅದರ ಸಾಮಾಜಿಕ ಸ್ಥಾನಮಾನದ ಹಿನ್ನೆಲೆಯಲ್ಲಿ ಅವರ ಶೋಷಣೆಯ ಹಂತ ಹಾಗೂ ಅವರ ನೋವನ್ನು ಅನುಭವಿಸುವ ರೀತಿಯಲ್ಲು ವ್ಯತ್ಯಾಸಗಳು ಕಂಡುಬರುತ್ತವೆ. ಹಾಗಾಗಿ ಮಹಿಳಾ ಶೋಷಣೆಯ ವಿಶ್ಲೇಷಣೆಯಲ್ಲಿ, ಪ್ರತಿಕ್ರಿಯೆಯಲ್ಲಿ ಹೋರಾಟದ ತಂತ್ರಗಳನ್ನು ರೂಪಿಸುವಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಹಾಗಾಗಿ ಮಹಿಳೆಯರು ಸಂಘಟಿತ, ಅಸಂಘಟಿತ ಕಾರ್ಮಿಕ ಹೋರಾಟ, ರೈತ ಹೋರಾಟದ ಭಾಗವಾಗಿದ್ದಾರೆ. ಈ ಚಳುವಳಿಗಳು ಮಹಿಳೆಯರನ್ನು ಬಹಳಷ್ಟು ಸಂಖ್ಯೆಯಲ್ಲಿ ಆಕರ್ಷಿಸಿದ್ದರೂ, ಈ ಚಳುವಳಿಗಳು ಎಷ್ಟರ ಮಟ್ಟಿಗೆ ಮಹಿಳೆಯರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದೆ, ಅಥವಾ ಇಲ್ಲವೆಂಬುದರ ಆಧಾರದ ಮೇಲೆ ಅವುಗಳನ್ನು ಮಹಿಳಾ ಚಳುವಳಿ ಎಂದು ಅರ್ಥೈಸಬಹುದಾಗಿದೆ. ಸಾಮಾಜಿಕ ಬದಲಾವಣೆಯಾಗಬೇಕಾದಂತಹ ಭಾರತದಂತಹ ರಾಷ್ಟ್ರದಲ್ಲಿ ಜನತೆಯ ಹೋರಾಟದೊಂದಿಗೆ ಮಹಿಳಾ ಸಂಘಟನೆಗಳು ಕೈ ಜೋಡಿಸಬೇಕಾಗುತ್ತದೆ. ಮಹಿಳಾ ಚಳುವಳಿಗಳಿಗೆ ಈ ಅಗತ್ಯ ಕಂಡುಬಂದಿರುವುದರಿಂದ ಮಹಿಳಾ ಚಳುವಳಿಯ ಹೊರಗಡೆ ಹಾಗೂ

ಒಳಗಡೆ, ಚರ್ಚೆ, ವಿಶ್ಲೇಷಣೆ ಕಂಡುಬರುತ್ತದೆ. ಈ ಚಳುವಳಿಗಳ ನಡುವಿರಬೇಕಾದ ಸಂಬಂಧ ಹಾಗೂ ಈ ಹೋರಾಟಗಳ ನಡುವೆ ಇರುವ ಅಸಮಾನತೆಯ ಪ್ರಶ್ನೆ ವಿಶೇಷವಾಗಿ ಚರ್ಚಿತವಾಗಿದೆ. ಮಹಿಳಾ ಅನುಭವ ಹಾಗೂ ದೃಷ್ಟಿಕೋನವನ್ನು ಒಳಗೊಳ್ಳದ ಚಳುವಳಿಯು ಸಂಪೂರ್ಣ ಚಳುವಳಿಯಾಗಲು ಸಾಧ್ಯವಿಲ್ಲ. ಸಾಮಾಜಿಕ ಹೋರಾಟಗಳೊಂದಿಗೆ ಪ್ರಜ್ಞಾಪೂರ್ವಕವಾಗಿ ಗುರುತಿಸಿಕೊಳ್ಳುವ ಹಾಗೂ ಚಳುವಳಿಯ ಪ್ರತಿಯೊಂದು ಹಂತದಲ್ಲಿ ಮಹಿಳೆಯರ ಅನುಭವಗಳನ್ನು ಒಳಗೊಳ್ಳುವುದು ಅತ್ಯಗತ್ಯ. ಇದು ರಾಷ್ಟ್ರೀಯ ಮಹಿಳಾ ಸಮಾವೇಶದಿಂದ ಸ್ವಾಯತ್ತ ಮಹಿಳಾ ರಾಷ್ಟ್ರೀಯ ಸಮಾವೇಶದ ಬದಲಾವಣೆಗೆ ಮುಖ್ಯ ಪ್ರೇರಣೆಗಳು.

ರಾಷ್ಟ್ರೀಯ ಮಹಿಳಾ ಸಮಾವೇಶ ಈ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ 1960, 1970ರ ದಶಕದ ಮಹಿಳಾ ಚಳುವಳಿಯ ಹಂತವನ್ನು ಪರಿಶೀಲಿಸಬೇಕಾಗುತ್ತದೆ. ಸ್ವಾಯತ್ತ ಮಹಿಳಾ ಸಂಘಟನೆ ಎಂದರೇನು? ಇವು ಅಸ್ತಿತ್ವಕ್ಕೆ ಬರಲು ಕಾರಣವೇನು? ಇವುಗಳ ಪ್ರಮುಖ ಲಕ್ಷಣಗಳೇನು? ಮಹಿಳಾ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಇವುಗಳ ಪಾತ್ರವೇನು? ಇತರ ಸಂಘಟನೆಗಳಿಗಿಂತ ಇವು ಹೇಗೆ ಭಿನ್ನವಾಗಿವೆ? ಮಹಿಳೆಯರನ್ನು ಒಳಗೊಂಡು ಸಾಮಾಜಿಕ ಬದಲಾವಣೆಗಾಗಿ ಹೋರಾಟ ನಡೆಸುವ ಗುಂಪುಗಳಿಗಿಂತ ಇವು ಹೇಗೆ ಭಿನ್ನವಾಗಿವೆ?

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ವಿಶೇಷವಾಗಿ ಹಿಂದೂ ಕೋಡ್ ಮಸೂದೆಯ ನಂತರ ಐದು ಕಾಯಿದೆಗಳನ್ನಾಗಿ ವಿಂಗಡಿಸಬಹುದು. ಸಮಾನ ನಾಗರೀಕ ಸಂಹಿತೆಯ ಬಗ್ಗೆ ತೆಗೆದುಕೊಳ್ಳಬೇಕಾದ ನಿರ್ಧಾರವನ್ನು ಮುಂದೂಡಲಾಯಿತಾದರೂ, ಈ ಅವಧಿಯು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ, ಸಮಸ್ಯೆಗಳಿಗೆ ಒತ್ತು ನೀಡುವ ದೃಷ್ಟಿಯಿಂದ ಹೆಚ್ಚು ಕ್ರಿಯಾತ್ಮಕವಾಗಿರಲಿಲ್ಲ. ಆದರೆ 1970ರ ಹಾಗೂ 80ರ ದಶಕದಲ್ಲಿ ಮಾತ್ರ ಮೂಲಭೂತ ಬದಲಾವಣೆಗೆ ಒತ್ತು ನೀಡಿ, ವಿಭಿನ್ನವಾದ ಸ್ವರೂಪದಲ್ಲಿ ಮಹಿಳಾ ಸಮಸ್ಯೆಗಳನ್ನು ಸಾರ್ವಜನಿಕರ ಗಮನಕ್ಕೆ ಬೀಳುವಂತೆ ಮಾಡಲಾಯಿತು. 1960ರ ಮಧ್ಯದಲ್ಲಿ ಎರಡು ಪ್ರಮುಖ ಬೆಳವಣಿಗೆಗಳನ್ನು ಗುರುತಿಸಬಹುದು. ಒಂದು ಅಭಿವೃದ್ಧಿಯ ಮಾದರಿಯನ್ನು ಕುರಿತು ಹಾಗೂ ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರ, ಬಡತನ, ಆರ್ಥಿಕ ಅಸಮಾನತೆ, ಪರಿಸರ ನಾಶ, ಮುಂತಾದವುಗಳ ಬಗ್ಗೆ ಚರ್ಚೆ ಪ್ರಾರಂಭವಾದುದು. ರಾಜ್ಯದ ಆರ್ಥಿಕ ಧೋರಣೆ, ಹಾಗೂ ರಾಜಕೀಯ ವ್ಯಕ್ತಿಗಳ ಬಗ್ಗೆ ಭ್ರಮನಿರಸನಗೊಂಡ ಯುವಕರು ರಾಜಕೀಯ ಕ್ಷೇತ್ರಕ್ಕೆ ಕಾಲಿಡತೊಡಗಿದರು. ಈ ವಿದ್ಯಾರ್ಥಿ ಯುವಕರು ಮಾರ್ಕ್ಸ್‌ವಾದಿ ಪಕ್ಷಕ್ಕೆ, ಕೆಲವರು ಸ್ವತಂತ್ರ ಗುಂಪುಗಳು, ಕೆಲವರು ನಕ್ಸಲ್‌ವಾದೀ ಗುಂಪುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳತ್ತೊಡಗಿದರು. ಬಿಹಾರ, ಬೆಂಗಾಲ, ಆಂಧ್ರ ಪ್ರದೇಶ ಮುಂತಾದ ಭಾಗದಲ್ಲಿ ರೈತರನ್ನು ಹಾಗೂ ಆದಿವಾಸಿಗಳನ್ನು ಸಂಘಟಿಸತೊಡಗಿದರು. ಮಹಾರಾಷ್ಟ್ರ ಹಾಗೂ ಗುಜರಾತ್, ಬಿಹಾರದಲ್ಲಿ ಬೆಲೆ ಏರಿಕೆ ಹಾಗೂ ಭ್ರಷ್ಟಾಚಾರದ ವಿರುದ್ಧ ಚಳುವಳಿಗಳು ನಡೆದವು. ದಲಿತರು, ಆದಿವಾಸಿ ಜನರು ಹಾಗೂ ಬೆಟ್ಟದ ತಪ್ಪಲಿನಲ್ಲಿ ವಾಸವಾಗಿರುವ ಜನರು ಸ್ವಯಂಸ್ಫೂರ್ತಿಯಿಂದ ಹೋರಾಟಗಳನ್ನು ನಡೆಸತೊಡಗಿದರು. ಈ ತರಹದ ಬಹುಪಾಲು ಹೋರಾಟಗಳು ರಾಜಕೀಯ ಪಕ್ಷದಿಂದ ಭ್ರಮನಿರಸನಗೊಂಡ ಜನರಿಂದ ರೂಪಿತಗೊಂಡವು. ಸಂಘಟನೆಯ ಪರ್ಯಾಯ ರಚನೆಯ ಬಗ್ಗೆ ಪ್ರಯೋಗಗಳನ್ನು ನಡೆಸುವ ಅಗತ್ಯವನ್ನು ಕಂಡುಕೊಂಡರು. ಸಮಾಜದ ರಾಚನಿಕ ಬದಲಾವಣೆಯ ಬಗ್ಗೆ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಒತ್ತು ನೀಡಲಾಗುತ್ತಿತ್ತು. ಬಿಹಾರದಲ್ಲಿ ಜಯಪ್ರಕಾಶ ನಾರಾಯಣರವರು ಸಂಪೂರ್ಣ ಕ್ರಾಂತಿಗೆ ನೀಡಿದ ಕರೆಯು 'ಅಧಿಕಾರದ' ಕಲ್ಪನೆಯ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳಲಾಯಿತು. ಈ ಹಂತದಲ್ಲಿ ಕುಟುಂಬದಲ್ಲಿ ಕೆಲಸದ ಹಂಚಿಕೆ, ಕುಟುಂಬದೊಳಗಿನ ಹಿಂಸೆ, ಕೆಲವೇ ಪುರುಷರು ಹಾಗೂ ಸ್ತ್ರೀಯರು ಸಂಪನ್ಮೂಲಗಳ ಮೇಲೆ ಹಿಡಿತವನ್ನು ಹೊಂದಿರುವುದನ್ನು ಸಹ ಕುರಿತು ಪ್ರಶ್ನಿಸಲಾಯಿತು. ಛಾತ್ರ ಯುವ ಸಂಘರ್ಷ ವಾಹಿನಿ ಮೊದಲ ಬಾರಿಗೆ 'ಪಿತೃಪ್ರಧಾನತೆ'ಯ ಬಗ್ಗೆ ವಿಮರ್ಶಾತ್ಮಕ ನಿಲುವನ್ನು ವ್ಯಕ್ತಪಡಿಸಿದ ಬಹುಮುಖ್ಯ ಸಂಘಟನೆಗಳಲ್ಲಿ ಒಂದು.

ಈ ಸಂಘಟನೆಯ ಬೋಧ ಗಯಾ ಮಾತಾ ಚಳುವಳಿಯ ಮೂಲಕ ಹಳ್ಳಿಗಳಲ್ಲಿ ರೈತರಿಗೆ ಭೂಮಿಯ ಒಡೆತನ ದೊರಕಿಸಿ ಕೊಡುವ ಹೋರಾಟದಲ್ಲಿ ಸ್ತ್ರೀಯರಿಗೆ ಭೂಮಿಯ ಮೇಲಿನ ಒಡೆತನದ ಹಕ್ಕನ್ನು ಕುರಿತು ಪ್ರಶ್ನೆಗಳನ್ನು ಎತ್ತಲಾಯಿತು. ಈ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಆಕೆಯ ಅವಲಂಬಿತ ಸ್ಥಾನಮಾನದ ಹಿನ್ನೆಲೆಯಲ್ಲಿ ಚರ್ಚಿಸಲಾಗುತ್ತಿತ್ತು. ಗ್ರಾಮೀಣ ಸ್ತ್ರೀಯರಿಗೆ ಸಂಬಂಧಪಟ್ಟ ಬೋಧ ಗಯಾ ಹೋರಾಟ ಪ್ರಮುಖವಾದ ಪ್ರಥಮ ಹೋರಾಟವಾಗಿದೆ.

ಈ ಹೋರಾಟ ಹೊಸಮಾದರಿಯ ಹೋರಾಟದ ವಿವಿಧ ಹೊಸ ಹಂತಗಳ ಬೆಳವಣಿಗೆಗೆ ಬಹುಮುಖ್ಯವಾದ ಕಾಣಿಕೆಯನ್ನು ನೀಡಿತು. ಇತರ ಚಳುವಳಿಗಳಲ್ಲಿ ಮಹಾರಾಷ್ಟ್ರದಲ್ಲಿ ನಡೆದ ಶಹದಾ ಚಳುವಳಿ ಬಹುಮುಖ್ಯ ಚಳುವಳಿಯಾದುದು. ಈ ಚಳುವಳಿಯು ಪ್ರಾರಂಭದಲ್ಲಿ ಭೂಮಿ ಸಮಸ್ಯೆಯನ್ನು ಕುರಿತು ಹೋರಾಟ ನಡೆಸಿದ್ದರೂ ಕ್ರಮೇಣ ಮಹಿಳೆಯರ ಶೋಷಣೆಗೆ ಸಂಬಂಧಪಟ್ಟಂತೆ ಬಹುಮುಖ್ಯವಾದ ಬೆಳವಣಿಗೆಗೆ ಕಾರಣವಾಯಿತು. ಕುಡಿತದ ವಿರುದ್ಧ ಮಹಿಳೆಯರ ಹೋರಾಟ ಹಾಗೂ ಹೆಂಡತಿಯನ್ನು ಹೊಡೆಯುವ ಸಮಸ್ಯೆಯನ್ನು ಸಾರ್ವಜನಿಕಗೊಳಿಸಿದ್ದು ಅತ್ಯಂತ ಪ್ರಮುಖವಾದ ಮೈಲಿಗಲ್ಲಾಗಿತ್ತು.

1970ರ ಅವಧಿಯಲ್ಲಿ ಮಹಿಳೆಯರನ್ನು ಒಳಗೊಂಡ ಇತರ ಚಳುವಳಿಗಳು ಕ್ರಿಯಾತ್ಮಕವಾಗಿದ್ದವು. ಚಿಪ್ಕೊ ಚಳುವಳಿಯು ಮಹಿಳೆಯರ ಸಮಸ್ಯೆಯನ್ನೂ, ಉರುವಲು, ಮೇವು, ಪರಿಸರ ನಾಶದ ಸಮಸ್ಯೆಯನ್ನು ತಳುಕು ಹಾಕಿಕೊಂಡಿರುವುದನ್ನು ಗುರುತಿಸಿತು. ಗುಜರಾತಿನ ಮಹಿಳಾ ಸ್ವಯಂ ಉದ್ಯೋಗ ಅಸೋಸಿಯೇಷನ್, ಮಹಿಳೆಯರ ಬ್ಯಾಂಕ್ ಹಾಗೂ ಸಹಕಾರ ಸಂಘಗಳ ಬೆಳವಣಿಗೆಯನ್ನು ಕೇಂದ್ರೀಕರಿಸಿತು. 1977ರಲ್ಲಿ ಮಧ್ಯಪ್ರದೇಶದಲ್ಲಿ ಛತ್ತೀಸ್‌ಘಡ್, ಶ್ರಮಿಕ ಸಂಘಟನೆಗಳು ಇತರ ಬೇಡಿಕೆಗಳೊಂದಿಗೆ ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕುವ ಹಾಗೂ ಸಮಾನ ವೇತನದ ಪ್ರಶ್ನೆಯನ್ನು ಎತ್ತಲಾಯಿತು. ಆಂಧ್ರ ಪ್ರದೇಶದಲ್ಲಿ ಮಹಿಳೆಯರನ್ನು ಒಳಗೊಂಡ, ಪಿ.ಓ.ಡಬ್ಲ್ಯೂ. ಮಾರ್ಕ್ಸ್‌ವಾದಿ ಚಳುವಳಿಯು ಮಹಿಳೆಯರ ವಿಶಿಷ್ಟ ಸಮಸ್ಯೆಯ ಸುತ್ತ ಮಹಿಳೆಯರನ್ನು ಸಂಘಟಿಸುವ ಅಗತ್ಯವನ್ನು ಕಂಡುಕೊಂಡಿತು. ಈ ಸಂದರ್ಭದಲ್ಲಿ ವಿವಿಧ ಪ್ರಮುಖ ಮಹಿಳಾ ಸಂಘಟನೆಗಳು ಹುಟ್ಟಿಕೊಂಡವು. ಪೂನಾದಲ್ಲಿ ಪುರೋಗಾಮಿ ಸಂಘಟನೆ, ಮುಂಬಯಿಯಲ್ಲಿ ಸ್ತ್ರೀಮುಕ್ತಿ ಸಂಘಟನೆ ಮುಂತಾದವು ಪ್ರಮುಖವಾದವು. ಮಹಿಳಾ ಸೈನಿಕ ದಳ ಸಂಘಟನೆ, ಜಾತಿ ವಿರೋಧಿ ದಲಿತ ಚಳುವಳಿ ಹಾಗೂ ಸ್ತ್ರೀ ವಾದಕ್ಕು ಇರುವ ಸಂಬಂಧವನ್ನು ಕಲ್ಪಿಸಲು ಪ್ರಾರಂಭಿಸಿತು. ಮಹಿಳೆಯರ ಶೋಷಣೆಯ ಬೇರುಗಳು ಲೈಂಗಿಕ ಶ್ರಮ ವಿಭಜನೆ ಹಾಗೂ ಸಾಂಸ್ಕೃತೀಕರಣದಲ್ಲಿರುವುದನ್ನು ಈ ಸಂಘಟನೆಗಳೆಲ್ಲಾ ಒತ್ತು ನೀಡಿದವು.

ಮಧ್ಯಮ ವರ್ಗದ ಹಾಗೂ ಶ್ರಮಿಕ ವರ್ಗದ ಮಹಿಳೆಯರು ಈ ಚಳುವಳಿಗಳಲ್ಲಿ ತಮ್ಮನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿದ್ದರಲ್ಲದೆ, ತಾವು ಮಹಿಳೆಯರ ಒಂದು ಗುಂಪಾಗಿ ಶೋಷಣೆಗೆ ಒಳಗಾಗಿರುವುದರ ಬಗ್ಗೆ ಅರಿವು ಮೂಡಿಸಿಕೊಂಡರು. 1970ರ ಅಂತ್ಯದಲ್ಲಿ ಮಾಧ್ಯಮಗಳು ಸ್ತ್ರೀ ಸಮಸ್ಯೆಗಳ ಪ್ರಚಾರ, ವಿದೇಶದಲ್ಲಿನ ಮಹಿಳಾ ಚಳುವಳಿ, ಮಹಿಳಾ ದಶಕದ ಘೋಷಣೆ, ಮಹಿಳಾ ಸ್ಥಾನಮಾನ ಕುರಿತ ವರದಿ, ಮಥುರಾ ಅತ್ಯಾಚಾರ ಪ್ರಕರಣ ಇನ್ನಿತರ ಅಂಶಗಳು 1970ರ ಅಂತ್ಯದಲ್ಲಿ ಕೇಂದ್ರೀಕೃತ ಚಟುವಟಿಕೆಗಳಾಗಿ ಹಾಗೂ ಮಹಿಳಾ ಸಮಸ್ಯೆಗಳಿಗೆ ಒತ್ತು ನೀಡಿದವು.

ಸ್ವಾಯತ್ತ ಮಹಿಳಾ ಸಂಘಟನೆಗಳ ಉದಯ

ಮಹಿಳೆಯರಲ್ಲಿ ಮೂಡಿಬಂದ ಜಾಗೃತಿಯಿಂದಾಗಿ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಅಸ್ತಿತ್ವದಲ್ಲಿರುವ ಮಹಿಳಾ ಸಂಘಟನೆಗಳು ತಮ್ಮ ಮಹಿಳಾ ವಿಭಾಗಗಳನ್ನು ಬಲಪಡಿಸಲು ಮಹಿಳಾ ಸಮಸ್ಯೆಗಳನ್ನು ತೆಗೆದುಕೊಳ್ಳತೊಡಗಿದವು. ಕೆಲವು ಮಹಿಳೆಯರು ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷ ಸಂಘಟನೆಯೊಳಗಡೆ, ಕೆಲಸ ಮಾಡುವ ಆಯ್ಕೆಯನ್ನು ಮಾಡಿಕೊಂಡರೆ ಕೆಲವು ಮಹಿಳೆಯರು ಸ್ವಾಯತ್ತವಾಗಿ ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಂಡರು. 'ಮಹಿಳೆಯರು' ಮಾತ್ರ ಎಂಬ ಬೇಡಿಕೆಯೊಂದಿಗೆ, ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರನ್ನು ಆಕರ್ಷಿಸುವ ಕೆಲವು ಗುಂಪುಗಳ ಸ್ವಾಯತ್ತತೆಯ ಹುಡುಕಾಟ ಭಿನ್ನವಾಗಿತ್ತು. ಈ ಗುಂಪುಗಳು ಸ್ವಾಯತ್ತತೆಯ ಪ್ರಶ್ನೆಯ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ಹೊಂದಿರಲಿಲ್ಲ. ಬಹುಪಾಲು ಸಂಘಟನೆಗಳಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗುತ್ತಿತ್ತು. ನೀಡಬೇಕಾದ ಗಮನವನ್ನು ನೀಡುತ್ತಿರಲಿಲ್ಲ. ಆದುದರಿಂದ ಸ್ವಾಯತ್ತತೆಯು ಮುಖ್ಯವಾದ ಪ್ರಶ್ನೆಯಾಯಿತು, ಕೆಲವು ಸಂಘಟನೆಗಳು ಮಹಿಳೆಯರ ಸಮಸ್ಯೆಗಳತ್ತ ಗಮನ ನೀಡಿದರೂ ಅದು 'ಪೋಷಕ' ಧೋರಣೆಯಿಂದ ಕೂಡಿತ್ತು.

ತಾತ್ವಿಕ ಜಡತ್ವ, ಹೊಸದೃಷ್ಟಿಕೋನದಿಂದ ಮಹಿಳೆಯರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವಲ್ಲಿನ ನಿರಾಸಕ್ತಿ, ಮಹಿಳೆಯರ ಅನುಭವಗಳನ್ನು ಒಳಗೊಳ್ಳಲು ಹೋರಾಟದ ತಂತ್ರಗಳ ಬದಲಾವಣೆ ಮುಂತಾದವು ಮಹಿಳೆಯರಲ್ಲಿ ಭ್ರಮನಿರಸನವನ್ನು ಉಂಟು ಮಾಡಿದವು. ಬಹುಪಾಲು ಎಡಪಂಥೀಯ ಸಂಘಟನೆಗಳಲ್ಲಿ ವರ್ಗ ಹಾಗೂ ಜಾತಿಯ ರಚನೆಯ ಒಳಗಡೆ ಮಹಿಳೆಯರ ವಿಶಿಷ್ಟವಾದ ಶೋಷಣೆಯನ್ನು ಗುರುತಿಸುವುದಿಲ್ಲ. ಈ ರೀತಿಯ ಮಹಿಳಾ ವಿಶ್ಲೇಷಣೆಯನ್ನು ಒಡೆಯುವ ತಂತ್ರ ಎಂದು ಆರೋಪಿಸಲಾಯಿತು. ಗಾಂಧಿವಾದ ಹಾಗೂ ಮಾರ್ಕ್ಸ್‌ವಾದ ಮಹಿಳಾ ವಿಶ್ಲೇಷಣೆಗೆ ಪ್ರತಿಕ್ರಿಯೆಯಾಗಿ ಸ್ವಾಯತ್ತ ಮಹಿಳಾ ಸಂಘಟನೆಗಳು ಈ ಹಂತದಲ್ಲಿ

ಮೂಡಿಬಂದವು. ಈ ಗುಂಪುಗಳು ರ್‍ಯಾಡಿಕಲ್ ರಾಜಕೀಯ ದೃಷ್ಟಿಕೋನ ರೂಪಿಸಿಕೊಳ್ಳುವುದರ ಜೊತೆಯಲ್ಲಿಯೇ ಹೊಸ ಮಹಿಳಾ ವಿಶ್ಲೇಷಣೆಯನ್ನು ಪ್ರಚುರ ಪಡಿಸಿದವು. ಮಥುರಾ ಹಾಗೂ ಮಾಯಾತ್ಯಾಗಿಯ ಅತ್ಯಾಚಾರ ಪ್ರಕರಣಗಳು ಬಹುಮುಖ್ಯವಾದ ಪಾತ್ರವನ್ನು ವಹಿಸಿದವು. ಈ ಎರಡು ಪ್ರಕರಣಗಳು ಕಸ್ಟೋಡಿಯಲ್ ಅತ್ಯಾಚಾರ ಪ್ರಕರಣಗಳಾಗಿದ್ದವು.

ಸ್ವಾಯತ್ತ ಮಹಿಳಾ ಸಂಘಟನೆಗಳ ವಿಶಿಷ್ಟ ಲಕ್ಷಣವೆಂದರೆ, ಈ ಗುಂಪುಗಳಲ್ಲಿ ವಿದ್ಯಾವಂತ, ನಗರವಾಸಿಗಳಾದ ಮಧ್ಯಮವರ್ಗದ ಮಹಿಳೆಯರು ವಿಶೇಷವಾಗಿ ಎಡಪಂಥೀಯ ಗುಂಪುಗಳಿಂದ ಬಂದ ಮಹಿಳೆಯರಿದ್ದರೂ, ಎಡಪಕ್ಷಗಳು ಈ ಮಹಿಳೆಯರ ದೃಷ್ಟಿಕೋನವನ್ನು ಗುರುತಿಸದೇ ಇದ್ದುದರಿಂದ ಪಕ್ಷವನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ನೋಡಿದರಲ್ಲದೆ, ಪಕ್ಷದಿಂದ ದೂರವಾಗತೊಡಗಿದರು. ಅವರು ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಂಡರು. ಶ್ರೇಣೀಕೃತವಲ್ಲದ ರಚನೆ, ಸಾಮೂಹಿಕ ಕಾರ್ಯ ನಿರ್ವಹಣೆ, ಸಾಂಸ್ಥಿಕ ಹಣಕಾಸು ನಿರಾಕರಣೆ ಇವು ಮುಖ್ಯವಾದ ಅಂಶಗಳು. ಇವು ಮುಖ್ಯವಾಗಿ ನಗರವಾಸೀ ಗುಂಪುಗಳಾಗಿದ್ದವು. ಮಹಿಳೆಯರ ಮೇಲೆ ನಡೆಯುತ್ತಿದ್ದ ಹಿಂಸೆಯ ವಿರುದ್ಧ ಮಹಿಳೆಯರನ್ನು ಸಂಘಟಿಸತೊಡಗಿದರು. ಸಂಕಷ್ಟದಲ್ಲಿರುವ ಮಹಿಳೆಯರಿಗಾಗಿ ಆಶ್ರಯಧಾಮ ಹಾಗೂ ಕೌನ್ಸಿಲಿಂಗ್ ಸೆಂಟರ್‌ಗಳನ್ನು ತೆರೆಯಲಾಯಿತು. ಭಾರತದಲ್ಲಿ ಮಹಿಳೆಯರಲ್ಲಿನ ಭಿನ್ನತೆಯನ್ನು ಗುರುತಿಸಿ ಮಹಿಳೆಯರ ಸಾಮೂಹಿಕ ಅನುಭವಗಳಿಗೆ ಒತ್ತು ನೀಡಲಾಯಿತು. ಕಾರ್ಯಕರ್ತರು ಒಂದೇ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದವರಾಗಿದ್ದರೂ, ತಾತ್ವಿಕ ಭಿನ್ನಾಭಿಪ್ರಾಯಗಳಿದ್ದ ಪ್ರಯುಕ್ತ ಅದರೊಳಗಡೆ ನಿರಂತರವಾದ ಚರ್ಚೆ, ವಾಗ್ವಾದ, ಸಂಘರ್ಷಗಳು ನಡೆಯುತ್ತಿದ್ದವು.

ಸ್ವಾಯತ್ತ ಮಹಿಳಾ ಸಂಘಟನೆಗಳು ರಾಜಕೀಯ ಪಕ್ಷ ಹಾಗೂ ಚಳುವಳಿಗಳೊಂದಿಗೆ ಕೆಲಸ ಮಾಡಿದ ಅನುಭವದ ಭ್ರಮ ನಿರಸನ ಹಾಗೂ ಹತಾಷೆಯಿಂದ ಬೆಳೆದು ಬಂದವು. ಕಾರ್ಮಿಕ ಸಂಘಟನೆಗಳು ಮಹಿಳೆಯರ ವಿಶಿಷ್ಟ ಸಮಸ್ಯೆಯನ್ನು ಗುರುತಿಸಲು ನಿರಾಕರಿಸಿದ್ದರ ಜೊತೆಗೆ ಮಹಿಳೆಯರ ಸಮಸ್ಯೆಯನ್ನು ಹಿನ್ನೆಲೆಗೆ ತಳ್ಳಲಾಯಿತು. ಆದರೆ ಈ ಕಾರಣದಿಂದ ಸ್ವಾಯತ್ತ ಮಹಿಳಾ ಸಂಘಟನೆಗಳು ಇವುಗಳ ನಡುವೆ ಇರಬೇಕಾದ ಸಂಬಂಧವನ್ನು ಕಡಿದುಕೊಳ್ಳಲಿಲ್ಲ. ಸಮಾನತೆಯ ಆಧಾರದ ಮೇಲೆ ಈ ಸಂಘಟನೆಗಳು ಹಾಗೂ ಚಳುವಳಿಗಳೊಂದಿಗೆ ಸಂಬಂಧ ಕಲ್ಪಿಸುವುದು ಸ್ವಾಯತ್ತ ಸಂಘಟನೆಗಳ ದೃಷ್ಟಿಯಲ್ಲಿ ಬಹುಮುಖ್ಯವಾದ ಅಂಶವಾಗಿತ್ತು. ಶೋಷಿತರ ಹೋರಾಟದಿಂದ ಪ್ರತ್ಯೇಕಪಡಿಸುವುದು ಸಾಧ್ಯವಿಲ್ಲವೆಂಬ ಅರಿವು ಈ ಸಂಘಟನೆಗಳಲ್ಲಿ ಇತ್ತು. ಪ್ರಾರಂಭದಲ್ಲಿ ಈ ಸಂಘಟನೆಗಳು ತಮ್ಮನ್ನು ತಾವು ಅರ್ಥೈಸಿಕೊಳ್ಳುವಲ್ಲಿ, ಇತರೆ ಸಂಘಟನೆಗಳಲ್ಲಿ ಮಹಿಳಾ ಪ್ರಶ್ನೆಯನ್ನು ಕುರಿತು ಚರ್ಚಿಸುವುದು ಅಥವಾ ಚರ್ಚಿಸದೇ ಇರುವುದು, ಮಹಿಳಾ ಶೋಷಣೆಯನ್ನು ಹೇಗೆ ನೋಡಬೇಕು ಮುಂತಾದ ಚರ್ಚೆಯನ್ನು ನಡೆಸಲಾಯಿತು.

ಈ ಹಿನ್ನೆಲೆಯಲ್ಲಿ 1980ರಲ್ಲಿ ಬಾಂಬೆಯಲ್ಲಿ ನಡೆದ ರಾಷ್ಟ್ರೀಯ ಸ್ವಾಯತ್ತ ಮಹಿಳಾ ಗುಂಪುಗಳ ಸಮಾವೇಶವೆಂದು ಗುರುತಿಸಲಾಗಿದೆ. ಈ ರಾಷ್ಟ್ರೀಯ ಸಮಾವೇಶವನ್ನು ಅತ್ಯಾಚಾರ ವಿರುದ್ಧ ಪ್ರತಿಭಟನೆಯನ್ನು ನಡೆಸುವ ವಿರುದ್ಧ ಸಂಘಟಿಸಲಾಗಿತ್ತು. ಅತ್ಯಾಚಾರ ವಿರೋಧಿ ಮಸೂದೆಯನ್ನು ಚರ್ಚಿಸಲು ವಿಶೇಷವಾದ ಒಂದು ಗೋಷ್ಠಿಯನ್ನು ಕರೆಯಲಾಗಿತ್ತು. ಈ ಸಮಾವೇಶದಲ್ಲಿ ಇತರ ವಿಷಯಗಳನ್ನು ಚರ್ಚಿಸಲಾಯಿತು. ಇದರಲ್ಲಿ ಬಹುಮುಖ್ಯವಾದ ಮಹಿಳಾ ಗುಂಪು ಹಾಗೂ ಪಕ್ಷ ಆಧಾರಿತ ಜನತೆಯ ಸಂಘಟನೆಗಳೊಂದಿಗೆ ಯಾವ ರೀತಿಯ ಸಂಬಂಧವಿರಬೇಕು ಎಂಬುದು ಬಹುಮುಖ್ಯ ಪ್ರಶ್ನೆಯಾಗಿತ್ತು. ಮಹಿಳಾ ಚಳುವಳಿಯ ಸ್ವರೂಪವನ್ನು ಸಹ ಚರ್ಚಿಸಲಾಯಿತು. ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ, ಕರ್ನಾಟಕ ಮತ್ತು ತಮಿಳುನಾಡುಗಳಿಂದ 38 ಸಂಘಟನೆಯ 200 ಜನ ಮಹಿಳೆಯರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಬಾಂಬೆಯ ಫೋರಂ ಎಗೆನೆಸ್ಟ್ ರೇಪ್, ಆಂಧ್ರ ಪ್ರದೇಶದ ಸ್ತ್ರೀ ಶಕ್ತಿಯವರು ಜೊತೆಗೂಡಿ ಈ ಸಮಾವೇಶವನ್ನು ಏರ್ಪಡಿಸಿದ್ದರು.

ಎರಡನೇ ರಾಷ್ಟ್ರೀಯ ಸಮಾವೇಶ :

1980ರಲ್ಲಿ ಹಲವಾರು ಬದಲಾವಣೆಗಳು ಉಂಟಾದವು. ನಗರ ಪ್ರದೇಶಗಳಲ್ಲಿ ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು, ಕುಟುಂಬಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಹಿಂಸೆಯನ್ನು ವಿರೋಧಿಸಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳು ಕಂಡುಬಂದವು. ಮಹಿಳೆಯರಿಗೆ ಬೆಂಬಲ ನೀಡುವ, ಸಲಹೆ-ಮಾರ್ಗದರ್ಶನ ನೀಡುವ ಉದ್ದೇಶದಿಂದ ಮಹಿಳಾ ಕೇಂದ್ರಗಳು ಹುಟ್ಟಿಕೊಂಡವು. ಮಹಿಳಾ ಪತ್ರಿಕೆಗಳು, ಸ್ತ್ರೀವಾದಿ ಬರವಣಿಗೆಗಳು, ಕಿರುಚಿತ್ರಗಳು ಪ್ರಕಟವಾಗತೊಡಗಿದವು. ಇದುವರೆಗೂ ಹುದುಗಿಹೋದ ಅನುಭವಗಳ

ಹುಡುಕಾಟ, ಇತರ ಗುಂಪುಗಳೊಂದಿಗೆ ಜಂಟಿ ಕಾರ್ಯವು ಮುಂತಾದ ಪ್ರಯತ್ನಗಳು ಕಂಡುಬಂದವು. ಬಾಂಬೆಯಲ್ಲಿ ದುಡಿಯುವ ಮಹಿಳೆಯರ ಸಂಘಟನೆ, ಛತ್ತೀಸ್‌ಘಡ್ ಶ್ರಮಿಕ ಸಂಘಟನೆಯ ಅನುಭವ - 1983ರ ನಾರಿ ಸಂಘರ್ಷ ಮೋರ್ಚ್ ಅನುಭವ ಮುಂತಾದವುಗಳಲ್ಲಿ ಈ ಪ್ರಯತ್ನವನ್ನು ಕಾಣಬಹುದು. ಆದರೆ ಎಡಪಂಥೀಯ ಪಕ್ಷದ ವೇದಿಕೆಗಳಲ್ಲಿ ಮಹಿಳೆಯರ ಪ್ರಶ್ನೆಯನ್ನು ಎತ್ತುವುದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಹಾಗಾಗಿ ಮಹಿಳೆಯರು ಎಡಪಂಥೀಯ ಪಕ್ಷದಿಂದ ದೂರವಾಗತೊಡಗಿದರು. ಮಹಿಳಾ ಚಳುವಳಿಯ ಬೆಳವಣಿಗೆ, ಶಿಕ್ಷಣ ಕ್ಷೇತ್ರ, ಪತ್ರಿಕೋದ್ಯಮ, ವೈದ್ಯಕೀಯ ಮುಂತಾದವುಗಳ ಮೇಲೂ ಮಹಿಳಾ ಚಳುವಳಿ ತನ್ನ ಛಾಪನ್ನು ಮೂಡಿಸಿತು. ಮಹಿಳಾ ಅಧ್ಯಯನವು, ವುಮೆನ್ ಡೆವಲಪ್‌ಮೆಂಟ್ ಸ್ಟಡೀಸ್, ದೆಹಲಿಯಲ್ಲಿ, ಬಾಂಬೆಯಲ್ಲಿ SNDT ವಿಶ್ವವಿದ್ಯಾಲಯದ ಪ್ರಾರಂಭಕ್ಕೆ ನಾಂದಿಯಾಯಿತು. ದೈನಂದಿನ ಪತ್ರಿಕೆಗಳು ಮಹಿಳೆಯರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ವಿಭಿನ್ನ ದೃಷ್ಟಿಕೋನದಿಂದ ಚಿತ್ರಿಸಲು ತೊಡಗಿದರು. ಔಷಧಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಿತಲ್ಲದೆ, ಥಿಯರಿ ಹಾಗೂ ಪ್ರಾಕ್ಟೀಸ್ ನಡುವೆ ಇರುವ ಅಂತರವನ್ನು ಕಡಿಮೆ ಮಾಡಿತು. ಮೊಟ್ಟಮೊದಲ ಬಾರಿಗೆ ಮಹಿಳಾ ಚಳುವಳಿಯು ತಾಯ್ತನ ಹಾಗೂ ಶಿಶು ಕಲ್ಯಾಣ ಪರಿಕಲ್ಪನೆಯಲ್ಲಿ ಮೂಲಭೂತ ಬದಲಾವಣೆಯನ್ನು ಉಂಟುಮಾಡಿ, ಸಮಗ್ರ ದೃಷ್ಟಿಕೋನದಿಂದ, ಮಹಿಳಾ ಆರೋಗ್ಯ, ಅವಳ ದೇಹವನ್ನು ನೋಡುತ್ತಿದ್ದ ವಿಧಾನ, ನಿರ್ಲಕ್ಷಿಸಲಾದ ಅವಳ ಆರೋಗ್ಯ, ಕುಟುಂಬಕ್ಕೆ ಹಾಗೂ ಮಹಿಳೆಯರಿಗೆ ಅವರ ಆದ್ಯತೆಯಾಗಿತ್ತು. ಈ ಸಮಸ್ಯೆಗಳನ್ನು ವಿವರವಾಗಿ ವಿಶ್ಲೇಷಿಸಲಾಯಿತು. ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದ್ದ ಮಹಿಳಾ ಆರೋಗ್ಯ ಹಾಗೂ ಸಂತಾನ ನಿಯಂತ್ರಣಗಳ ವಿಧಾನಗಳ ಬಗ್ಗೆ ಮಹಿಳಾ ಸಂಘಟನೆಗಳು ದೀರ್ಘವಾದ ಅಧ್ಯಯನ ನಡೆಸಿದವು.

ರಾಜಕೀಯತೆಯ ಸ್ಪಷ್ಟತೆ ಹಾಗೂ ಭಿನ್ನತೆಯ ಪ್ರಕ್ರಿಯೆ ಸರಳವಾಗಿರದೆ, ಸಂಕೀರ್ಣವಾದುದಾಗಿತ್ತು. ಈ ಚಳುವಳಿಯು ಪ್ರಜ್ಞಾಪೂರ್ವಕವಾಗಿ ಹಾಗೂ ವಿಭಿನ್ನ ವಿಚಾರ ಧಾರೆಗಳನ್ನು ಒಪ್ಪಿಕೊಳ್ಳುತ್ತಿತ್ತು. ಇತಿಹಾಸ, ಐತಿಹಾಸಿಕ ಹಾಗೂ ಧಾರ್ಮಿಕ ಸಂಕೇತಗಳನ್ನು ಪುನರ್ ವ್ಯಾಖ್ಯಾನಿಸುವುದಕ್ಕಿಂತಾ ಸಂಪ್ರದಾಯಿಕ ಮೂಲದ ಶಕ್ತಿಯ ಹುಡುಕಾಟವೇ ಈ ಸಂಘಟನೆಗಳ ಬಹುಮುಖ್ಯವಾದ ಕೆಲಸವಾಗಿತ್ತು. ಐತಿಹಾಸಿಕವಾದ ಸ್ತ್ರೀ ಪ್ರತಿಭಟನೆಯ ನಿದರ್ಶನಗಳ ಹುಡುಕಾಟದ ಮೂಲಕ ಕೆಲವು ಚಳುವಳಿಗಳನ್ನು ಸಮರ್ಥಿಸಿಕೊಳ್ಳಲಾಯಿತು. ತೆಲಂಗಾಣ ಹಾಗೂ ಚಿಪ್ಕೊ ಚಳುವಳಿಯು ಇದಕ್ಕೆ ಉತ್ತಮ ನಿದರ್ಶನಗಳು.

ಡಿಸೆಂಬರ್ 1985ರಲ್ಲಿ ಬಾಂಬೆಯಲ್ಲಿ ಏರ್ಪಡಿಸಲಾಗಿದ್ದ ಎರಡನೆ ರಾಷ್ಟ್ರೀಯ ಸಮಾವೇಶದಲ್ಲಿ ಮಹಿಳಾ ಚಳುವಳಿಯ ದೃಷ್ಟಿಕೋನವನ್ನು ಕೇಂದ್ರೀಕರಿಸಲಾಯಿತು. ಈ ಹಂತದಲ್ಲಿ ಮಹಿಳಾ ಸಂಘಟನೆಗಳು ಹಲವಾರು ರೀತಿಯ ಅನುಭವವನ್ನು ಗಳಿಸಿದ್ದವು. ಸ್ತ್ರೀವಾದವು, ಸಮಾಜ, ಪಿತೃಪ್ರಧಾನ್ಯತೆ, ವರ್ಗ, ಜಾತಿಗಳ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಂಡಿತ್ತಲ್ಲದೆ, ಹೊಸಮಾದರಿಯ ನೋಟವನ್ನು ನೀಡಿತು. ಸ್ತ್ರೀವಾದದ ಘೋಷಣೆ, "ವೈಯಕ್ತಿಕವಾದುದು ರಾಜಕೀಯ, ರಾಜಕೀಯವಾದುದು ವೈಯಕ್ತಿಕ", ಸಾಮಾಜಿಕ ಸಂಸ್ಥೆಗಳೊಳಗಡೆ ಪಿತೃಪ್ರಧಾನ್ಯತೆಯನ್ನು ಎದುರಿಸುವ ಬಹುಮುಖ್ಯ ಸಾಧನವಾಯಿತು. ಇದರ ಮೂಲಕ, ಕುಟುಂಬ, ಧರ್ಮ, ರಾಜ್ಯ, ಅಧಿಕಾರ ಹಾಗೂ ಶ್ರೇಣೀಕೃತ ಪರಿಕಲ್ಪನೆಯನ್ನು ಎದುರಿಸುವಲ್ಲಿ ಬಹುಮುಖ್ಯವಾದ ಅಸ್ತ್ರವಾಯಿತು.

ಈ ಸಮಾವೇಶದಲ್ಲಿ ವರದಕ್ಷಿಣೆ, ಕೌಟುಂಬಿಕ ಹಿಂಸೆ, ವೈಯಕ್ತಿಕ ಕಾನೂನು, ಮಹಿಳಾ ಸೆಂಟರ್‌ಗಳ ಕಾರ್ಯವಿಧಾನ, ಸಂಘಟನೆಗಳ ರಚನೆ, ಸಾಮೂಹಿಕ ಕಾರ್ಯ ನಿರ್ವಹಣೆ ಮುಂತಾದ ವಿಷಯಗಳನ್ನು ಕುರಿತು ಚರ್ಚೆ ನಡೆಸಲಾಯಿತು. ಮಹಾರಾಷ್ಟ್ರ, ಕರ್ನಾಟಕ, ಗುಜರಾತ್, ರಾಜಸ್ಥಾನ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಹರಿಯಾಣ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಿಂದ 50 ಸಂಘಟನೆಯ 380 ಪ್ರತಿನಿಧಿಗಳು ಭಾಗವಹಿಸಿದ್ದರು.

ಮೂರನೇ ರಾಷ್ಟ್ರೀಯ ಸಮಾವೇಶ - ಹಾಗೂ ಹೊಸ ಸವಾಲುಗಳು

ಮಹಿಳಾ ಚಳುವಳಿಯ ಮಹತ್ವದ ಬದಲಾವಣೆಗಳು, 1985ರ ನಂತರ ಹೊಸ ಸವಾಲುಗಳನ್ನು ಚಳುವಳಿಯ ಮುಂದೆ ಇಟ್ಟವು. ಈ ಹಂತದಲ್ಲಿ ಮೂರು ಬಹು ಮುಖ್ಯವಾದ ಬದಲಾವಣೆಗಳನ್ನು ಗುರುತಿಸಬಹುದು. ಸಂಘಟನೆಗಳಲ್ಲೂ ಕೆಲಸ ಮಾಡುವ ಮಹಿಳಾ ಕಾರ್ಯಕರ್ತರು ಹಾಗೂ ಸಂಘಟನೆಗಳು ಸ್ತ್ರೀವಾದಿ ಕೆಲಸಕ್ಕೆ ಪಡೆದ ಪ್ರತಿಕ್ರಿಯೆ, ಅವರು ಮಾಡುವ ಕೆಲಸವನ್ನು ಪಾಶ್ಚಿಮಾತ್ಯ ಪರಿಕಲ್ಪನೆಯ ಪ್ರೇರಣೆಯಿಂದ ಎಂಬ ಧೋರಣೆ. ಮಾಧ್ಯಮಗಳು ಹಾಗೂ ರಾಜಕೀಯ ಪಕ್ಷಗಳು ಈ ಪ್ರತಿಕ್ರಿಯೆಯನ್ನು ಹುಟ್ಟು ಹಾಕಿದವು. 1980ರ ನಂತರ ಸಾಮಾಜಿಕ ಚಟುವಟಿಕೆಗಳಿಗೆ ದೊರೆತ ಆರ್ಥಿಕ ಸಹಾಯ, ಇದು ಗುಂಪುಗಳ ನಡುವೆ ಸ್ಪರ್ಧೆ,

ವೈಮನಸ್ಸು, ಕಹಿಭಾವನೆಯನ್ನು ಹುಟ್ಟು ಹಾಕಿರುವುದರ ಜೊತೆಯಲ್ಲಿ ಮಹಿಳಾ ಚಳುವಳಿಯ ಮೇಲೆ ತೀವ್ರವಾದ ಪರಿಣಾಮವನ್ನು ಉಂಟು ಮಾಡಿದೆ. ಇದು ಮಹಿಳಾ ಚಳುವಳಿಯ ರಾಜಕೀಯ ಸ್ವರೂಪವನ್ನು ಕಿತ್ತುಕೊಂಡಿದೆ. ಚಳುವಳಿಯ ಮುಖ್ಯ ಹಿತಾಸಕ್ತಿಯನ್ನು ಇದು ಹೋರಾಟದಿಂದ ಅಭಿವೃದ್ಧಿಯ ಕಡೆಗೆ ಹೊರಳಿಸಿತು. ಮೂರನೆಯ ಬಹುಮುಖ್ಯವಾದ ಬದಲಾವಣೆಯೆಂದರೆ, ಕೋಮುಭಾವನೆ ಹಾಗೂ ಪ್ರತಿಗ್ರಾಮಿ ಶಕ್ತಿಗಳು 1980ರ ಮಧ್ಯದಲ್ಲಿ ಉದಯವಾದುದು. 1984ರಲ್ಲಿ ಹಿಂದೂ-ಸಿಕ್ ಘರ್ಷಣೆ ನಡೆಯಿತು. ಮಹಿಳಾ ಸಂಘಟನೆಗಳು ಕೋಮು ದಳ್ಳುರಿಯ ವಿರುದ್ಧ ಕೆಲಸ ಮಾಡಿದವು. ಆದರೆ 1986ರ ನಂತರ ಶಾಬಾನು ಪ್ರಕರಣದಂತ ಪ್ರಕರಣದಿಂದ ಉಂಟಾದ ಬೆಳವಣಿಗೆಗಳು ಹೊಸ ಸವಾಲುಗಳನ್ನು ಹಾಕಿದವು. ಮುಸ್ಲಿಂ ಮಹಿಳಾ ಕಾಯಿದೆಯು ಜಾರಿಗೆ ಬಂದಿರುವುದು, ಸಮಾನ ನಾಗರೀಕ ಸಮಿತಿಯ ಬಗ್ಗೆ ನಡೆಸಲಾದ ಚರ್ಚೆ, ರಾಜಸ್ಥಾನದಲ್ಲಿ ನಡೆದ ಸತಿ ಘಟನೆ ಹೊಸ ಸವಾಲುಗಳಿಗೆ ಪ್ರೇರಣೆಯಾದ ಅಂಶಗಳು. ಜೊತೆಯಲ್ಲಿಯೇ ಈ ಘಟನೆಗಳು ಧಾರ್ಮಿಕ, ನೀತಿ, ತಮ್ಮ ಕುಲದ ಜೊತೆಗೆ ಮೊದಲು ಗುರುತಿಸಿಕೊಳ್ಳುವುದು ಮುಂತಾದವು ಬಲಗೊಳ್ಳುತ್ತಾ ಹೋದವು. ಮಹಿಳೆಯರ ವಿಭಿನ್ನತೆಯ ಅರಿವು, ಮಹಿಳೆಯರ ಸ್ಥಾನಮಾನದ ಮೇಲೆ ಅವು ಉಂಟು ಮಾಡುವ ಪರಿಣಾಮದ ಅರಿವು ಮಹಿಳಾ ಸಂಘಟನೆಗಳ ಪರಿಣಾಮದಿಂದ ಬಂದರೂ, ಮಹಿಳೆಯರು, ಪ್ರಾಥಮಿಕವಾಗಿ ಜಾತಿ, ಪಂಗಡ, ಕುಲಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಈ ಪ್ರತಿಕ್ರಿಯೆ ಮಹಿಳಾ ಚಳುವಳಿಯನ್ನು ವಿಭಜಿಸುವ ಪ್ರಯತ್ನವಾಗಿದೆ. ಮಹಿಳಾ ಚಳುವಳಿಯನ್ನು ಪಿತೃಪ್ರಧಾನತೆಯ ವಿನಾಶದ ಪ್ರಯತ್ನವೆಂದು ಈ ಶಕ್ತಿಗಳು ವ್ಯಾಖ್ಯಾನಿಸುತ್ತಿವೆ.

ಈ ಹಿನ್ನೆಲೆಯಲ್ಲಿ 1988ರಲ್ಲಿ ಬಿಹಾರದ ಪಾಟ್ನಾದಲ್ಲಿ ಮೂರನೇ ರಾಷ್ಟ್ರೀಯ ಮಹಿಳಾ ಸಮಾವೇಶವನ್ನು ಕರೆಯಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಸಮಸ್ಯೆಗಳನ್ನು ಸಾರ್ವಜನಿಕವಾಗಿ ಗುರುತಿಸಲಾಯಿತಲ್ಲದೆ, ರಾಜಕೀಯ ಪಕ್ಷಗಳು ಮಹಿಳಾ ವಿಂಗ್‌ಗಳನ್ನು ಪ್ರಾರಂಭಿಸಿದ್ದಲ್ಲದೆ, ಇತರ ಚಳುವಳಿಗೂ ವಿಶೇಷವಾದ ಗಮನವನ್ನು ಕೊಡಲಾಯಿತು. ಯೋಜನೆಯ ಹಂತದಲ್ಲಿಯೇ ಹಲವಾರು ಗುಂಪುಗಳನ್ನು ತೊಡಗಿಕೊಳ್ಳಲು ಪ್ರಯತ್ನಿಸಲಾಯಿತು. ಸಮಾವೇಶದ ಕಾರ್ಯಸೂಚಿಯನ್ನು ಚರ್ಚಿಸಲು ಹಲವಾರು ತಯಾರಿ ಸಭೆಗಳನ್ನು ನಡೆಸಲಾಯಿತು. ರಾಷ್ಟ್ರೀಯ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಯಿತು. ರಾಷ್ಟ್ರೀಯ ಸಮಾವೇಶ ನಡೆಯಬೇಕಾದ ಸ್ಥಳವನ್ನು ಸಾಮೂಹಿಕ ಒಮ್ಮತದಿಂದ ನಿರ್ಧರಿಸಲಾಯಿತು. ಹೀಗೆ ನಿರ್ಧರಿಸುವಾಗ ಸ್ಥಳೀಯ ಗುಂಪನ್ನು ಅದರ ಹೋರಾಟವನ್ನು ಬಲಪಡಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗುತ್ತಿತ್ತು. ಪ್ರತಿಗಾಮಿ ಶಕ್ತಿಗಳನ್ನು ಸಮಾವೇಶದಿಂದ ದೂರವಿಡಲಾಗುತ್ತಿತ್ತು. ರಾಷ್ಟ್ರೀಯ ಸಮಾವೇಶದ ದೃಷ್ಟಿಕೋನವನ್ನು ಕುರಿತು ಒಂದು ಕರಡು ಪ್ರತಿಯನ್ನು ತರಲಾಗುತ್ತಿದೆ - ದೇಶದ ವಿವಿಧೆಡೆಯಿಂದ ಹೋರಾಟದಲ್ಲಿ, ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಮೊದಲ ಬಾರಿಗೆ ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ಒರಿಸ್ಸಾ, ಪಶ್ಚಿಮ ಬಂಗಾಲ, ಅಸ್ಸಾಂ, ಕೇರಳ, ಕರ್ನಾಟಕ, ಆಂಧ್ರ ಪ್ರದೇಶ, ದೆಲ್ಲಿ, ಗೋವಾ, ಹಿಮಾಚಲ್ ಪ್ರದೇಶ, ಪಂಜಾಬ್‌ನಿಂದ 101 ಸಂಘಟನೆಗಳಿಂದ 760 ಮಹಿಳೆಯರು ಭಾಗವಹಿಸಿದ್ದರು. ಮಹಿಳೆ ಮತ್ತು ಕೆಲಸ, ಆಸ್ತಿ, ಮಹಿಳೆ ಮತ್ತು ಹಿಂಸೆ, ಆರೋಗ್ಯ, ಪರಿಸರ - ಕೋಮುವಾದ, ಸಂಸ್ಕೃತಿ, ಧರ್ಮ, ಪಿತೃಪ್ರಧಾನತೆ ಹಾಗೂ ಹೋರಾಟ ಮುಂತಾದ ವಿಚಾರಗಳನ್ನು ಚಿಕ್ಕ ಚಿಕ್ಕ ಗುಂಪುಗಳನ್ನು ಚರ್ಚಿಸಲಾಯಿತು.

ಐದನೆಯ ರಾಷ್ಟ್ರೀಯ ಸಮ್ಮೇಳನ

ನಾಲ್ಕನೆಯ ಹಾಗೂ ಐದನೆಯ ರಾಷ್ಟ್ರೀಯ ಸಮ್ಮೇಳನದ ಮಧ್ಯದ ಕಾಲದಲ್ಲಿ ಅನೇಕ ಮಹತ್ತರವಾದ ಬದಲಾವಣೆಗಳು ನಡೆದವು. ಅನೇಕ ರೀತಿ ಗುಂಪುಗಳು ಸ್ತ್ರೀವಾದಿ ಕಾಳಜಿಗಳನ್ನು ತಮ್ಮದೆಂಬಂತೆ ಕೈಗೆತ್ತಿಕೊಳ್ಳತೊಡಗಿದವು. ಸರ್ಕಾರೇತರ ಹಾಗೂ ಸರ್ಕಾರಿ ಸಂಘಟನೆಗಳು, ಮಹಿಳಾ ಯೋಜನೆಗಳು ಹೆಚ್ಚಾಗತೊಡಗಿದವು. ಜೊತೆಗೆ ಇದರಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳ ಸಂಖ್ಯೆಯೂ ಹೆಚ್ಚಾಗತೊಡಗಿತು. ಅವರ ಕೆಲಸದ ರೀತಿಗಳ ಬಗ್ಗೆ ಹಾಗೂ ಮಹಿಳಾ ಸಮಸ್ಯೆಗಳ ಬಗ್ಗೆ ಅವರ ದೃಷ್ಟಿಕೋನವನ್ನು ಪ್ರಶ್ನಿಸಲಾಯಿತು. ವಿದೇಶಿ ನೆರವು ಪಡೆದ ಗುಂಪುಗಳ ಬಗ್ಗೆ ಹಾಗೂ ಸರ್ಕಾರಿ ಮಹಿಳಾ ಕಾರ್ಯಕ್ರಮಗಳ ಬಗ್ಗೆಗಿನ ಸಮಸ್ಯೆಗಳನ್ನು ಮೊದಲ ಬಾರಿಗೆ 1988ರಲ್ಲಿ ಪಾಟ್ನಾದಲ್ಲಿ ನಾರಿ ಮುಕ್ತಿ ಸಂಘರ್ಷ ಸಮ್ಮೇಳನದಲ್ಲಿ ಎತ್ತಲಾಯಿತು. ಈ ಹಂತದಲ್ಲಿ ಎತ್ತಲಾದ ಮುಖ್ಯ ಪ್ರಶ್ನೆಗಳೆಂದರೆ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವರು ಕೆಲಸ ಮಾಡುವ ರೀತಿಯ ಬಗ್ಗೆ ಹಾಗೂ ಅಭಿವೃದ್ಧಿ ಮಾದರಿಯಲ್ಲಿ ಅವು ಬೀರುವ ಅರಾಜಕೀಯ ಪ್ರಭಾವದ ಬಗ್ಗೆ ಮುಖ್ಯವಾಗಿ ಪ್ರಶ್ನೆಗಳನ್ನು ಎತ್ತಲಾಯಿತು. ವಿದೇಶೀ ಆರ್ಥಿಕ ನೆರವು ನೀಡುವವರಿಗೆ

ಹಾಗೂ ಸರ್ಕಾರಕ್ಕೆ ಅವರು ಬದ್ಧರಾಗಿರಬೇಕಾಗಿರುವುದರಿಂದ ಇವರು ರಾಜಕೀಯ ಪ್ರಶ್ನೆಗಳನ್ನು ಎತ್ತುವುದೇ ಇಲ್ಲ. ಹೋರಾಟ, ದೃಷ್ಟಿಕೋನವುಳ್ಳ ಚಳುವಳಿಗೆ ರಾಜಕೀಯ ಪ್ರಶ್ನೆಗಳನ್ನು ಎತ್ತುವುದು ಅತ್ಯಂತ ಮುಖ್ಯವಾದ ವಿಚಾರವಾಗುತ್ತದೆ.

ಪಾಶ್ಚಿಮಾತ್ಯ ಗುಂಪುಗಳು ಜನರ ಸತ್ಯಗಳಿಂದ ದೂರವಾಗಿರುವುದಲ್ಲದೇ ಭಾರತೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳಿಂದ ದೂರವಾಗಿವೆ. ಮಹಿಳಾ ಚಳುವಳಿ ಇಂಡಿಯಾದ ಮಹಿಳೆಯರನ್ನೊಳಗೊಂಡ ಜನಪರ ಚಳುವಳಿ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ ಎಂಬ ಆರೋಪವಿದೆ. ಇನ್ನೊಂದು ಸವಾಲೆಂದರೆ ಕೋಮುವಾದಿ ಶಕ್ತಿಗಳು ಸ್ತ್ರೀವಾದವನ್ನು ತಮ್ಮದೆಂಬಂತೆ ತಮ್ಮ ರೀತಿಯಲ್ಲಿಯೇ ಬುಟ್ಟಿಗೆ ಹಾಕಿಕೊಳ್ಳುತ್ತಿರುವುದು. ಉದಾ : ಮಹಿಳಾ ಚಳುವಳಿ ಸಮಾನ ನಾಗರೀಕ ಸಂಹಿತೆಯ ಬಗ್ಗೆ ಇಡುತ್ತಿರುವ ಬೇಡಿಕೆಯನ್ನು ಬಿ.ಜೆ.ಪಿ.ಯವರು ತಮಗೆ ಬೇಕಾದ ಹಾಗೆ, ತಮ್ಮ ಉದ್ದೇಶಗಳಿಗಾಗಿ ಬಳಸಿಕೊಂಡು ಸಮಾನ ನಾಗರೀಕ ಸಂಹಿತೆಯನ್ನು ಬೆಂಬಲಿಸುತ್ತಾರೆ. ಆರ್.ಎಸ್.ಎಸ್., ಬಿ.ಜೆ.ಪಿ. ಹಾಗೂ ಶಿವಸೇನೆಯ ಮಹಿಳಾ ಶಾಖೆಗಳು ಧೈರ್ಯಶಾಲಿ ಹೆಣ್ಣು ಮಕ್ಕಳ ಬಗ್ಗೆ ಮಾತನಾಡುತ್ತವೆಯಲ್ಲದೇ ಅವರಿಗೆ ವಿಶೇಷ ತರಗತಿಗಳನ್ನು ನಡೆಸಿ ಅವರನ್ನು ದೈಹಿಕವಾಗಿ ಬಲಶಾಲಿಗಳನ್ನಾಗಿ ಮಾಡುವುದಲ್ಲದೇ ಅವರೇ ವ್ಯಾಖ್ಯಾನಿಸುವ ಭಾರತೀಯ ಸಂಸ್ಕೃತಿಗೆ ಮಾದರಿಗಳಾಗುವಂತೆ ತರಬೇತಿ ನೀಡುತ್ತಾರೆ. ಜೊತೆಗೆ, ಈ ರೀತಿ ಬಲಪಂಥೀಯ ಗುಂಪುಗಳು ಮಹಿಳೆಯರನ್ನು ಸಂಘಟಿಸುವುದಲ್ಲದೇ, ಕೋಮುವಾದದ ದಳ್ಳುರಿಯ ಸಂದರ್ಭದಲ್ಲಿ ಇತರೇ ಸಮುದಾಯಗಳ ವಿರುದ್ಧ ಹಾಗೂ ಮಹಿಳಾ ಸಂಘಟನೆಗಳ ವಿರುದ್ಧ ಅವರನ್ನು ಬಳಸುತ್ತಾರೆ. ಎರಡನೆಯದಾಗಿ, ಜಾಗತೀಕರಣ ಹಾಗೂ ಉದಾರೀಕರಣದ ಸಂದರ್ಭದಲ್ಲಿ ವ್ಯಾಪಾರೀಕರಣದ ಆಸಕ್ತಿಗಳು 'ಹೆಣ್ಣಿನ ಹೊಸ ಮಾದರಿ'ಯನ್ನು ತಮ್ಮ ವಸ್ತುಗಳನ್ನು ಮಾರಲು, ಬಳಸಲು ಪ್ರಾರಂಭಿಸಿದ್ದಾರೆ. ಇಬ್ಬಗೆಯ ಹೊರೆ, ಮನೆಗೆಲಸ ಹಾಗೂ ವಿಮೋಚನೆಗೊಂಡ ಮಹಿಳೆಯ ಮಾದರಿಗಳನ್ನು ದೊಡ್ಡ ದೊಡ್ಡ ಕಂಪನಿಗಳು ತಮ್ಮ ವ್ಯಾಪಾರೀ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳತೊಡಗಿವೆ. ಮಹಿಳೆಯ ಸ್ಥಾನ-ಮಾನದಲ್ಲಿ ಯಾವುದೇ ಗಣನೀಯವಾದ ಬದಲಾವಣೆಯಾಗದಿರುವ ಈ ಸಂದರ್ಭದಲ್ಲಿ ಸ್ತ್ರೀವಾದಿ ಕಾಳಜಿಗಳು ಹೀಗೆ ಬುಟ್ಟಿಗೆ ಹಾಕಿಕೊಳ್ಳಲ್ಪಡುತ್ತಿರುವುದು ಬಹುಮುಖ್ಯವಾದ ಸವಾಲಾಗಿದೆ.

1991ರಲ್ಲಿ ಪ್ರಾರಂಭವಾದ ಐದನೆಯ ಸಮ್ಮೇಳನದ ಪೂರ್ವಸಿದ್ಧತಾ ಯೋಜನೆ ಸಾವಿರಾರು ಹೆಂಗಸರು ಭಾಗವಹಿಸುತ್ತಿರುವುದರಿಂದ ಸಮ್ಮೇಳನದ ಸಂಘಟನೆಯ ಮಿತಿಗಳು ಹಾಗೂ ಸಮ್ಮೇಳನದ ಸ್ವರೂಪವನ್ನು ಕುರಿತು ಮಾತನಾಡಬೇಕಿತ್ತು. ಇದನ್ನು ಅನೇಕ ಯೋಜನಾ ಸಭೆಗಳಲ್ಲಿ ಚರ್ಚಿಸಲಾಯಿತು. ಮುಖ್ಯವಾದ ಸಲಹೆಯೆಂದರೆ ಸ್ಥಳೀಯ ಮಟ್ಟದಲ್ಲಿ ಸಮ್ಮೇಳನಗಳನ್ನು ನಡೆಸಿ ಅದರಲ್ಲಿ ದೊಡ್ಡ ಸಮ್ಮೇಳನಗಳ ಮಿತಿಗಳನ್ನು ಚರ್ಚಿಸುವುದಲ್ಲದೇ, ಸಮಸ್ಯೆಗಳನ್ನು ಗುರುತಿಸಿ ಪ್ರಾದೇಶಿಕ ಮಟ್ಟದ ಪ್ರಾತಿನಿಧಿತ್ವದ ರೀತಿಗಳನ್ನು ಸಮ್ಮೇಳನದಲ್ಲಿ ಏರ್ಪಡಿಸುವುದು. ಉತ್ತರ, ದಕ್ಷಿಣ, ಕೇಂದ್ರೀಯ, ಪೂರ್ವ, ಪಶ್ಚಿಮ ಪ್ರಾದೇಶಿಕತೆಗಳಾಗಿ ವಿಭಾಗಿಸಿ ಇವುಗಳ ಸಮಸ್ಯೆಗಳನ್ನು ದೊಡ್ಡ ಸಮ್ಮೇಳನದಲ್ಲಿ ಪ್ರತಿನಿಧಿಸುವುದು. 1992ರಲ್ಲಿ ಬಾಬರಿ ಮಸೀದಿಯ ನಾಶವು ಇಡಿಯ ದೇಶವನ್ನು ಕೋಮುವಾದಿ ಹುಟ್ಟಿನಲ್ಲಿ ಹಿಡಿದಿಟ್ಟುದಲ್ಲದೇ, ಪ್ರಾದೇಶಿಕ ಸಮ್ಮೇಳನಗಳ ಸಿದ್ಧತೆಗಳನ್ನು ಸ್ಥಗಿತಗೊಳಿಸಿತು. ಉತ್ತರ ಪ್ರಾದೇಶಿಕ ಸಮ್ಮೇಳನ ಮಾತ್ರ (ನಾರಿಮುಕ್ತಿ ಸಂಘರ್ಷ ಸಮ್ಮೇಳನ, ಉತ್ತರ ಪ್ರದೇಶ) 1993ರಲ್ಲಿ ಕಾನ್ಪುರದಲ್ಲಿ ನಡೆಯಿತು. ಈ ಸಮ್ಮೇಳನವು ಕೋಮುವಾದಿ ಸಮಸ್ಯೆಯ ಬಗ್ಗೆ ಚರ್ಚೆ ನಡೆಸಿ ಅದರ ಮೇಲೆ ಬೆಳಕು ಚೆಲ್ಲಲಾಯಿತು.

ಐದನೆಯ ಸಮ್ಮೇಳನಕ್ಕೆ ಸಿದ್ಧತೆಗಳು ನಡೆದ ಹಾಗೆ, ಸಮ್ಮೇಳನದಲ್ಲಿ ಹಾಗೂ ರಾಷ್ಟ್ರೀಯ ಕೋ ಆರ್ಡಿನೇಷನ್ ಕಮಿಟಿಯಲ್ಲಿ (N.C.C.)ಯ ಭಾಗವಹಿಸುವ ಸ್ವರೂಪದ ಬಗ್ಗೆ ಅನೇಕ ಪ್ರಶ್ನೆಗಳು ಎದ್ದವು, ಚರ್ಚೆಗಳಾದವು. ಸಮ್ಮೇಳನದಲ್ಲಿ ಭಾಗವಹಿಸಲು ಇರುವ ಕ್ರೈಟೀರಿಯಾದ ಬಗ್ಗೆ ಚರ್ಚಿಸಲಾಯಿತು. ಮೂರನೆಯ ಸಮ್ಮೇಳನದ ಡಿಕ್ಲರೇಷನ್‌ನ್ನು ಈ ಸಮ್ಮೇಳನದಲ್ಲಿ ಇತರ ಸಮ್ಮೇಳನದಲ್ಲಿ ಮೂಲವಾಗಿಟ್ಟುಕೊಂಡ ಹಾಗೆ ಇಟ್ಟುಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಸರ್ಕಾರದಿಂದ ಯೋಜಿತಗೊಂಡ ಮಹಿಳಾ ಅಭಿವೃದ್ಧಿ ಯೋಜನೆ (W.D.P.) N.C.C.ಯಲ್ಲಿ ಭಾಗವಹಿಸುವುದನ್ನು ವಿರೋಧಿಸಲಾಯಿತು. ಸರ್ಕಾರಿ ಮಹಿಳಾ ಕಾರ್ಯಕ್ರಮಗಳು ಹಾಗೂ ಬಲಪಂಥೀಯ ಸಂಘಟನೆಗಳ ಕಾರ್ಯವಿಧಾನ/ದೃಷ್ಟಿಕೋನಗಳು ಡಿಕ್ಲೆರೇಷನ್‌ನಲ್ಲಿ ಹೇಳಿರುವ ರೀತಿ/ನೀತಿಗಳಿಗೆ ವಿರೋಧಾತ್ಮಕವಾಗಿವೆ ಎಂಬ ಅಭಿಪ್ರಾಯ ಮೂಡಿ ಬಂದುದರಿಂದ ಈ ಗುಂಪುಗಳು, ಸಂಸ್ಥೆಗಳು ಅಥವಾ ಸಂಘಟನೆಗಳು N.C.C.ಯಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂದು ನಿರ್ಧರಿಸಲಾಯಿತು. ಸಮ್ಮೇಳನದಲ್ಲಿ ಸೇರಲು ಕೆಲವು ಕ್ರೈಟೀರಿಯಗಳನ್ನು ರೂಪಿಸುವುದು ಅಗತ್ಯವೆನಿಸಿತು.

ಚಳುವಳಿಯೊಳಗೆ ಕೆಲವು ಸಮಸ್ಯೆಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು, ದೃಷ್ಟಿಕೋನಗಳನ್ನು ಮಂಡಿಸಿಬಿಡುವುದು ಅಗತ್ಯವೆಂದು ಅಭಿಪ್ರಾಯಪಡಲಾಯಿತು. ಯಾರು ಈ ಅಭಿಪ್ರಾಯ, ದೃಷ್ಟಿಕೋನಗಳನ್ನು ಬೆಂಬಲಿಸುವರೋ ಅಂತಹವರು ಸಮ್ಮೇಳನದಲ್ಲಿ ಭಾಗವಹಿಸಬಹುದೆಂದು ತೀರ್ಮಾನಿಸಲಾಯಿತು. ಹಾಗಾಗಿ 'ಸ್ವಾಯತ್ತೆ ಮಹಿಳಾ ಸಂಘಟನೆಗಳ ಡಿಕ್ಲೆರೇಷನ್'ನ್ನು ತಯಾರಿಸಿ ಅನೇಕ ಗುಂಪುಗಳ ಸಲಹೆಗಳನ್ನು ಇದರಲ್ಲಿ ಸೇರಿಸಲಾಯಿತು. ಐದನೆಯ ರಾಷ್ಟ್ರೀಯ ಮಹಿಳಾ ಸಮ್ಮೇಳನವು ಆಂಧ್ರಪ್ರದೇಶದ ತಿರುಪತಿಯಲ್ಲಿ 1994ರ ಜನವರಿಯಲ್ಲಿ ನಡೆಯಿತು. ತಿರುಪತಿಯಲ್ಲಿ ಸಮ್ಮೇಳನ ಏರ್ಪಡಿಸುವುದರ ಮೂಲಕ ರಾಷ್ಟ್ರದ ಎಲ್ಲಾ ಮಹಿಳೆಯರು ಹಲವಾರು ವರ್ಷಗಳಿಂದ ಜನಪರ ಚಳುವಳಿಗಳೊಳಗೆ ಕೆಲಸ ಮಾಡುತ್ತಿರುವ ಆಂಧ್ರಪ್ರದೇಶದ ಮಹಿಳೆಯರಿಗೆ ತಮ್ಮ ಬೆಂಬಲ/ಸಹಕಾರ ಸೂಚಿಸಿದರು. ಆಂಧ್ರಪ್ರದೇಶದ ಗ್ರಾಮೀಣ ಹಾಗೂ ಆದಿವಾಸಿ ಹೆಂಗಸರು ರಾಜ್ಯದ ಶೋಷಣೆಗೆ ಒಳಗಾಗಿದ್ದಾರೆ. 1990ರ ಪ್ರಾರಂಭದಲ್ಲಿ ಹಿಂದೂ ಕೋಮುವಾದಿ ಶಕ್ತಿಗಳು ಪ್ರಬಲವಾಗಿ ಬೆಳೆಯತೊಡಗಿದವು. ಆರ್ಥಿಕ ಉದಾರನೀತಿ ಹಾಗೂ ಆರ್ಥಿಕ ಸುಧಾರಣೆಗಳು ದೇಶದಾದ್ಯಂತ ವಿರೋಧಗಳನ್ನು ಹುಟ್ಟುಹಾಕಿದವು. ಈ ಸಂದರ್ಭದಲ್ಲಿ ಮಹಿಳಾ ಚಳುವಳಿಯ ಐದನೆಯ ಸಮ್ಮೇಳನ ಪ್ರಭುತ್ವದ ದೌರ್ಜನ್ಯ, ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ಬಗ್ಗೆ ಹೆಚ್ಚು ಗಮನವಿತ್ತಿತು.

ಈ ಸಮ್ಮೇಳನವು ಇತರ ಅನೇಕ ಸಮಸ್ಯೆಗಳನ್ನೂ ಚರ್ಚಿಸಿತು. ಮಹಿಳೆಯರ ಮೇಲಿನ ಹಿಂಸೆ, ಆರೋಗ್ಯ ಹಾಗೂ ಜನಸಂಖ್ಯೆ, ಕೋಮುವಾದ ಹಾಗೂ ಅಸ್ತಿತ್ವದ ರಾಜಕೀಯ ಬದುಕಿಗಾಗಿ ಹೋರಾಟ, ಹೊಸ ಆರ್ಥಿಕ ನೀತಿ, ಮಹಿಳೆ ಮತ್ತು ಪ್ರಭುತ್ವ, ಸಂಘಟನೆಯ ರಾಜಕೀಯ, ದಲಿತ ಹಾಗೂ ಆದಿವಾಸಿ ಮಹಿಳಾ ಚಳುವಳಿ, ಜನಪರ ಚಳುವಳಿಗಳೊಂದಿಗೆ ಮಹಿಳಾ ಚಳುವಳಿಯ ಸಂಬಂಧ, ಒಂಟಿ ಹೆಣ್ಣಿನ ಸಮಸ್ಯೆ (ಮೊದಲ ಬಾರಿಗೆ ಪ್ರತ್ಯೇಕ ವಿಚಾರವಾಗಿ ಚರ್ಚಿಸಲ್ಪಟ್ಟಿತು) ಹಾಗೂ ಲೈಂಗಿಕತೆ ಮುಂತಾದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ತಿರುಪತಿ ಸಮ್ಮೇಳನವು ಗಣನೀಯವಾದ ಪ್ರಗತಿಗಳನ್ನು ಸಾಧಿಸಿತು. ಈ ಸಮ್ಮೇಳನದಲ್ಲಿ ಪ್ರಥಮ ಬಾರಿಗೆ 'ಲೆಸ್‌ಬಿಯನಿಸಂ' ಬಗ್ಗೆ ವಿಶೇಷವಾದ ಸಭೆಯಲ್ಲಿ ಚರ್ಚಿಸಲಾಯಿತು. ಈ ವಿಚಾರವನ್ನು ಇತರೇ ಸಮ್ಮೇಳನಗಳಲ್ಲಿ ಚರ್ಚೆಗೆ ತೆಗೆದುಕೊಂಡಿರಲಿಲ್ಲ. ಈ ಬಗ್ಗೆ ಅತ್ಯಂತ ವಿರೋಧವಿದ್ದಾಗ್ಯೂ ಈ ಸಭೆ ಜಯಪ್ರದವಾಗಿತ್ತು. ಜೊತೆಗೆ ಪ್ರಥಮ ಬಾರಿಗೆ ದಲಿತ ಹಾಗೂ ಆದಿವಾಸಿ ಮಹಿಳಾ ಚಳುವಳಿಯ ಬಗ್ಗೆ ವಿಶೇಷ ಸಭೆ ಇತ್ತು. ಈ ಸೆಕ್ಷನ್‌ನಲ್ಲಿ 700 ಜನ ಭಾಗಿಗಳಿದ್ದರು. ಕೊನೆಯ ದಿನ ಒಂದು ದೊಡ್ಡ ರ್‍ಯಾಲಿಯನ್ನು ಏರ್ಪಡಿಸಲಾಯಿತು. ಸಮ್ಮೇಳನವನ್ನು ಸಂಘಟಿಸಿದ ಅಲ್ಲಿಯ ಗುಂಪಿನವರು ಆ ರಾಜ್ಯದ ಅನೇಕ ಜಿಲ್ಲೆಯ ಗ್ರಾಮೀಣ ಹೆಂಗಸರನ್ನು ಸಂಘಟಿಸಿದುದು ಸಮ್ಮೇಳನಕ್ಕೆ ಒಂದು ದೊಡ್ಡ ಶಕ್ತಿಯಾಗಿ ಪರಿಣಮಿಸಿತು.

- ಆರನೆಯ ರಾಷ್ಟ್ರೀಯ ಸಮ್ಮೇಳನ

ಆರನೆಯ ಸಮ್ಮೇಳನಕ್ಕೆ ಸ್ಥಳ ನಿರ್ಧರಿಸಲು N.C.C.ಯಲ್ಲಿ ಹಲವಾರು ಚರ್ಚೆಗಳು ನಡೆದವು. ಹಿಂದಿನ ಎರಡೂ ಸಮ್ಮೇಳನಗಳೂ ದಕ್ಷಿಣ ಭಾರತದಲ್ಲಿ ನಡೆದಿದ್ದರಿಂದ 6ನೆಯ ಸಮ್ಮೇಳನವನ್ನು ಬೇರೆ ಕಡೆ ನಡೆಸಲು ತೀರ್ಮಾನಿಸಲಾಯಿತು. ಬಿಹಾರದ ಮಹಿಳಾ ಹಾಗೂ ಇತರ ಸರ್ಕಾರೇತರ ಗುಂಪುಗಳು ಬಿಹಾರದಲ್ಲಿ ಸಮ್ಮೇಳನ ನಡೆಸಲು ಸಿದ್ಧರಾದ್ದರಿಂದ ರಾಂಚಿಯಲ್ಲಿ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು. ರಾಂಚಿ ಪ್ರಜಾಪ್ರಭುತ್ವದ ಹಲವಾರು ಚಳುವಳಿಗಳ ಇತಿಹಾಸವನ್ನು ಹೊಂದಿರುವುದೂ ಕೂಡಾ ಆಯ್ಕೆಗೆ ಮುಖ್ಯ ಕಾರಣವಾಯಿತು.

ಮಹಿಳಾ ಚಳುವಳಿಯು ಅಭಿವೃದ್ಧಿ ಮಾದರಿಯ ಬಗ್ಗೆಯೇ ಹಲವಾರು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಿದೆ. ಈ ಮಾದರಿ ಪರಿಸರ ನಾಶಕ್ಕೆ ಕಾರಣವಾಗಿದೆ. ಈ ಅಭಿವೃದ್ಧಿ ಮಾದರಿಯನ್ನು ಪ್ರಬಲ ವರ್ಗ/ಜಾತಿಗಳು ತಮ್ಮ ವಶದಲ್ಲಿರಿಸಿಕೊಂಡು ಲಕ್ಷಾಂತರ ಬಡಜನರ ಬಡತನಕ್ಕೆ, ಸ್ಥಳಾಂತರಕ್ಕೆ ಕಾರಣರಾಗಿದ್ದಾರೆ. ಜೀವನ ನಿರ್ವಹಣೆ, ಭೂಮಿ, ಉದ್ಯೋಗ ಹಾಗೂ ಸಂಸ್ಕೃತಿಯ ನಾಶದಿಂದ ಮಹಿಳೆಯರ ಬದುಕಿಗೆ ಬಲವಾದ ಪೆಟ್ಟು ಬಿದ್ದಿದೆ. ಹೆಂಗಸರ ಮೇಲೆ ನಡೆಯುತ್ತಿರುವ ಹಿಂಸೆ ವಿವಿಧ ರೂಪಗಳಲ್ಲಿ, ತೀವ್ರತೆಯಲ್ಲಿ ಹೆಚ್ಚಾಗಿ ನಡೆಯುತ್ತಿದೆ. ವೈವಾಹಿಕ ಲೈಂಗಿಕ ದೌರ್ಜನ್ಯ ಹಾಗೂ ಉದ್ಯೋಗದ ಸ್ಥಳದಲ್ಲಿ ನಡೆಯುವ ಲೈಂಗಿಕ ಶೋಷಣೆಯನ್ನು ಮಹಿಳಾ ಗುಂಪುಗಳು ಕೈಗೆತ್ತಿಕೊಂಡು ಅದರ ವಿರುದ್ಧ ಕೆಲಸ ಮಾಡುತ್ತಿವೆ. ರಾಜಕೀಯ ಪಕ್ಷಗಳು, ಮೂಲಭೂತವಾದಿಗಳು ಹಾಗೂ ಆರ್ಥಿಕ ಕ್ರೈಸಿಸ್ ಪ್ರಭುತ್ವದ ಮೇಲೆ ಒತ್ತಡ ಹೇರುತ್ತಿರುವುದರಿಂದ, ಪ್ರಭುತ್ವವು ಜನಪರ ಚಳುವಳಿಗಳನ್ನು ಮುಟ್ಟುಗೋಲು ಹಾಕುತ್ತಿದೆ. ರಾಜ್ಯದ ಮಹಿಳಾ ವಿರುದ್ಧವಾದ ಗುಣ ಈಗ ಹೆಚ್ಚು ಸ್ಪಷ್ಟವಾಗತೊಡಗಿದೆ. ಯಾಕೆಂದರೆ ರಾಜ್ಯದ ಸೈನಿಕ ಪಡೆ ಹಾಗೂ

ಅಧಿಕಾರಿಗಳು ಮಹಿಳೆಯರ ಮೇಲಿನ ಹಿಂಸೆಯನ್ನು ಮುಂದುವರಿಸುತ್ತಿದ್ದಾರೆ. ರಾಜ್ಯವು, ಮಹಿಳೆಯರಿಗಾಗಿ ಅನೇಕ ಕಾನೂನು, ಯೋಜನೆಯನ್ನು ತಂದಿರುವುದೇನೋ ಸರಿ. ಆದರೆ ಪ್ರಭುತ್ವದ ಮಹಿಳಾ ವಿರುದ್ಧದ ಗುಣ ಕಣ್ಣಿಗೆ ರಾಚುವಂತಿದೆ. ಅದರ ಅಂತರಾಳದಲ್ಲಿಯೇ ಪಿತೃಪ್ರಾಧಾನ್ಯ, ವರ್ಗ ಹಾಗೂ ಜಾತಿಯುಕ್ತ ಪ್ರಕೃತಿಯಿದ್ದು ಇರುವ ಸ್ಥಿತಿಯನ್ನೇ ಮುಂದುವರೆಸುತ್ತದೆ. ಮಹಿಳೆಯರಿಗೆ ನ್ಯಾಯ ನೀಡಲು ಮೂಲಭೂತ ಬದಲಾವಣೆಯನ್ನೇನು ಪ್ರಭುತ್ವ ಮಾಡುವುದಿಲ್ಲ. ಈ ಹಂತದಲ್ಲಿ 1997ರ ಡಿಸೆಂಬರ್‌ನಲ್ಲಿ ರಾಂಚಿಯಲ್ಲಿ ನಡೆಸುವ ಸಮ್ಮೇಳನದಲ್ಲಿ ಮೂರು ಮುಖ್ಯ ವಿಚಾರಗಳನ್ನು ಚರ್ಚಿಸಲು ನಿರ್ಧರಿಸಲಾಯಿತು. ಮಹಿಳೆಯರ ಸ್ಥಳಾಂತರ, ಮಹಿಳೆಯರ ಮೇಲೆ ಹೆಚ್ಚಾಗಿ ನಡೆಯುತ್ತಿರುವ ಹಿಂಸೆ ಹಾಗೂ ಪ್ರಭುತ್ವಕ್ಕಿರುವ ಮಹಿಳಾ ವಿರೋಧಿ ಗುಣ. ಈ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುದಲ್ಲದೇ, ಈ ಸಮಾವೇಶದಲ್ಲಿ ಆರೋಗ್ಯ, ಲೈಂಗಿಕತೆ, ಮಹಿಳೆ ಮತ್ತು ಶ್ರಮ, ಮಹಿಳಾ ಚಳುವಳಿಯ ವಿವಿಧ ದೃಷ್ಟಿಕೋನಗಳು, ನೈಸರ್ಗಿಕ ಸಂಪನ್ಮೂಲಗಳು, ಕೋಮುವಾದ ಇವುಗಳನ್ನೂ ಚರ್ಚಿಸಲಾಯಿತು. ಮುಸ್ಲಿಂ, ದಲಿತ ಹಾಗೂ ಆದಿವಾಸಿ ಮಹಿಳೆಯರ ಬಗ್ಗೆ ವಿಶೇಷ ಗೋಷ್ಠಿಗಳನ್ನು ನಡೆಸಲಾಯಿತು. 'ಲೆಸ್‌ಬಿಯನಿಸಂ' ಹಿಂದಿನ ಸಮಾವೇಶದಲ್ಲಿ ಮೊದಲ ಬಾರಿಗೆ ಪರಿಚಯಿಸಲ್ಪಟ್ಟಿತ್ತು. ಹಲವಾರು ಮಹಿಳಾ ಗುಂಪುಗಳ ವಿರೋಧಗಳ ನಡುವೆಯೂ ಈ ವಿಚಾರವನ್ನು ಈ ಸಮಾವೇಶದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ನಾರ್ಥ್, ಈಸ್ಟ್‌ನ ಮಹಿಳೆಯರು ಪ್ರಥಮ ಬಾರಿಗೆ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಮಾವೇಶದಲ್ಲಿ ಚರ್ಚಿಸಿದರು. ಮೊದಲ ಬಾರಿಗೆ 'ಸೆಕ್ಸ್ ವರ್ಕ್' ಬಗ್ಗೆ 'ಸೂಳೆಗಾರಿಕೆ' ಬಗ್ಗೆ ಕೂಡಾ ಚರ್ಚಿಸಲಾಯಿತು. ಟಿಬೇಟಿಯರ್ಯ ಮಹಿಳೆಯರ ಬೇಡಿಕೆಯ ಮೇರೆಗೆ ಟಿಬೇಟಿಯರ್ಯ ಮಹಿಳೆಯರನ್ನು ಶೋಷಿಸುತ್ತಿರುವ ಚೈನಾದ ಯೋಜನೆಗಳ ವಿರುದ್ಧ ಒಂದು ವಿಶೇಷ ಗೋಷ್ಠಿಯನ್ನು ಮಾಡಿ, ಆ ಮೂಲಕ ಮಹಿಳಾ ಬಂದಿಗಳನ್ನು ಬಿಡುವಂತೆ ಚೈನಾ ಸರ್ಕಾರದ ಮೇಲೆ ಒತ್ತಡವನ್ನು ಹಾಕಲಾಯಿತು.

ಮೂರನೆಯ ಹಾಗೂ ಕೊನೆಯ ದಿನದಂದು ನಿರ್ಣಯಗಳನ್ನು ಮಾಡುವ ಸಭೆಯನ್ನು ಮೊದಲೇ ಯೋಚಿಸಿದಂತೆ ನಡೆಸಲಾಗಲಿಲ್ಲ. ಸಮಾವೇಶದಲ್ಲಿ ಪಾಲ್ಗೊಂಡ ಮಹಿಳೆಯೋರ್ವರ ಮೇಲೆ ಪೋಲೀಸ್‌ನೊಬ್ಬ ಕಿರುಕುಳ ನೀಡಿದ್ದಕ್ಕಾಗಿ ಸಮ್ಮೇಳನದಲ್ಲಿ ಭಾಗಿಗಳಾದವರೆಲ್ಲರೂ ಇದನ್ನು ವಿರೋಧಿಸಿ ಒಂದು ದೊಡ್ಡ 'ರ್‍ಯಾಲಿ' ನಡೆಸಿದರು. ಈ ರ್‍ಯಾಲಿಯು ಒಂದು ಒಗ್ಗೂಡಿದ ಶಕ್ತಿಯನ್ನು ಹುಟ್ಟುಹಾಕಿತು. ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ಮಹಿಳೆಯರಿಗೆ ಈ 'ರ್‍ಯಾಲಿ'ಯ ಸಮ್ಮೇಳನದ ಸಂದರ್ಭದಲ್ಲಿ ಮೂಡಿದ ಮಹಿಳಾ ಶಕ್ತಿಯ ಪ್ರತಿಪಾದನೆಯಾಗಿ ಕಂಡಿತು.

ಮಹಿಳಾ ಚಳುವಳಿಯ ಈಗಿನ ಟ್ರೆಂಡ್‌ಗಳು.... ಸಮಾವೇಶದ ಮೇಲೆ ಇದರ ಪ್ರಭಾವ

ಏಳನೆಯ ಸಮ್ಮೇಳನ ನಡೆಸಬೇಕಾದ ಸಂದರ್ಭ ನಮ್ಮ ಮುಂದಿದೆ. ಆರನೆಯ ಸಮ್ಮೇಳನದ ಮರುವೀಕ್ಷಣೆಗಾಗಿ 1988ರಲ್ಲಿ ಬರೋಡಾದಲ್ಲಿ ನಡೆಸಿದ ಸಭೆಯಲ್ಲಿ ಸಮ್ಮೇಳನವನ್ನು ಉತ್ತಮಗೊಳಿಸುವುದಕ್ಕಾಗಿ ಅನೇಕ ಸಲಹೆಗಳು ಮೂಡಿಬಂದವು. ಇದು ಎನ್.ಸಿ.ಸಿ.ಯನ್ನು ಮರುವಿಂಗಡನೆಗೊಳಿಸುವುದು, ಸಮಾವೇಶವನ್ನು ಸಣ್ಣ ಪ್ರಮಾಣದಲ್ಲಿ ನಡೆಸಿ, ವ್ಯವಸ್ಥಿತವಾಗಿ ಎಲ್ಲ ನಡೆಯುವಂತೆ ನೋಡಿಕೊಳ್ಳುವುದಲ್ಲದೇ ಅವರು ತೀವ್ರವಾಗಿ ಭಾಗವಹಿಸುವಂತೆ ನೋಡಿಕೊಳ್ಳುವುದು. ಇಡಿಯ ಹಂತವನ್ನು ಅರ್ಥವಂತಿಕೆಗೊಳಿಸುವುದಕ್ಕೋಸ್ಕರ ಸಮಾವೇಶವನ್ನು ಮಾಡುವ ಮೂಲ ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಈ ಸಮಾವೇಶಗಳ ಮೇಲೆ ದುಷ್ಪರಿಣಾಮ ಬೀರುತ್ತಿರುವ ಅಭಿವೃದ್ಧಿಗಳು ಗಂಭೀರವಾದ ಹಾಗೂ ಮುಕ್ತವಾದ ಚರ್ಚೆಯೊಂದು ಮಹಿಳಾ ಚಳುವಳಿಯೊಳಗೆ ನಡೆಯುವ ಅಗತ್ಯವನ್ನು ಒತ್ತಿ ಹೇಳುತ್ತದೆ. ಈ ಚರ್ಚೆ - ಸಮಾವೇಶದ ಸ್ವರೂಪ, ಭಾಗವಹಿಸುವಿಕೆ, ಎಲ್ಲಾ ಸಂಘಟನೆಯ ವಿವರ ಹಾಗೂ ಸಮಾವೇಶದ ರೂಪು-ರೇಷೆಗಳನ್ನು ಒಳಗೊಂಡಿರಬೇಕು. ಈ ಎಲ್ಲಾ ವಿವರಗಳು ನಾವು ಸಮಾವೇಶವನ್ನು ಹೇಗೆ ನೋಡುತ್ತೇವೆ ಎಂಬುದನ್ನು ಗಂಭೀರವಾಗಿ ಯೋಚಿಸುವಂತೆ ಮಾಡುತ್ತವೆ. ಈ ಸಮಾವೇಶಗಳನ್ನು ಸಂಘಟಿಸುವ ಉದ್ದೇಶವೇನು? ಯಾವ ರೀತಿಯ ಮಹಿಳಾ ಗುಂಪುಗಳು ಇದರಲ್ಲಿ ಭಾಗವಹಿಸುತ್ತವೆ? ಅವು ಹೋರಾಟದ ದೃಷ್ಟಿಕೋನ ಹೊಂದಿವೆಯೇ? ಅಥವಾ ಸರ್ಕಾರೇತರ ಸಂಸ್ಥೆಗಳೇ? ಈ ಸಮಾವೇಶಕ್ಕೆ ಸಂಬಂಧಪಟ್ಟಂತ ನಿರ್ಧಾರಗಳು ಹೇಗೆ ಸರಿಯಾಗಿರುವುದಿಲ್ಲ? ಈಗಿರುವ ಮಹಿಳಾ ಚಳುವಳಿಯೊಳಗಿನ ಅನೇಕ ಟ್ರೆಂಡ್‌ಗಳು ಈ ಸಮಾವೇಶಗಳನ್ನು ರೂಪಿಸಿವೆ, ಹಾಗೂ ಮಹತ್ತರ ಸಂಗತಿಗಳಾದ್ದರಿಂದ ಅವುಗಳನ್ನು ವಿಮರ್ಶಾತ್ಮಕವಾಗಿ ನೋಡುವ ಅಗತ್ಯ ಇದೆ.

ಗಡಿಗಳೆಲ್ಲ ಮರೆಯಾಗಿ ಜಗತ್ತೆ ಒಂದಾಗುವ ದಿನ ಬರಬಹುದು

1962ರಲ್ಲಿ ಜನಸಿದ, ಬಾಂಗ್ಲಾ ದೇಶದ ಲೇಖಕಿ ತಸ್ಲೀಮ ನಸ್‌ರೀನ್ ತಮ್ಮ 'ಲಜ್ಜಾ' ಕಾದಂಬರಿಯಿಂದಾಗಿ 1993ರಲ್ಲಿ ಜಗತ್ತಿನಾದ್ಯಂತ ಜನಪ್ರಿಯರಾಗಿಬಿಟ್ಟರು. ಡಿಸೆಂಬರ್ 1992ರಲ್ಲಿ ನಡೆದ ಬಾಬ್ರಿಮಸೀದಿ ಘಟನೆಯ ಪರಿಣಾಮವಾಗಿ ಬಾಂಗ್ಲಾ ದೇಶದಲ್ಲಿ ಹಿಂದೂ ಕುಟುಂಬವೊಂದು ಅನುಭವಿಸಿದ ಹಿಂಸೆಯನ್ನಾಧರಿಸಿ ಬರೆದ ಲಜ್ಜಾ ಕಾದಂಬರಿಯನ್ನು ಬಾಂಗ್ಲಾ ಸರ್ಕಾರ ನಿಷೇಧಿಸಿತು. ಬಾಂಗ್ಲಾದ ಜಮಾಯ್ತ್-ಎ-ಇಸ್ಲಾಮಿ ಮತ್ತು ಇತರ ಕೋಮುವಾದಿ ಗುಂಪುಗಳ ಮತಾಂಧ ಒತ್ತಡಕ್ಕೆ ಮಣಿದ ಸರ್ಕಾರ ಪುಸ್ತಕವನ್ನೆ ನಿಷೇಧಿಸಿತು. ಲೇಖಕಿ ತಸ್ಲೀಮಾ ಅವರು 'ಲಜ್ಜಾ' ಬರೆಯುವ ಮೊದಲೂ ಸಹ ಬಾಂಗ್ಲಾದ ಅನೇಕ ಪತ್ರಿಕೆಗಳಲ್ಲಿ ತಮ್ಮ ಲೇಖನ, ಕವಿತೆಗಳ ಮೂಲಕ ಧರ್ಮವನ್ನು ಪ್ರಶ್ನಿಸುತ್ತಿದ್ದರು. ಧರ್ಮವೇ ಅಸಮಾನತೆಯನ್ನು ಎತ್ತಿಹಿಡಿದು ಜನರನ್ನು ವಿಶೇಷವಾಗಿ ಮಹಿಳೆಯರನ್ನು ಶೋಷಿಸುತ್ತದೆ ಎಂಬುದು ಅವರ ನಿಲುವಾಗಿತ್ತು.

ಲಜ್ಜಾ ಕಾದಂಬರಿಯನ್ನು ವಿರೋಧಿಸಿ, 1993 ಸೆಪ್ಟಂಬರ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ತಸ್ಲೀಮಾ ಅವರ ವಿರುದ್ಧ ಮೊದಲ ಫತ್ವಾವನ್ನು ವಿಧಿಸಲಾಯ್ತು. ನಂತರ ಕಲ್ಕತ್ತಾದ ಸ್ಟೇಟ್ಸ್‌ಮನ್ ಪತ್ರಿಕೆಯ ಸಂದರ್ಶನದಲ್ಲಿ ತಸ್ಲೀಮಾ ನೀಡಿದ ಹೇಳಿಕೆ ಮತ್ತೆ ವಿವಾದವನ್ನು ಹುಟ್ಟುಹಾಕಿತು. ಬಾಂಗ್ಲಾ ಸರ್ಕಾರವು ಗಲಭೆಗೆ, ಹಿಂಸೆಗೆ ಕಾರಣವಾದ ಮತಾಂಧರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ತಸ್ಲೀಮಾರ ವಿರುದ್ಧ ಅರೆಸ್ಟ್ ವಾರೆಂಟ್ ಹೊರಡಿಸಿತು. 1994ರ ಜೂನ್‌ನಲ್ಲಿ ಬಲವಂತವಾಗಿ ಆಕೆ ಭೂಗತರಾಗಬೇಕಾಯಿತು. ಸ್ಥಳೀಯ ಮುಲ್ಲಾ ಆಜ್ಞೆ ಹೊರಡಿಸಿ ಆಕೆಯ ತಲೆಗೆ 50000 ಟಾಕಾ ವಿಧಿಸಿದನು.

ದೇಶಾದ್ಯಂತ ಉನ್ಮತ್ತ ಮತಾಂಧರು ಸೃಷ್ಟಿಸಿದ ವಾತಾವರಣದಿಂದಾಗಿ ಬೇರೆ ದಾರಿಯೇ ಇಲ್ಲದೆ ತಸ್ಲೀಮಾ ಅವರ ವಕೀಲರು ಆಕೆಗೆ ದೇಶಬಿಟ್ಟು ಹೋಗಲು ಸೂಚಿಸಿದರು. ದೇಶ ಬಿಟ್ಟುಹೋಗಿ ಆರು ವರ್ಷಗಳು ಯುರೋಪಿನಲ್ಲಿ ಭೂಗತರಾಗಿದ್ದ ತಸ್ಲೀಮಾ ಅವರಿಗೆ ಈಗ 1999 ನವೆಂಬರ್‌ನಲ್ಲಿ ಭಾರತಕ್ಕೆ ಬರಲು ವೀಸಾ ನೀಡಲಾಯಿತು. ಭಾರತಕ್ಕೆ ಬಂದಮೇಲೆ ಮುಂಬೈನಲ್ಲಿ ಒಂದು ದಿವಸ ತಂಗಿದ್ದ ಅವರು, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮುಂಬೈನಲ್ಲಿದ್ದ ಸಮಯದಲ್ಲಿ 'ಕಮ್ಯೂನಲಿಸಂ ಕಾಂಬ್ಯಾಟ್' ಪತ್ರಿಕೆಯವರು ನಡೆಸಿದ ಸಂದರ್ಶನವನ್ನು ಅನುವಾದಿಸಿ ನೀಡಲಾಗಿದೆ.

ಪ್ರ : ಏಳು ವರ್ಷಗಳ ಹಿಂದೆ ಯಾವ ನಿರ್ದಿಷ್ಟ ವಿಷಯ ನಿಮ್ಮ ಮೇಲಿನ ಬಹಿಷ್ಕಾರಕ್ಕೆ ಕಾರಣವಾಯಿತು?

ಉ : ನಾನು ಬರೆಯಲು ಪ್ರಾರಂಭಿಸಿದಾಗಿನಿಂದಲೂ ಮೂಲಭೂತವಾದಿ ಶಕ್ತಿಗಳು ಅಸಮಾಧಾನಗೊಂಡಿದ್ದರು. ಯಾಕೆಂದರೆ ನನ್ನ ಬರವಣಿಗೆಯಲ್ಲಿ ನನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿದ್ದವು. ಮೂಲಭೂತವಾದಿಗಳು ವ್ಯಾಖ್ಯಾನಿಸುವ ಧರ್ಮವಷ್ಟೇ ಅಲ್ಲ ಧರ್ಮವೆ ಮಹಿಳೆಯರನ್ನು ಶೋಷಿಸುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿತ್ತು. ಇದನ್ನು ಅವರು ಸಹಿಸಲಿಲ್ಲ. ನಾನು ಎಲ್ಲಿಯವರೆಗೂ ಮೂಲಭೂತವಾದಿಗಳ ಹಿಡಿತದಲ್ಲಿರುವ ಧರ್ಮವು ಮಹಿಳೆಯರನ್ನು ಶೋಷಿಸುತ್ತದೆ ಎಂದು ಹೇಳುತ್ತಿದ್ದೇನೊ ಅಲ್ಲಿಯವರೆಗೂ ಮಹಿಳಾ, ಪ್ರಗತಿಪರ, ಹಾಗೂ ಕೆಲವು ಧಾರ್ಮಿಕ ಜನರು ನನ್ನನ್ನು ಬೆಂಬಲಿಸಿದರು.

ಆ ಸಮಯದಲ್ಲಿ ಜಗತ್ತಿನಾದ್ಯಂತ, ಧರ್ಮವಲ್ಲ, ಧರ್ಮ ಕುರಿತ ಸಂಕುಚಿತ ಮತ್ತು ಮೂಲಭೂತವಾದಿ ವ್ಯಾಖ್ಯಾನಗಳು, ಅಸಮಾನತೆ, ಅನ್ಯಾಯ, ದಬ್ಬಾಳಿಕೆಗೆ ಕಾರಣವಾಗಿದೆ, ಎನ್ನುವಂತಹ ಲೇಖನಗಳು ಪ್ರಕಟಗೊಂಡಿದ್ದವು. ಆದರೆ, ನಾನು ಹೇಳಿದ ಸತ್ಯವು ಅವರಿಗೆ ಒಪ್ಪಿತವಾಗಲಿಲ್ಲ. ನಾನು ಕುರಾನಿನ ಮತ್ತು ಹದಿತ್‌ನ ಉಲ್ಲೇಖಗಳನ್ನು ನೀಡಿ ಧರ್ಮವೆ ದಬ್ಬಾಳಿಕೆಗೆ ಕಾರಣವಾಗಿದೆ ಎಂದು ಹೇಳಿದಾಗ ಇಡೀ ದೇಶವೆ ನನ್ನ ವಿರುದ್ಧ ನಿಂತಿತು. ಆದರೂ ನನಗನಿಸಿದ್ದನ್ನು ಹೇಳುವುದನ್ನು ನಾನು ನಿಲ್ಲಿಸಲಿಲ್ಲ.

ನನ್ನ ಎಲ್ಲಾ ಪುಸ್ತಕಗಳನ್ನು ಸುಟ್ಟುಹಾಕಿದರು, 'ಲಜ್ಜಾ' ಕಾದಂಬರಿಯಲ್ಲದೆ, ಬಾಂಗ್ಲಾ ದೇಶದ ಪತ್ರಿಕೆಗಳಿಗೆ ನಾನು ಬರೆಯುತ್ತಿದ್ದ ಅಂಕಣದ ಸಂಕಲನಗಳನ್ನು ಸುಟ್ಟುಹಾಕಿದರು. 1993ರಲ್ಲಿ ಮೂರು ಫತ್ವಾಗಳನ್ನು ವಿಧಿಸಲಾಯ್ತು, ಅನೇಕ ಸಲ ನನ್ನ ತಲೆಗೆ ಬೆಲೆ ಕಟ್ಟಲಾಯ್ತು. ಆದರೆ ಸರ್ಕಾರವು ಅಪರಾಧಿ ಮತಾಂಧರ ವಿರುದ್ಧ ಕ್ರಮಕೈಗೊಳ್ಳುವ ಬದಲು ನನ್ನನ್ನು ಬಂಧಿಸಲು ವಾರೆಂಟ್ ನೀಡಿದ್ದು ಹಾಸ್ಯಾಸ್ಪದ.

ಲಜ್ಜಾವನ್ನು 1993ರ ಜನವರಿ ಕೊನೆಯಲ್ಲಿ ಪ್ರಕಟಿಸಲಾಯ್ತು. ನಾನು ಕಣ್ಣಾರೆ ಕಂಡ ಘಟನೆಯನ್ನೇ ಲಜ್ಜಾದಲ್ಲಿ ದಾಖಲಿಸಿದ್ದೆ. ಭಾರತದಲ್ಲಿ ಬಾಬ್ರಿಮಸೀದಿಯನ್ನು ಕೆಡವಿದ ನಂತರ ಬಾಂಗ್ಲಾ ದೇಶದಲ್ಲಿ ಅನೇಕ ದೇವಾಲಯಗಳನ್ನು ಕೆಡವಲಾಯ್ತು. ಮತಾಂಧರ ಆಕ್ರೋಶಕ್ಕೆ ಅಲ್ಪಸಂಖ್ಯಾತ ಹಿಂದುಗಳು ಗುರಿಯಾದರು. 1993ರಲ್ಲಿ ಫೆಬ್ರವರಿಯಲ್ಲಿ ನಡೆದ ಪುಸ್ತಕ ಮೇಳದಲ್ಲಿ ನನ್ನ ಪುಸ್ತಕವನ್ನು ಮಾರಲಾಗಿತ್ತು. ಮೂರು ತಿಂಗಳ ನಂತರ ಪುಸ್ತಕವನ್ನು ನಿಷೇಧಿಸಿದರು.

1994ರ ಪ್ರಾರಂಭದಲ್ಲಿ ನಾನು ಫ್ರಾನ್ಸ್‌ನಿಂದ ಕಲ್ಕತ್ತಾಗೆ ಬಂದ ಸಂದರ್ಭದಲ್ಲಿ ಸ್ಟೇಟ್ಸ್‌ಮನ್ ಪತ್ರಿಕೆಯು ವಿವಾದಿತ ಸಂದರ್ಶನವನ್ನು ಪ್ರಕಟಿಸಿತು. ಅದು ಇನ್ನಷ್ಟು ಪರಿಸ್ಥಿತಿಯನ್ನು ಬಿಗಡಾಯಿಸಿತು. ಪತ್ರಕರ್ತರಿಗೆ ಕುರಾನ್ ಮತ್ತು ಶರಿಯತ್‌ನ ವ್ಯತ್ಯಾಸಗಳು ಗೊತ್ತಿಲ್ಲ. ನನ್ನನ್ನು ಸಂದರ್ಶಿಸಿದ ಪತ್ರಕರ್ತೆ 'ಕುರಾನ್ ಅನ್ನು ಮರುವಿಮರ್ಶಿಸಿ ಬರೆಯಬೇಕೆಂದು' ಹೇಳಿದೆನೆಂದು ಬರೆದಳು. ಮರುದಿನ ಪತ್ರಿಕೆಯವರಿಗೆ ಪತ್ರ ಬರೆದು ತಪ್ಪನ್ನು ತಿದ್ದಿಕೊಳ್ಳಲು ಹೇಳಿದೆ. ನಾನು ಕುರಾನ್ ಅನ್ನು ನಂಬುವುದಿಲ್ಲ, ಧಾರ್ಮಿಕ ಗ್ರಂಥಗಳು ಅಪ್ರಸ್ತುತ. ಆದ್ದರಿಂದ ನಾನೇಕೆ ಅದನ್ನು ಮರುವಿಮರ್ಶಿಸಲು ಹೇಳಲಿ? ನಾನು ಆಗ ಮತ್ತು ಈಗಲೂ ಕೇಳುತ್ತಿರುವುದು ಶರಿಯತ್ ಅನ್ನು ನಿಷೇಧಿಸಿ, ಮಹಿಳೆಯರು ಮತ್ತು ಪುರುಷರ ನಡುವೆ ಸಮಾನತೆ ತರುವ ಸಮಾನ ನಾಗರೀಕ ಸಂಹಿತೆಯನ್ನು ತರಬೇಕೆಂದು. ನಾನು ಬರೆದ ಪತ್ರವನ್ನು ಪ್ರಕಟಿಸಲಾಯ್ತು, ಆದರೆ ಬಾಂಗ್ಲಾ ದೇಶದ ಪತ್ರಿಕೆಗಳು ಮೊದಲಿನ ತಪ್ಪು ಹೇಳಿಕೆಯನ್ನಷ್ಟೆ ತೆಗೆದುಕೊಂಡವು. ಆ ಸಮಯದಲ್ಲಿ ರಾಜಕೀಯ ಮತ್ತು ಕೋಮುವಾದಿ ಗುಂಪುಗಳು ಒಂದಾಗಿ ನನ್ನ ವಿರುದ್ಧ ಧರಣಿ ನಡೆಸಿದರು. ಪ್ರತಿದಿನ 3 ಸಾವಿರ ಜನ, 5 ಸಾವಿರ ಜನ ನನ್ನ ವಿರುದ್ಧ ಹೊಂಚು ಹಾಕತೊಡಗಿದರು. ಆ ಸಮಯದಲ್ಲೆ ಸರ್ಕಾರ ನನಗೆ ಅರೆಸ್ಟ್ ವಾರೆಂಟ್ ನೀಡಿತು. ಸರ್ಕಾರ ಮತ್ತು ಕೋಮುವಾದಿ ಗುಂಪು ಒಂದಾದಾಗ ನನಗೆ ದಾರಿಯೇ ಇಲ್ಲದಂತಾಯ್ತು.

ಉನ್ಮತ್ತ ಜನರು ನನ್ನನ್ನು ಕೊಲ್ಲಬೇಕೆಂದಿದ್ದರು. ಮುಷ್ಕರ, ಹರತಾಳಗಳಿಗೆ ಕರೆಕೊಟ್ಟರು. 7-10 ದಿನಗಳ ಕಾಲ ಎಲ್ಲವನ್ನು ಬಂದುಮಾಡಿ ಸರ್ಕಾರದ ಮೇಲೆ ಒತ್ತಡ ತರಲಾಯ್ತು. ಮುಷ್ಕರದ ಸಮಯದಲ್ಲಿ ಅಂಗಡಿ ತೆರೆಯಲು ಹೋದ ಆರು ಜನರನ್ನು ಕೊಲ್ಲಲಾಯ್ತು. ನಾನು ಭೂಗತಳಾಗಬೇಕಾಯ್ತು. ಪೋಲೀಸರು ನನ್ನನ್ನು ಬಂಧಿಸಿದರೆ ನಾನು ಜೀವಂತವಾಗಿ ಹೊರ ಬರುವೆನೆಂಬ ನಂಬಿಕೆ ನನಗಿರಲಿಲ್ಲ. ರಾಜಕೀಯ ಕೊಲೆಗಳು ಬಾಂಗ್ಲಾ ದೇಶದಲ್ಲಿ ಮಾಮೂಲಿ, ನನ್ನನ್ನು ಕೊಂದು ಸ್ವರ್ಗಕ್ಕೆ ಹೋಗಬಹುದೆಂಬ ನಂಬಿಕೆಯುಳ್ಳ ಕೋಮುವಾದಿ ಪೋಲೀಸರೂ ಇರಬಹುದು. ನನ್ನ ಪರಿಸ್ಥಿತಿ ವಿಪರೀತ ಕಷ್ಟಕರವಾಯ್ತು. ಯಾರೂ ನನಗೆ ಆಶ್ರಯ ನೀಡಲು ತಯಾರಿಲ್ಲದ ಕಾರಣ ಅಡಗಿಕೊಳ್ಳಲು ನೆಲೆಯೇ ಇಲ್ಲದಂತಾಯ್ತು.

ಕೆಲವೇ ಕೆಲವು ಒಳ್ಳೆಯ ಜನ ನನ್ನನ್ನು ಬೆಂಬಲಿಸಿದರು. ಪ್ರತೀ ರಾತ್ರಿಯೂ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋಗಬೇಕಾಗುತ್ತಿತ್ತು. ಎಲ್ಲಿಯೂ ಒಂದು ರಾತ್ರಿಗಿಂತ ಹೆಚ್ಚು ಉಳಿಯಲಾಗುತ್ತಿರಲಿಲ್ಲ. 15 ಜನರುಳ್ಳ ಕುಟುಂಬವೊಂದರ ಸಣ್ಣ, ಕತ್ತಲ ಕೋಣೆಯೊಳಗೆ ನಾನಿದ್ದೆ. ಆ ಮನೆಯವರಲ್ಲಿ ಒಬ್ಬರನ್ನು ಬಿಟ್ಟು ಇನ್ಯಾರಿಗೂ ನಾನಿರುವುದು ತಿಳಿದಿರಲಿಲ್ಲ. ನನಗೆ ರಕ್ಷಣೆ ನೀಡುತ್ತಿದ್ದವರು ಜಾಗರೂಕರಾಗಿರಬೇಕಾಗಿರುತ್ತಿದ್ದರಿಂದ ನನ್ನಲ್ಲಿಗೆ ಅವರು ಆಗಾಗ್ಗೆ ಬರುತ್ತಿರಲಿಲ್ಲ. ಕದ್ದುಮುಚ್ಚಿ ಅರ್ಧರಾತ್ರಿಯಲ್ಲಿ ಊಟ ತಂದುಕೊಡುತ್ತಿದ್ದರು. 3-4 ದಿನಗಳ ಕಾಲ ಊಟವೇ ಇಲ್ಲದೆ ಇರುತ್ತಿದ್ದೆ. ನನಗೆ ವಿಪರೀತ ಭಯವಾಗುತ್ತಿತ್ತು. ನಿದ್ದೆ ಮಾಡಲಾಗುತ್ತಿರಲಿಲ್ಲ. ಆ ಕಗ್ಗತ್ತಲ ದಿನಗಳಲ್ಲೂ ಪರಿಸ್ಥಿತಿ ಬದಲಾಗಬಹುದೆಂಬ ಭರವಸೆ ನನ್ನಲ್ಲಿತ್ತು. ನನ್ನ ವಕೀಲರು ಸಹ ಬಿಡುಗಡೆಗೆ ತುಂಬಾ ಪ್ರಯತ್ನಿಸಿದರು. ಆದರೆ $1^1/_2$ (ಒರಿದೂವರೆ) ತಿಂಗಳ ನಂತರ ಅವರು ನಿನ್ನನ್ನು ಬಚಾವು ಮಾಡಲು ಸಾಧ್ಯವೆ ಇಲ್ಲ, ಇನ್ನು ಹೀಗೆ ಮುಂದುವರೆಯುವುದು ಸರಿಯಲ್ಲ, ಕಾನೂನು ಬಾಹಿರವಾಗಿ ನೀನು ದೇಶ ಬಿಟ್ಟುಹೋಗೆಂದು ಹೇಳಿದರು.

ಪರಿಸ್ಥಿತಿ ಕೈಮೀರಿ ಹೋಗಿತ್ತು. ಕೋಮುವಾದಿಗಳು ಬೀದಿಗಿಳಿದಿದ್ದರು, ಇಡೀ ದೇಶವೇ ಅವರ ಕೈಲಿತ್ತು. ಮತಾಂಧರ ಹಿಂಸೆಯನ್ನು ವಿರೋಧಿಸಿದ ಗುಂಪುಗಳನ್ನು ಹತ್ತಿಕ್ಕಲಾಯ್ತು. ಬಾಂಗ್ಲಾ ದೇಶ ಕೋಮುವಾದಿ ರಾಷ್ಟ್ರವಾಗಿಬಿಟ್ಟಿತು. ಸರ್ಕಾರಕ್ಕೆ ಮತಾಂಧರನ್ನು ಹಿಡಿತದಲ್ಲಿಡಲು ಸಾಧ್ಯವಾಗಲಿಲ್ಲ, ಇಚ್ಛಿಸಲೂ ಇಲ್ಲ. ಕೆಲವರು ನನಗೊಂದು ವಿಗ್ ಮತ್ತು ಬುರ್ಖಾವನ್ನು ತಂದುಕೊಟ್ಟರು. ಆ ಕ್ಷಣದಲ್ಲಿ ನನಗೆ ನಾನು ಬದುಕಿ ಉಳಿಯುವೆನೆಂದೆನಿಸಲಿಲ್ಲ. ಅದು ಸಾಧ್ಯವೇ ಇಲ್ಲ ಎನಿಸಿತು. ಕೆಲವರು ನನ್ನಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದೆಂದುಕೊಂಡರು. ಅಂತರ ರಾಷ್ಟ್ರೀಯ ಒತ್ತಡವು ಹೆಚ್ಚಾಯ್ತು. ನನಗೆ ಜಾಮೀನು ನೀಡುವಂತೆ ಅನೇಕ ಪಾಶ್ಚಿಮಾತ್ಯ ಸರ್ಕಾರಗಳು ಒತ್ತಾಯಿಸಿದ್ದು ಫಲಪ್ರದವಾಗಲಿಲ್ಲ. ಎರಡು ತಿಂಗಳ ಮಾತುಕತೆಯ ನಂತರ ಮತ್ತು ಯುರೋಪು ಮತ್ತು ಜನತಾಂತ್ರಿಕ ಸರ್ಕಾರಗಳ ಸಹಾಯದಿಂದ ಸರ್ಕಾರವು ನನ್ನನ್ನು ದೇಶದಿಂದ ಹೊರಕಳುಹಿಸಲು ಒಪ್ಪಿತ್ತು. ಕಾವಲು ಪೋಲೀಸಿನವರೊಂದಿಗೆ

ನನ್ನನ್ನು ವಿಮಾನ ನಿಲ್ದಾಣಕ್ಕೆ, ಅಲ್ಲಿಂದ ಸ್ವೀಡನ್ನಿಗೆ ಕರೆದೊಯ್ಯಲಾಯಿತು. ತಕ್ಷಣಕ್ಕೆ ಸ್ವೀಡನ್ನಿನಲ್ಲಿರುವುದು ಒಳ್ಳೆಯದೆಂದು ನಿರ್ಧಾರವಾಗಿತ್ತು. ಇದು ನಡೆದದ್ದು 1994 ಆಗಸ್ಟ್‌ನಲ್ಲಿ.

ಸ್ವೀಡನ್ನಿನ ವಿದೇಶಾಂಗ ಇಲಾಖೆಯ ಮುಖ್ಯ ಪೋಲೀಸ್ ಅಧಿಕಾರಿಯು ಢಾಕದಿಂದ ನನ್ನನ್ನು ಕರೆದುಕೊಂಡು ಹೋಗಲು ಬಂದರು. ನಾನು ನನ್ನ ದೇಶವನ್ನು ಬಿಟ್ಟಾಗ ಸಮಯ ಬೆಳಗಿನ ಜಾವ 2 ಗಂಟೆ. ಭದ್ರತಾ ಪೋಲೀಸ್‌ನವರು ನಾನಿರುವ ಜಾಗದಿಂದ ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿತ್ತು. ಸುಮಾರು 2 ಗಂಟೆಗಳ ಕಾಲ (ವಿಮಾನ ಹತ್ತುವ ಮೊದಲು) 45 ದಿನಗಳ ಕಾಲ ನನಗೆ ಆಶ್ರಯ ನೀಡಿದವರ ಹೆಸರಗಳನ್ನು ತಿಳಿಸಲು ನನಗೆ ಹೇಳಿದರು. ನಾನು ಯಾರ ಹೆಸರನ್ನೂ ಹೇಳಲಿಲ್ಲ. ಅಂತರ ರಾಷ್ಟ್ರೀಯ ಒತ್ತಡಕ್ಕೆ ಮಣಿದು ನನ್ನನ್ನು ಹೊರಗೆ ಕಳುಹಿಸಲು ಅನುಮತಿ ನೀಡಿದ ಬಾಂಗ್ಲಾ ಸರ್ಕಾರಕ್ಕೆ ಅವರು ಕಟ್ಟುಬಿದ್ದಿದ್ದರು. ಅಂತೂ ನನ್ನನ್ನು ಸ್ವೀಡನ್ನಿನ ಅಧಿಕಾರಿಗಳು ಕರೆದೊಯ್ದರು, ಹಾಗಾಗಿ ನನ್ನ ಜೀವ ಉಳಿಯಿತು. ಆದರೆ ಆ 60 ದಿನಗಳು ಈಗಲೂ ನನ್ನನ್ನು ಕಾಡುತ್ತದೆ. ಆ 60 ದಿವಸಗಳನ್ನು ನಾನು ಹೇಗೆ ಕಳೆದೆ? ಆ ದಿನಗಳು ಈಗಲೂ ನನಗೆ ಭಯಂಕರ ಕನಸಿನಂತಿದೆ.

ಪ್ರ : ನಿಮ್ಮ ಪ್ರಾಣಕ್ಕೆ ಕುತ್ತುತಂದ ನಿಮ್ಮ ನಿಲುವಿನ ಬಗ್ಗೆ ಪಶ್ಚಾತ್ತಾಪವಿದೆಯೆ?

ಉ : ಖಂಡಿತವಾಗಿಯೂ ಇಲ್ಲ.

ಪ್ರ : ನಿಮ್ಮ ದೇಶದ ನೆನಪು ಕಾಡುತ್ತದೆಯೇ?

ಉ :ಹೌದು ತುಂಬಾ ಕಾಡುತ್ತದೆ. ನನ್ನ ದೇಶದಿಂದ ಹೊರಬಂದು ಆರು ವರ್ಷಗಳಾದವು. ವರ್ಷಗಳನ್ನು ಎಣಿಸಲು ನನಗೆ ಭಯವಾಗುತ್ತದೆ. ದೇಶ ಬಿಟ್ಟು ಮೂರು ವರ್ಷಗಳ ಕಾಲ ಬರೆಯಲು ನನಗೆ ಸಾಧ್ಯವಾಗಲೇ ಇಲ್ಲ. ನಿಧಾನವಾಗಿ ಮತ್ತೆ ಪ್ರಾರಂಭಿಸಿದೆ.

ಪ್ರ : ಈಗ ಏನು ಬರೆಯುತ್ತಿದ್ದೀರಿ?

ಉ : ನನ್ನ ಆತ್ಮಕತೆಯ ಮೊದಲ ಭಾಗ 'ಅಮಾರ್ ಮೇಯಿಬೆಲ' (ಬಾಲ್ಯ) ಬರೆದು ಮುಗಿಸಿದ್ದೇನೆ. ಇದು ಫ್ರೆಂಚ್, ಜರ್ಮನಿ ಮತ್ತಿನ್ನಿತರ ಯುರೋಪಿನ ಭಾಷೆಗಳಲ್ಲಿ ಯಾವುದೇ ಕತ್ತರಿ ಪ್ರಯೋಗವಿಲ್ಲದೆ ಪ್ರಕಟಗೊಂಡಿದೆ. ಇದರ ಬೆಂಗಾಲಿ ರೂಪವನ್ನು ಪಶ್ಚಿಮ ಬಂಗಾಳದ ಮುದ್ರಕರೊಬ್ಬರು ಕೆಲವೆಡೆ ಕತ್ತರಿಸಿಯೇ ಪ್ರಕಟಿಸಬೇಕಾಯ್ತು. ಇದರ ಇಂಗ್ಲೀಷ್ ಅನುವಾದವನ್ನು ಮುದ್ರಿಸಿದವರು ಬಾಂಬೆಯ ಕಾಲಿ ಫಾರ್ ವಿಮೆನ್ ಅವರು. ಅದೂ ಸಹ ಸೆನ್ಸಾರ್‌ಗೆ ಒಳಪಟ್ಟಿತು. ಈಗ ಆತ್ಮಕತೆಯ ಎರಡನೆ ಭಾಗ 'ನನ್ನ ತಾರುಣ್ಯ'ವನ್ನು ಬರೆಯುತ್ತಿದ್ದೇನೆ. ಈ ವರ್ಷದ ಕೊನೆಯ ವೇಳೆಗೆ ಬರೆದು ಮುಗಿಸುವೆ.

ಪ್ರ : ಸ್ವಾತಂತ್ರ್ಯ ಹೋರಾಟದ ಮೊದಲಿನ ಮತ್ತು ನಂತರದ ಬಾಂಗ್ಲಾ ದೇಶದಲ್ಲಿ ನೀವು ಬೆಳೆದುದರ ಅನುಭವ ಏನು?

ಉ : ನನ್ನ ಆತ್ಮಕತೆಯ ಮೊದಲ ಭಾಗದಲ್ಲಿ ಈ ಕುರಿತು ಬರೆದಿದ್ದೇನೆ. ನಾನು 1962ರಲ್ಲಿ ಹುಟ್ಟಿದೆ. 1971ರಲ್ಲಿ ಯುದ್ಧವನ್ನು ಕಂಡೆ. ಪಾಕಿಸ್ತಾನಿ ಆಡಳಿತಗಾರರನ್ನು ವಿರೋಧಿಸಿ, ಬೀದಿಗಳಲ್ಲಿ ಬೃಹತ್ ಪ್ರತಿಭಟನೆ ನಡೆದುದನ್ನು ನಾನೇ ಕಂಡಿದ್ದೆ. ಬೆಂಗಾಲಿ ಜನರು ತಮ್ಮ ಭಾಷಾ identityಗಾಗಿ ಹೋರಾಡುತ್ತಿದ್ದರು. 1969ರಲ್ಲಿ ನಡೆದುದು ಒಂದು ದೊಡ್ಡ ಚಳುವಳಿ. 1971ರಲ್ಲಿ ಬಾಂಗ್ಲಾ ದೇಶದ ಜನ್ಮತಾಳಿದಾಗ ಅದೊಂದು ಜಾತ್ಯಾತೀತ ದೇಶವಾಗಿತ್ತು. ಅಗ ನಡೆದದ್ದು ಜಾತ್ಯಾತೀತತೆಗಾಗಿ ನಡೆದ ಹೋರಾಟವಾಗಿತ್ತು. 1971ರ ಬಾಂಗ್ಲಾ ದೇಶದ ಯುದ್ಧ ಧಾರ್ಮಿಕ ಐಕ್ಯತೆ (ಮುಸ್ಲಿಂ) ಸುಳ್ಳೆಂದು ಸಾಬೀತು ಪಡಿಸಿತು. ಅದೊಂದು ಇತ್ಯಾತ್ಮಕ ಯುದ್ಧವಾಗಿತ್ತು. ಅದು ಭಾರತದ ವಿಭಜನೆ ತಪ್ಪೆಂದೂ ಸಹ ಸಾಬೀತು ಪಡಿಸಿತು. ಆ ನಂತರ ಏನೇನೋ ಆಗಿ ಹೋಯಿತು.

ರಾಜಕೀಯ ನಾಯಕರುಗಳು ಅಧಿಕಾರಕ್ಕಾಗಿ ಹಸಿದಿದ್ದರು. ಬಾಂಗ್ಲಾದೇಶದ ಹುಟ್ಟಿಗೆ ಕಾರಣರಾದ ಶೇಖ್ ಮುಜೀಬ್-ಉರ್-ರೆಹಮಾನ್ ಅವರನ್ನು ಮಿಲಿಟರಿಯವರು ಕೊಂದುಹಾಕಿದರು. ಮಿಲಿಟರಿಯವರು ಅಧಿಕಾರದಲ್ಲುಳಿಯಬೇಕೆಂಬ ತಮ್ಮ ಸ್ವಹಿತಾಸಕ್ತಿಗಾಗಿ ಧರ್ಮವನ್ನು ಬಳಸಿಕೊಂಡರು. ಜನರ ಬಗ್ಗೆ ಅವರಿಗೆ ಯಾವುದೇ ಕಾಳಜಿ ಇರಲಿಲ್ಲ. ಹೀಗೆ ಧರ್ಮ, ರಾಜಕೀಯದೊಳಗೆ ಮತ್ತೆ ನುಸುಳಿತು. ಜಾತ್ಯಾತೀತತೆಯನ್ನು ಗಾಳಿಗೆ ತೂರಲಾಯಿತು. ಮೂಲಭೂತವಾದಿಗಳು ಕಾನೂನುಬದ್ಧರಾಗಿಬಿಟ್ಟರು. 1971 ರಿಂದ 1975ರ ವರೆಗೆ ಧರ್ಮ ರಾಜಕೀಯವನ್ನು ಬಹಿಷ್ಕರಿಸಲಾಗಿತ್ತು. ಯಾವ ಧಾರ್ಮಿಕ ವ್ಯಕ್ತಿಗಳು ಅಥವಾ ಜಮೈತ-ಇ-ಇಸ್ಲಾಂನಂತ ಗುಂಪುಗಳಿಗೆ ರಾಜಕೀಯದಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ. ಅದು ನಿಜಕ್ಕೂ ಉತ್ತಮ ಬೆಳವಣಿಗೆಯಾಗಿತ್ತು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಧಾರ್ಮಿಕ ಗುಂಪುಗಳು ಪಾಕಿಸ್ತಾನಿ ಪಡೆಗಳ ಪರವಹಿಸಿ ಅನೇಕ ಬೆಂಗಾಲಿ ಜನರನ್ನು ಕೊಂದುಹಾಕಿದ್ದವು. ಆ ಕಾರಣಕ್ಕಾಗಿಯೇ ಧರ್ಮ ರಾಜಕೀಯವನ್ನು ಬಹಿಷ್ಕರಿಸಲಾಗಿತ್ತು. ಮುಜೀಬ್-ಉರ್-ರೆಹಮಾನ್ ಅವರ ಸಾವಿನ ನಂತರ ಆ ಗುಂಪುಗಳು ಮತ್ತೆ ಜಾರಿಗೆ ಬಂದವು. ಅವುಗಳ ಮೇಲಿನ ನಿಷೇಧವನ್ನು ತೆಗೆಯಲಾಯ್ತು.

ಬಾಂಗ್ಲಾ ದೇಶದ ಜಾತ್ಯಾತೀತ ಎಳೆಯನ್ನು ಮೂಲಭೂತವಾದಿಗಳು ನಾಶ ಮಾಡುವುದು ಹೆಚ್ಚಾಗುತ್ತಾ ಹೋಯಿತು. ಅನೇಕ ಸ್ವಯಂ ಸೇವಾ ಸಂಸ್ಥೆಗಳ ಮೇಲೆ ದಾಳಿ ಮಾಡಲಾಯ್ತು. 1992-93ರ ಅವಧಿಯಲ್ಲಿ, ದೇಶದ ಹಳೆಯ, ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಯೊಂದು ನಡೆಸುತ್ತಿದ್ದ 120 ಬಾಲಕಿಯರ ಶಾಲೆಗಳನ್ನು ಸುಟ್ಟುಹಾಕಲಾಯ್ತು. ಕ್ರಿಶ್ಚಿಯನ್ ಶಾಲೆಗಳು ಹುಡುಗಿಯರನ್ನು ಕ್ರಿಶ್ಚಿಯನ್ನರಾಗಿ ಮಾಡಿಬಿಡುತ್ತವೆಂಬ ಭ್ರಮೆಯನ್ನು ಹಬ್ಬಿಸಿ ಶಾಲೆಗಳನ್ನು ಸುಡಲಾಯ್ತು. ಸರ್ಕಾರ ಇವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ಅಲ್ಲದೆ ಸ್ವಯಂ ಸೇವಾ ಸಂಸ್ಥೆಗಳೇ ಮೂಲಭೂತವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲು ಪ್ರಾರಂಭಿಸಿದವು. ಮೂಲಭೂತವಾದಿಗಳನ್ನು ಮೆಚ್ಚಿಸಲು ಶಾಲೆಗಳ ಜೊತೆಯಲ್ಲಿ ಮದ್ರಸಾಗಳನ್ನು ಪ್ರಾರಂಭಿಸಿದರು. ರಾಜಿ ಮಾಡಿಕೊಳ್ಳಲು ಶಾಂತಿಯನ್ನು ಕಂಡುಕೊಳ್ಳಲು ಧಾರ್ಮಿಕ ಶಿಕ್ಷಣವನ್ನು ಅಳವಡಿಸತೊಡಗಿದರು. ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಮೂಲಭೂತವಾದಿಗಳು ಬೆದರಿಸುತ್ತಾರೆ. ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ಹೆಂಡತಿಯರನ್ನು ವಿಚ್ಛೇದಿಸಬೇಕೆಂದು ಗಂಡಂದರಿಗೆ ಫಟ್ವಾ (ಆಜ್ಞೆ)ವಿಧಿಸಲಾಗಿತ್ತು. ಅನೇಕ ಮಹಿಳೆಯರು ಬಲವಂತವಾಗಿ ಸ್ವಯಂ ಸೇವಾ ಸಂಸ್ಥೆಗಳಲ್ಲಿನ ಕೆಲಸವನ್ನು ಬಿಟ್ಟರು. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಒಳ್ಳೆ ಕೆಲಸ ಮಾಡಿದರೆ ಸಾಕು ಅವರು ಮೂಲಭೂತವಾದಿಗಳ ಕ್ರೂರ ದೃಷ್ಟಿಗೆ ಗುರಿಯಾಗಿಬಿಡುತ್ತಾರೆ.

ಪ್ರ: ನಾಸ್ತಿಕತೆಯತ್ತ ನೀವು ಸಾಗಿಬಂದುದು ಹೇಗೆ?

ಉ: ನಾನು ಧಾರ್ಮಿಕ ಗ್ರಂಥಗಳನ್ನು ಓದಿದೆ. ನಾಸ್ತಿಕಳಾಗಲು ಅಷ್ಟು ಸಾಕಾಯಿತು. ನನ್ನ ಆತ್ಮಕತೆಯಲ್ಲಿ ಅದನ್ನು ವಿವರಿಸಿದ್ದೇನೆ. ನಾನು 13 ವಯಸ್ಸಿನವಳಾಗಿದ್ದಾಗ ನಾಸ್ತಿಕತೆಯ ಪ್ರಕ್ರಿಯೆ ಪ್ರಾರಂಭವಾಯ್ತು ಧುತ್ತೆಂದು ಅದು ಪ್ರಾರಂಭವಾಗಲಿಲ್ಲ. ಪ್ರತಿದಿನವೂ ನನ್ನ ತಾಯಿ ಕುರಾನ್ ಓದಲು ಹೇಳುತ್ತಿದ್ದಳು. ನನ್ನ ತಾಯಿಯನ್ನು ನಾನು ಓದುತ್ತಿರುವುದರ ಅರ್ಥವೇನೆಂದು ಕೇಳುತ್ತಿದ್ದೆ. ತುಂಬಾ ಧರ್ಮನಿಷ್ಠಳಾಗಿದ್ದ ನನ್ನ ತಾಯಿ "ಅರ್ಥ ತಿಳಿದುಕೊಳ್ಳುವ ಅಗತ್ಯವಿಲ್ಲ ಸುಮ್ಮನೆ ಓದು" ಎನ್ನುತ್ತಿದ್ದಳು. ನನಗೆ ಸಮಾಧಾನ ವಾಗುತ್ತಿರಲಿಲ್ಲ. ಅರ್ಥ ತಿಳಿದುಕೊಳ್ಳಲೇಬೇಕೆಂಬ ಕುತೂಹಲ ಮೂಡುತ್ತಿತ್ತು. ಈ ಕುತೂಹಲವೇ ಬೆಂಗಾಲಿ ಅನುವಾದದ ಕುರಾನ್‌ನನ್ನು ಹುಡುಕಲು ಪ್ರೇರೇಪಿಸಿತು. ಬೆಂಗಾಲಿಯಲ್ಲಿ ಓದಿದ ಮೇಲೆ ನನ್ನೊಳಗೆ ಅನೇಕ ಪ್ರಶ್ನೆಗಳು ಎದ್ದವು. ತಾಯಿ ನೀಡಿದ ವಿವರಣೆಯಿಂದ ಸಮಾಧಾನವಾಗಲಿಲ್ಲ. ಸೂರ್ಯ ಭೂಮಿಯ ಸುತ್ತ ಸುತ್ತುತ್ತದೆ ಮತ್ತು ಇಂತಹ ಅನೇಕ ವಿಷಯಗಳು ಕುರಾನ್‌ನಲ್ಲಿದ್ದವು. ಅವು ಶಾಲೆಯಲ್ಲಿ ನಾನು ಓದುತ್ತಿದ್ದ ಪಠ್ಯಕ್ಕೆ ತದ್ವಿರುದ್ಧವಾಗಿದ್ದವು. ನನ್ನ ಜೀವನದ ಅನುಭವ ನನಗೆ ಬೇರೆಯದನ್ನೆ ಕಲಿಸಿತು. ಪುರುಷರು ಮಹಿಳೆಯರಿಗಿಂತ ಮೇಲು, ಕಾರಣ ಅವರು ಹಣ ಸಂಪಾದಿಸುತ್ತಾರೆ. ಗಂಡನ ಆಜ್ಞೆಯನ್ನು ಪಾಲಿಸದಿದ್ದಾಗ ಅವನಿಗೆ ಹೆಂಡತಿಯನ್ನು ಹೊಡೆಯುವ ಅಧಿಕಾರವಿದೆ. ಇದರಿಂದ ಆಶ್ಚರ್ಯವಾಯಿತು ನನಗೆ. ಇಂತಹದು ಪವಿತ್ರ ಗ್ರಂಥದಲ್ಲಿರಲು ಸಾಧ್ಯವೆ? ಎನಿಸಿತು. ಸಮಾಜದಲ್ಲೂ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದುದನ್ನು ನಾನು ನೋಡಿದೆ.

ಶಾಲೆಯಲ್ಲಿ ವಿಜ್ಞಾನದ ಓದು, ಮನೆಯಲ್ಲಿ ಕುರಾನ್ ಓದು ನನ್ನನ್ನು ವೈರುಧ್ಯಗಳಿಗೆ ಮುಖಾಮುಖಿಯಾಗಿಸಿತು. ಪುಸ್ತಕದಲ್ಲಿ ಬರೆದಿರುವುದು ತರ್ಕವಿಲ್ಲದ್ದು, ಅಮಾನವೀಯವಾದದ್ದು ಎನಿಸಿತು. ಈ ವಿಷಯಗಳನ್ನು ನನ್ನ ಆತ್ಮಕತೆ 'ಬಾಲ್ಯ'ದ ಭಾಗದಲ್ಲಿ ಬರೆದಿದ್ದೇನೆ. ಇದನ್ನು ಅನೇಕ ಪ್ರಕಾಶಕರು ಸೆನ್ಸಾರ್ ಮಾಡಿದ್ದಾರೆ. ಸಣ್ಣ ವಯಸ್ಸಿನಲ್ಲಿ ನಾನು ತುಂಬಾ ನಾಚಿಕೆ ಸ್ವಭಾವದವಳಾಗಿದ್ದೆ. ಓದಿನ ವಿಷಯಕ್ಕಾಗಿ ಅಪ್ಪನ ಹತ್ತಿರ ತುಂಬಾ ಹೊಡೆತ ತಿನ್ನುತ್ತಿದ್ದೆ. ನಾನು ಪ್ರತಿಭಟಿಸುತ್ತಲೇ ಇರಲಿಲ್ಲ. ಆದರೆ ಎಲ್ಲ ನೋವನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿದ್ದೆ. ಮುಂದೊಂದು ದಿನ ಬರವಣಿಗೆಯ ಮೂಲಕ ಕಾರಿಕೊಳ್ಳಬೇಕೆಂಬುದಕ್ಕೆ ಎನಿಸುತ್ತೆ. ಈ ರೀತಿಯ ಅನೇಕ ಘಟನೆಗಳ ಮೂಲಕ ಧರ್ಮದಲ್ಲೇನೊ ತಪ್ಪಿದೆ ಎಂಬ ಅನುಭವವಾಗತೊಡಗಿತು. ನಾನು ಮುಸ್ಲಿಂ ಕುಟುಂಬದಲ್ಲಿ ಹುಟ್ಟಿ ಬೆಳೆದವಳಾಗಿದ್ದರಿಂದ ನನ್ನ ಪ್ರತಿಭಟನೆ ಇಸ್ಲಾಂ ವಿರುದ್ಧವಾಗಿತ್ತು. ಎಲ್ಲಾ ಧರ್ಮಗಳಲ್ಲೂ ಮೂಲಭೂತವಾದವಿದೆ ಮತ್ತು ಎಲ್ಲಾ ಧರ್ಮಗಳಲ್ಲೂ ಮಹಿಳೆಯರು ಹಿಂಸೆಗೊಳಪಟ್ಟಿದ್ದಾರೆ.

ಪ್ರ : ಲೇಖಕಿಯಾಗಿ ನಿಮ್ಮ ಮುಖ್ಯ ಕಾಳಜಿ ಏನು? ಲಿಂಗ ಪ್ರಶ್ನೆಯೆ? ಅಥವಾ ಅಲ್ಪಸಂಖ್ಯಾತರ ಪ್ರಶ್ನೆಯೆ?

ನನ್ನ ಕಾಳಜಿ ನಿಜವಾಗಲು ದಮನಿತ ಜನಗಳ ಬಗ್ಗೆ. ಮಹಿಳೆಯರು, ಅಲ್ಪಸಂಖ್ಯಾತರು, ಬಡವರು ದಮನಿತರು. ಅವರ ಬಗ್ಗೆ ನಾನು ಬರೆಯುತ್ತೇನೆ, ಅವರನ್ನು ಸಮರ್ಥಿಸಿಕೊಳ್ಳುತ್ತೇನೆ.

ಪ್ರ : ಬರವಣಿಗೆ ಮೂಲಕ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೀರಿ. ಯಾರ ದನಿಯನ್ನು ನಿಮ್ಮ ಬರವಣಿಗೆಯಲ್ಲಿ ಚಿತ್ರಿಸುತ್ತಿರೋ ಆ ಜನರಿಗೆ ಏನಾದರು ವ್ಯತ್ಯಾಸ ಕಂಡಿದೆಯೆ? ನಿಮ್ಮ ಬರವಣಿಗೆ ಒಟ್ಟಾರೆ ಒಂದು ಬದಲಾವಣೆಯನ್ನು ತಂದಿದೆಯೆ?

ಉ : ನಮ್ಮ ಉಪಖಂಡದ ಶೇ. 70-80ರಷ್ಟು ಜನ ಓದು ಬರಹ ಬಾರದವರು. ಆದ್ದರಿಂದ ಲೇಖಕಿಯಾಗಿ ನಾನೆಷ್ಟು ಜನರನ್ನು ತಲುಪಲು ಸಾಧ್ಯ? ಇದು ಮೊದಲ ಪ್ರಶ್ನೆ. ನಗರಗಳಲ್ಲಿ ಮಧ್ಯಮ ವರ್ಗದ, ಶಿಕ್ಷಣ ಪಡೆದ ಮಹಿಳೆಯರಿದ್ದಾರೆ. ಹೆಚ್ಚಿನ ಜನ ಹಳ್ಳಿಗಳಲ್ಲಿ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ನಾನು ಪತ್ರಿಕೆಗಳಲ್ಲಿ ಅಂಕಣ ಬರೆಯುತ್ತಿದ್ದಾಗ, ಅನೇಕ ಜನಸಾಮಾನ್ಯ ಮಹಿಳೆಯರು ಪ್ರತಿಕ್ರಿಯಿಸುತ್ತಿದ್ದರು. ನಾನು ಅವರ ಕತೆಯನ್ನು ಬರೆಯುತ್ತಿರುವೆನೆಂದು ಅದನ್ನು ನಿಲ್ಲಿಸಬಾರದೆಂದು ಕೇಳಿಕೊಳ್ಳುತ್ತಿದ್ದರು. ಅವರು ಮೌನವಾಗಿ ನನ್ನನ್ನು ಬೆಂಬಲಿಸುತ್ತಿರುವುದಾಗಿ ಹೇಳುತ್ತಿದ್ದರು. ಒಬ್ಬಳು ಮಹಿಳೆ ನನ್ನ ಓದನ್ನು ಅರ್ಧಕ್ಕೆ ಬಲವಂತವಾಗಿ ನಿಲ್ಲಿಸಲಾಗಿತ್ತು, ಆದರೆ ನಿಮ್ಮ ಅಂಕಣ ಓದಿದ ಮೇಲೆ ಸ್ಫೂರ್ತಿ ಬಂದು ಮತ್ತೆ ಓದಲು ಪ್ರಾರಂಭಿಸಿದ್ದೇನೆಂದು ಬರೆದಿದ್ದಳು. ಮೂಕರಾಗಿ ಗಂಡಂದಿರು ಕೊಡುವ ಹಿಂಸೆಯನ್ನು ಸಹಿಸುತ್ತಿದ್ದವರ ಅನೇಕ ಕತೆಗಳಿದ್ದವು. ಓದಿದ ಹೆಂಗಸರನ್ನು ಕೆಲಸಕ್ಕೆ ಹೋಗಲು ಬಿಡುತ್ತಿರಲಿಲ್ಲ. ಅಂತಹ ಮಹಿಳೆಯರು ನನ್ನ ಅಂಕಣಗಳಿಂದ ಸ್ಫೂರ್ತಿ ಪಡೆಯುತ್ತಿದ್ದರು. ಆದರೆ ಅಂತಹ ಮಹಿಳೆಯರ ಸಂಖ್ಯೆ ಸಣ್ಣದು. ನಾನಿನ್ನೂ ತಲುಪಬೇಕಾಗಿರುವ ಮಹಿಳೆಯರಿನ್ನೂ ತುಂಬಾ ದೂರದಲ್ಲಿದ್ದಾರೆ. ಅವರಿಗೆ ಓದಲು, ಬರೆಯಲು ಬರುವುದಿಲ್ಲ. ಅವರ ಬಗ್ಗೆ ಯೋಚಿಸುತ್ತೇನೆ.

ನನ್ನ ಬರಹಗಳು ವಿವಾದಾಸ್ಪದವಾದಾಗಿನಿಂದ ಮೂಲಭೂತವಾದಿಗಳ ದಾಳಿಗೆ ಗುರಿಯಾಗಿದ್ದೇನೆ, ಅವಮಾನಿತಳಾಗಿದ್ದೇನೆ, ಹೊಡೆತ ತಿಂದಿದ್ದೇನೆ. ಸಾರ್ವಜನಿಕ ಸ್ಥಳಗಳಲ್ಲಿ ನನ್ನನ್ನು ಕಲ್ಲಿನಿಂದ ಹೊಡೆದಿದ್ದಾರೆ. ನಾನು ಹೊರಗೆ ಹೋಗಲು ಸಾಧ್ಯವಿರಲಿಲ್ಲ. ಇದು ದೂರದ ಹಳ್ಳಿಗಳೊಂದಿಗೆ ಸಂಪರ್ಕ ಬೆಳೆಸಲು ಅಡ್ಡಿಯಾಯಿತು. ನನ್ನ ಕೋಣೆಯೊಳಗೆ ಬಂಧನದ ಜೀವನ ನಡೆಸುತ್ತಿದ್ದೆ. ನಾನು ಪ್ರೇಮ ಕವಿತೆಗಳನ್ನು (1975ರಿಂದ) ಬರೆಯುವಾಗ ಎಲ್ಲಾ ಚೆನ್ನಾಗಿತ್ತು. 1990 ರಿಂದ ಈಚೆಗೆ ನನ್ನ ಬರಹಗಳು ರಾಜಕೀಯ ಸಾಮಾಜಿಕ ರೂಪ ಪಡೆದವು. ಮತ್ತು ಅವು ಮಹಿಳೆಯರ ಜೀವನಕ್ಕೇ ನೇರ ಸಂಬಂಧಿಸಿದ್ದವು. ಆಗಿನಿಂದ ಸಮಸ್ಯೆಗಳು ಪ್ರಾರಂಭವಾದವು. ಸಮಸ್ಯೆಗಳು ಎಷ್ಟೇ ಬಂದರೂ ಪ್ರತಿಷ್ಠೆಯನ್ನು ಪ್ರಶ್ನಿಸುವ ಯೋಚನೆಗಳನ್ನು ತಡೆಯಲು ಸಾಧ್ಯವಿಲ್ಲ ಎಂಬುದು ನನ್ನ ನಂಬಿಕೆ.

ಪ್ರ : ಲೇಖಕರು ನಿರ್ವಹಿಸಬೇಕಾದ ಪಾತ್ರವೇನು? ಸಾಮಾಜಿಕ ಚಳುವಳಿಯೊಂದಿಗೆ ಆಕೆಯ/ಆತನ ಸಂಬಂಧ ಹೇಗಿರಬೇಕು?

ನಾನು ಈಗಲೂ, ಹಿಂದೆಯೂ ಬರಹಗಾರ್ತಿಯಷ್ಟೇ. ನಾನು ವೈದ್ಯಳಾಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಏನನ್ನಾದರೂ ಹೇಳಲೇಬೇಕೆನಿಸುತ್ತಿದ್ದರಿಂದಾಗಿ ಬರೆಯಲು ಪ್ರಾರಂಭಿಸಿದೆ. ವೈದ್ಯಳಾಗಿ ಜನರ ಖಾಯಿಲೆ ವಾಸಿ ಮಾಡುತ್ತಿದ್ದೆ, ಲೇಖಕಿಯಾಗಿ ಸಮಾಜದ ಖಾಯಿಲೆಯನ್ನು ವಾಸಿ ಮಾಡಲು ಪ್ರಯತ್ನಿಸಿದೆ. ನಾನು ಲೇಖಕಿಯಾಗಬೇಕೆಂದು ಬಯಸಿರಲಿಲ್ಲ, ಯಾವುದೇ ಮಹಿಳಾ ಸಂಘಟನೆಯ ಸದಸ್ಯೆಯೂ ಆಗಿರಲಿಲ್ಲ. ತಸ್ಲೀಮಾ ಯಾವುದೇ ಚಳುವಳಿಯಲ್ಲಿ ಭಾಗವಹಿಸಿಲ್ಲ, ಬೀದಿಗಿಳಿದಿಲ್ಲ, ಆಕೆಯನ್ನು ಸ್ತ್ರೀವಾದಿ ಎಂದು ಯಾಕೆ ಕರೆಯುತ್ತಾರೆ? ಎಂದು ಜನರು ಪ್ರಶ್ನಿಸುತ್ತಿದ್ದರು. ಉದ್ದೇಶಪೂರ್ವಕವಾಗಿಯೇ ನಾನು ಯಾವುದೇ ಸಂಘಟನೆಯ ಸದಸ್ಯೆಯಾಗಲಿಲ್ಲ. ಯಾಕೆಂದರೆ ವ್ಯಕ್ತಿಯಾಗಿ ನನಗನಿಸಿದ್ದನ್ನು ಹೇಳುವ ಹಕ್ಕಿದೆ. ಮಹಿಳಾ ಸಂಘಟನೆಗಳು ತುಂಬಾ ರಾಜಿ ಮಾಡಿಕೊಂಡಿವೆ. ಆ ರೀತಿಯ ರಾಜಿ ಮನೋಭಾವ ನನ್ನದಲ್ಲ, ನನ್ನ ವಿರುದ್ಧ ಪ್ರತಿಭಟನೆ ನಡೆದ ಸಂದರ್ಭದಲ್ಲಿ ಮಹಿಳಾ ಸಂಘಟನೆಗಳ ಪ್ರತಿಕ್ರಿಯೆ ನನ್ನಲ್ಲಿ ಆಶ್ಚರ್ಯ ಹುಟ್ಟಿಸಿತು. ನೀವು ನಮ್ಮ ಸಂಘಟನೆಯ ಸದಸ್ಯರಾದರೆ ನಾವು ನಿಮ್ಮನ್ನು ಬೆಂಬಲಿಸುತ್ತೇವೆ ಎಂದು ಹೇಳಿದ್ದು ಆಶ್ಚರ್ಯ ಹುಟ್ಟಿಸಿತು.

ಪ್ರ : ನೀವು ಬಾಂಗ್ಲಾದೇಶ ಮತ್ತು ಪಶ್ಚಿಮ ಬಂಗಾಳದ ವಿಲೀನವಾಗಿ ಪ್ರತ್ಯೇಕ ಬೆಂಗಾಲಿ ಐಡೆಂಟಿಟಿಯನ್ನು ಹೊಂದಬೇಕೆನ್ನುವುದರ ಬಗ್ಗೆ ತುಂಬಾ ಬರೆದಿದ್ದೀರಿ, ಈಗಲೂ ಆ ನಿಲುವನ್ನು ಸಮರ್ಥಿಸುತ್ತೀರಾ?

ಇದು ತುಂಬಾ ಸಂಕೀರ್ಣವಾದ ವಿಷಯ, ಕಾಣುವಷ್ಟು ಸರಳವಾಗಿಲ್ಲ. ನನಗನಿಸುತ್ತೆ ಬಾಂಗ್ಲಾ ದೇಶಕ್ಕೆ ವಿಲೀನಬೇಕಾಗಿಲ್ಲ

ಮತ್ತು ಪಶ್ಚಿಮ ಬಂಗಾಳವು ಭಾರತದೊಂದಿಗೆ ಇರಲು ಇಚ್ಛಿಸುತ್ತದೆ. ಭಾರತ ಬಹುದೊಡ್ಡ ದೇಶ, ದೊಡ್ಡದೇಶದ ಭಾಗವಾಗಿರುವುದರಿಂದ ಅನೇಕ ಲಾಭಗಳಿವೆ. ದೊಡ್ಡ ದೇಶದ ನಾಗರೀಕರಾಗಿದ್ದರೆ ನಿಮಗೆ ಅನೇಕ ಸೌಲಭ್ಯಗಳು ಸಿಗುತ್ತವೆ. ಅಲ್ಲದೆ ಬಾಂಗ್ಲಾ ದೇಶ ಬಡದೇಶ, ಅದೊಂದು ಶ್ರೀಮಂತ ದೇಶವಾಗಿದ್ದರೆ ವಿಲೀನವು ಆಸೆ ಹುಟ್ಟಿಸುತ್ತಿತ್ತೇನೊ ಇದರಲ್ಲಿ ಧರ್ಮದ ಪ್ರಶ್ನೆಯೂ ಇದೆ. ವಿಲೀನವಾದರೆ ಬೆಂಗಾಲಿ ಮುಸ್ಲಿಂರು ಬಹುಸಂಖ್ಯಾತರಾಗುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಬಹುಸಂಖ್ಯಾತರಾಗಿರುವ ಹಿಂದುಗಳು ಅಲ್ಪಸಂಖ್ಯಾತರಾಗಿಬಿಡುತ್ತಾರೆ. ಯಾವ ಬಹುಸಂಖ್ಯಾತರು ಅಲ್ಪಸಂಖ್ಯಾತರಾಗಲು ಇಷ್ಟಪಡುವುದಿಲ್ಲ.

ಬರಹಗಾರರಾಗಿ, ಜಾತ್ಯಾತೀತತೆಯ ಹೋರಾಟಗಾರರಾಗಿ ವಿಲೀನಕ್ಕಾಗಿ ಕಾತರಿಸುತ್ತೇವೆ. ಆ ವಿಷಯ ಕುರಿತು ನಾನು ಬಹಳಷ್ಟು ಬರೆದಿದ್ದೇನೆ. ನನಗೆ ರಾಷ್ಟ್ರೀಯ ಗಡಿಗಳಲ್ಲಿ ನಂಬಿಕೆ ಇಲ್ಲವೆಂದು ಬರೆದ್ದದ್ದಕ್ಕೆ ನನ್ನನ್ನು 'ದೇಶದ್ರೋಹಿ' ಎಂದು ಕರೆಯಲಾಯಿತು. ಗಡಿಗಳಿಗೆ ಯಾವುದೇ ಅರ್ಥ, ಪ್ರಸ್ತುತತೆ ಇಲ್ಲವೆನ್ನುವ ಸ್ಥಿತಿಯ ಬಗ್ಗೆ ನಾನು ಕನಸು ಕಾಣುತ್ತೇನೆ. ನೂರಿನ್ನೂರು ವರ್ಷಗಳಾದರು ಬೇಕೇನೊ? ಎಲ್ಲಾ ಗಡಿಗಳು ಹಾರಿ ಆಕಾಶದಲ್ಲಿ ಮರೆಯಾಗಿ ಇಡೀ ಜಗತ್ತೆ ಒಂದಾಗುವ ದಿನ ಬರಬಹುದು. ಅದು ಸಾಧ್ಯವಾಗುವುದು, ಧರ್ಮ ಜನರ ಬದುಕಿನಲ್ಲಿ ಪ್ರಾಮುಖ್ಯತೆ ಕಳೆದುಕೊಂಡಾಗ. 200-500 ವರ್ಷಗಳಾದ ಮೇಲೆ ಧರ್ಮ ಉಳಿಯುವುದೆಂದು ನನಗನಿಸುವುದಿಲ್ಲ.

ಕೃಪೆ : ಕಮ್ಯೂನಲಿಸಂ ಕಾಂಬ್ಯಾಟ್ ಪತ್ರಿಕೆ

Statement about ownership and other particulars about News paper MANASA Tingala Patrike.

FORM IV (See Rule 8)

1.	Place of Publication	:	Bangalore Karnataka State
2.	Printer's Name	:	H. S. Rajeshwari Manavi Mudranalaya Panchayath Road, Kadugodi Bangalore - 560 067
	Nationality	:	Indian
	Address	:	Panchayat Road Kadugodi, Bangalore - 560 067
3.	Publisher's Name	:	Rajeshwari H. S.
	Nationality	:	Indian
	Address	:	Kadugodi, Bangalore - 560 067
4.	Editor's Name	:	H. S. Rajeshwari Kadugodi, Bangalore - 560 067
5.	Name & Address of Individuals who own the news Paper	:	- do -

I, H. S. Rajeshwari here by declare that particulars given above are true to the best of knowledge and belief.

30-3-2000 Rajeshwari H. S.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾನಸ ಎರಡು ಚಲನಚಿತ್ರ ಪ್ರದರ್ಶನವನ್ನು ದಿನಾಂಕ 5-3-2000 ಏರ್ಪಡಿಸಲಾಗಿತ್ತು. ಕುಟುಂಬ ಯೋಜನೆಯನ್ನು ಸರ್ಕಾರ ಜಾರಿಗೆ ತರುವ ಪ್ರಯತ್ನದ ಹಿಂದಿರುವ ದೃಷ್ಟಿಕೋನವನ್ನು ಮಹಿಳಾ ದೃಷ್ಟಿಕೋನದ ಹಿನ್ನೆಲೆಯಲ್ಲಿ ಚರ್ಚಿಸಿರುವ ಕಿರುಚಿತ್ರ 'ಸಮ್ ಥಿಂಗ್ ಲೈಕ್ ಎ ವಾರ್' ಹಾಗೂ ಥತ್ತೀಸ್ ಘಡ್ ದೀಪಾ ಧನರಾಜ್‌ರವರ ಚಳುವಳಿಯಲ್ಲಿ ಕ್ರಿಯಾಶೀಲರಾಗಿದ್ದ ಮಹಿಳೆಯರನ್ನು ಹಾಗೂ ಅವರ ಜೀವಂತ ಹೋರಾಟವನ್ನು ಕುರಿತ ಚಿತ್ರ 'ತೂ ಜಿಂದಾ ಹೈ'.

ದೀಪಾ ಧನರಾಜ್‌ರವರ ಕಿರುಚಿತ್ರ 'ಸಮ್‌ಥಿಂಗ್ ಲೈಕ್ ಎ ವಾರ್' ಕುಟುಂಬ ಯೋಜನೆಯನ್ನು ಕುರಿತು ಹಲವಾರು ವಾಸ್ತವ ಅಂಶಗಳತ್ತ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿದೆ. ಕುಟುಂಬ ಯೋಜನೆಯನ್ನು ಸರ್ಕಾರ ಹೇಗೆ ನೋಡುತ್ತದೆ, ಅದರ ಹಿಂದಿರುವ ಪುರುಷ ಪ್ರಧಾನ ಮೌಲ್ಯಗಳು, ಕುಟುಂಬ ಯೋಜನೆಯನ್ನು ಜಾರಿಗೆ ತರುವಲ್ಲಿ ಜನರಿಗೆ ನೀಡುವ ಪ್ರಲೋಭನೆ, ಶಸ್ತ್ರಚಿಕಿತ್ಸೆಯನ್ನು ನಡೆಸುವ ವೈದ್ಯರ ಯಾಂತ್ರಿಕ ಮನಸ್ಥಿತಿ, ವೃತ್ತಿಪರತೆ ಇವುಗಳು ಒಂದೆಡೆಯಾದರೆ, ಇನ್ನೊಂದೆಡೆ, ಮಹಿಳಾ ಸಂಘಟನೆಯೊಂದರ ಮಹಿಳೆಯರು ಸಾಂಪ್ರದಾಯಿಕ ಮೌನವನ್ನು ಮೀರಿ ತಮ್ಮ ದೇಹದ ಬಗ್ಗೆ, ಕುಟುಂಬ ಯೋಜನೆಯ ಬಗ್ಗೆ, ಸರ್ಕಾರದ ನೀತಿಯ ಬಗ್ಗೆ ನಿರ್ಭಿಡೆಯಿಂದ, ಮುಕ್ತವಾಗಿ ಮಾತನಾಡುತ್ತ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

ದಿನಕ್ಕೆ ಎಲ್ಲೆಂದರಲ್ಲಿ, ಶಾಲೆಯ ಆವರಣದಲ್ಲಿ, ಮೈದಾನಗಳಲ್ಲಿ, ಆಸ್ಪತ್ರೆಗಳಲ್ಲಿ, ರೈಲ್ವೆ ಸ್ಟೇಷನ್‌ಗಳಲ್ಲಿ ಕಡಿಮೆ ಸಮಯ, ಖರ್ಚು ಹಾಗೂ ಹೆಂಗಸರು ತಮ್ಮ ದೇಹವನ್ನು ಹೆಚ್ಚು ಪ್ರದರ್ಶಿಸದೇ ಇರುವ ಶಸ್ತ್ರಚಿಕಿತ್ಸೆಯನ್ನು 42 ಸೆಕಂಡ್‌ನಲ್ಲಿ ತಾನು ಹೇಗೆ ಯಶಸ್ವಿಯಾಗಿ ಮಾಡುತ್ತೇನೆಂದು, ತರಕಾರಿ ಕುಯ್ಯುವ ಹಾಗೆ ಕುಯ್ಯುತ್ತಾ, ಹೆಮ್ಮೆಯಿಂದ ಶಸ್ತ್ರಚಿಕಿತ್ಸೆ ಮಾಡುವ ವೈದ್ಯ ಬೀಗುತ್ತಾನೆ. ತಾನು ಒಂದು ದಿನಕ್ಕೆ 200 ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಬಲ್ಲೆನಾದರೂ ಸರ್ಕಾರ ನಿಯಮದಂತೆ 100ಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆ ಮಾಡಬಾರದೆಂದು ನಿರ್ಬಂಧ ದೇಶಸೇವೆ ಮಾಡುವ ತನ್ನ ಕೈಯನ್ನು ಕಾನೂನು ಕಟ್ಟಿಹಾಕಿದೆಯೆನ್ನುತ್ತಾನೆ. ವೈದ್ಯರ ಯಾಂತ್ರಿಕ ಧೋರಣೆಗೆ ವಿರುದ್ಧವಾಗಿ ಮಹಿಳಾ ಸಂಘಟನೆಯ ಸದಸ್ಯರು ತಮ್ಮ ಆಸೆ ಆಕಾಂಕ್ಷೆಗಳನ್ನು ಕುರಿತು ಲವಲವಿಕೆಯಿಂದ ಮಾತನಾಡುತ್ತಾರೆ.

ಸರ್ಕಾರ ಕುಟುಂಬ ಯೋಜನೆಯನ್ನು ಜಾರಿಗೆ ತರುವ ವಿವಿಧ ಹಂತಗಳನ್ನು ಅದರ ಹಿಂದಿರುವ ಧೋರಣೆಯನ್ನು ಮಹಿಳೆಯರು ಟೀಕಿಸುತ್ತಾರೆ. ಸಂಜಯಗಾಂಧಿ ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸೆಯನ್ನು ಒತ್ತಾಯ ಪೂರ್ವಕವಾಗಿ ಗಂಡಸರ ಮೇಲೆ ಹೇರಿದ್ದನ್ನು ಪುರುಷರು ತೀವ್ರವಾಗಿ ಪ್ರತಿಭಟಿಸಿದ ಕಾರಣ ಕುಟುಂಬ ಯೋಜನೆಯನ್ನು ಹೆಂಗಸರ ಮೇಲೆ ಹೇರಲಾಯಿತು. ಸ್ತ್ರೀಯರಿಗೆ ಮಕ್ಕಳು ಬೇಕೆ? ಬೇಡವೆ? ಯಾಕೆ ಬೇಕು? ಎಂಬ ವಿಚಾರದಲ್ಲಿ ಪ್ರತಿಯೊಬ್ಬ ಸ್ತ್ರೀಯರಿಗೆ ತನ್ನದೇ ಆದ ಅಭಿಪ್ರಾಯವಿರುತ್ತದೆ. ಕೆಲವರಿಗೆ ಮಕ್ಕಳು ಒಂದು ರೀತಿಯಲ್ಲಿ ಆಸ್ತಿ, ಗ್ರಾಮೀಣ ಪರಿಸರದಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಲು ಮಕ್ಕಳು ಬೇಕು ಎಂದು ಒಬ್ಬ ಮಹಿಳೆ ಭಾವಿಸಿದರೆ, "ಕುಟುಂಬದಲ್ಲಿ ಗಂಡುಮಕ್ಕಳಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಆಕೆ ಗಂಡು ಮಗುವನ್ನು ಹೆರದಿದ್ದರೆ, ಅವಳಿಗೆ ಯಾವುದೇ ರೀತಿಯ ಬೆಲೆಯನ್ನು ನೀಡಲಾಗುವುದಿಲ್ಲ ಎಂದು ಇನ್ನೊಬ್ಬ ಮಹಿಳೆ ನುಡಿಯುತ್ತಾಳೆ. ನನ್ನ ಮೇಲೆ ತಾಯ್ತನವನ್ನು ಏಕೆ ಹೇರಬೇಕು? ನನಗೆ ಇಷ್ಟವಿದ್ದರೆ ನಾನು ತಾಯಿಯಾಗಬೇಕು ಆದರೆ ಅದನ್ನು ನಮ್ಮ ಮೇಲೆ ಏಕೆ ಹೇರಬೇಕು?

ಕುಟುಂಬ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಹಲವಾರು ರೀತಿಯ ಆಮಿಷವನ್ನು ಜನರಿಗೆ, ಗ್ರಾಮಕ್ಕೆ ನೀಡುವ ಪ್ರಲೋಭನೆಯನ್ನು ನೀಡುತ್ತದೆ. ಗಂಡಸರು ಈ ಆಮಿಷಗಳಿಗಾಗಿ ಹೆಂಗಸರ ಮೇಲೆ ಒತ್ತಡವನ್ನ ಹೇರುತ್ತಾರೆ. ಇಂತಹ ಒತ್ತಡಗಳ ಅರಿವು ಮಹಿಳೆಯರಿಗಿದೆ. ಹಣ ನೀಡುವ, ಭೂಮಿ ನೀಡುವ ಭರವಸೆಯನ್ನು ನೀಡಿದ ಸರ್ಕಾರ ನೀಡದೆ ಮೋಸ ಮಾಡಿರುವುದನ್ನು ಕುರಿತು ಸಂಘಟನೆಯ ಸ್ತ್ರೀಯರು ಆಕ್ರೋಶದಿಂದ ಮಾತನಾಡುತ್ತಾರೆ.

ಐ-ಯುಡಿ ಹಾಗೂ ನಾರ್‌ಪ್ಲಾಂಟ್ ಪ್ರಯೋಗಗಳನ್ನು ಸ್ತ್ರೀಯರಿಗೆ ಅರಿವಿಲ್ಲದಂತೆ ಅವರ ಮೇಲೆ ಪ್ರಯೋಗಿಸುವುದನ್ನು ಕುರಿತು ದೀರ್ಘವಾಗಿ ಚರ್ಚಿಸಲಾಗಿದೆ. ಅವರ ದೇಹವನ್ನು ಆಟದ ಮೈದಾನದಂತೆ ಉಪಯೋಗಿಸಲಾಗುತ್ತದೆ. ನಾರ್‌ಪ್ಲಾಂಟ್‌ನ್ನು ಮಹಿಳೆಯೊಬ್ಬಳ ಮೇಲೆ ಅವಳಿಗೆ ಅರಿವಿಲ್ಲದಂತೆ ಪ್ರಯೋಗಿಸಲಾಯಿತು. ಅದು ಹಾರ್ಮೋನ್ ಸಮಸ್ಯೆಯನ್ನು ಆಕೆಯ ಮೇಲೆ ಉಂಟುಮಾಡಿದರೂ, ಅದನ್ನು ವೈದ್ಯರು ತೆಗೆಯಲು ನಿರಾಕರಿಸಿದ್ದರಿಂದ, ಖಾಸಗೀ ವೈದ್ಯರ ಬಳಿ ತೆಗೆಸಿಕೊಳ್ಳಬೇಕಾದ ನೋವಿನ ಅನುಭವವನ್ನು ಮಹಿಳೆ ಹಂಚಿಕೊಳ್ಳುತ್ತಾಳೆ.

ಈ ಚಲನಚಿತ್ರವನ್ನು ವೀಕ್ಷಿಸಿದ ನಂತರ ಭಾಗವಹಿಸಿದ ಸದಸ್ಯರು ಚಿತ್ರದ ಬಗ್ಗೆ ವಿವರವಾದ ಚರ್ಚೆಯನ್ನು ನಡೆಸಿದರು.

ಕಿರುಚಿತ್ರದಲ್ಲಿ ಅಭಿಪ್ರಾಯಗಳಿಗೆ ಸಮ್ಮತಿ ಸೂಚಿಸಿದ ಬಹುಪಾಲು ಸದಸ್ಯರು ತಮ್ಮ ಹಾಗೂ ತಮ್ಮ ಸುತ್ತಮುತ್ತಲಿನ ಅನುಭವಗಳನ್ನು ಹಂಚಿಕೊಂಡರು.

ಇಂದಿಗೂ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಪುರುಷರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಮುಂದೆ ಬರುವುದಿಲ್ಲ. ಇದಕ್ಕೆ ಪುರುಷರಲ್ಲಿ ಹಾಗೂ ಸ್ತ್ರೀಯರಲ್ಲಿ ಹಲವು ಅವೈಜ್ಞಾನಿಕ ಮೂಢನಂಬಿಕೆಗಳು ಬಲವಾಗಿ ಬೇರೂರಿವೆ. ಪುರುಷರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ ಪುರುಷತ್ವ ನಾಶವಾಗುತ್ತದೆಯೆಂಬ ನಂಬಿಕೆ ಹೆಂಗಸರಲ್ಲೂ ಬೇರೂರಿದೆ. ಹಾಗಾಗಿ ಪುರುಷರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದನ್ನು ಮಹಿಳೆಯರೇ ವಿರೋಧಿಸುತ್ತಾರೆ. ಶಸ್ತ್ರಚಿಕಿತ್ಸೆಯನ್ನು ಯಾರು ಮಾಡಿಸಿಕೊಳ್ಳಬೇಕು ಎನ್ನುವ ವಿಚಾರವನ್ನು ಕುಟುಂಬದಲ್ಲಿ ಮುಕ್ತವಾಗಿ ಚರ್ಚಿಸದ ಕಾರಣ ಸ್ತ್ರೀಗೆ ಆಯ್ಕೆಯ ಪ್ರಶ್ನೆಯೇ ಇಲ್ಲ ಎಂದು ಅಭಿಪ್ರಾಯ ಪಡಲಾಯಿತು.

ಪುರುಷರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ, ಭಾರವಾದ ಕೆಲಸವನ್ನು ಮಾಡುವ ಅವರಿಗೆ ತೊಂದರೆಯಾಗುತ್ತದೆಯೆಂದು ಸಹ ಭಾವಿಸಲಾಗುತ್ತದೆ. ಹೊಲಗದ್ದೆಗಳಲ್ಲಿ ಹಾಗೂ ಇತರೇ ಭಾರವಾದ ಕೆಲಸಗಳನ್ನು ಗಂಡಸರು ಮಾಡುವುದರಿಂದ, ಹಾಗೂ ದುಡಿಯುವ ಗಂಡಸರು ಅವರಾದುದರಿಂದ, ಅವರು ಏಕೆ ಮಾಡಿಸಿಕೊಳ್ಳಬೇಕೆಂದು ಸ್ತ್ರೀಯರೇ ನುಡಿಯುತ್ತಾರೆ. ನಗರ ಪ್ರದೇಶದ ಸ್ಲಂಗಳಲ್ಲಿ ಸಹ ಈ ಅಭಿಪ್ರಾಯ ಬಲವಾಗಿ ಇರುವುವರನ್ನು ಸಹ ಗುರುತಿಸಲಾಯಿತು.

ಪುರುಷರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಹಿಂಜರಿಯುವ ಮತ್ತೊಂದು ಅಂಶವನ್ನು ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡ ಪುರುಷ ಆಕಸ್ಮಾತ್ ತೀರಿಹೋದರೆ, ವಂಶದ ಕುಡಿಯೇ ನಾಶವಾಗುತ್ತಿದೆಯೆಂಬ ಕಾರಣಕ್ಕೆ ಸ್ತ್ರೀಯರನ್ನು ಶಸ್ತ್ರಕ್ರಿಯೆ ಮಾಡಿಕೊಳ್ಳಲು ತಳ್ಳುತ್ತಾರೆ. ಕೆಲವು ಮಹಿಳೆಯರು ಪುರುಷರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು ಎಂಬ ಆಲೋಚನೆಯನ್ನು ಮಾಡುವುದಿಲ್ಲ.

ಕುಟುಂಬದಲ್ಲಿ ಸಾಮರಸ್ಯ ಮನೋಭಾವನೆ ಇರುವುದು ಅತ್ಯಗತ್ಯ. ಗಂಡ-ಹೆಂಡತಿ ಇವರಿಬ್ಬರೂ ಒಟ್ಟಿಗೆ ಕುಳಿತು ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಬೇಕಾದ ಅಗತ್ಯವನ್ನು ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಮಹಿಳೆಯರು ತಮ್ಮನ್ನು ತಾವು ಮೊದಲು ಅರ್ಥಮಾಡಿಕೊಳ್ಳಬೇಕು. ತನ್ನ ಆಸೆ ಆಕಾಂಕ್ಷೆಗಳನ್ನು ಗೌರವಿಸುವುದನ್ನು ಮೊದಲು ಕಲಿಯಬೇಕು. ಕುಟುಂಬದಲ್ಲಿ ಈ ಗೌರವ ದೊರೆಯದಿದ್ದರೆ ಅದನ್ನು ಪಡೆಯುವತ್ತ ಶ್ರಮಿಸಬೇಕು. ಮಾಧ್ಯಮಗಳಿಂದ ಪ್ರೇರಿತರಾದ ಮಧ್ಯಮ ವರ್ಗದ ಪುರುಷರು ಇತ್ತೀಚೆಗೆ ಇಂತಹ ಸಮಸ್ಯೆಗಳ ಬಗ್ಗೆ ಕಾಳಜಿಯನ್ನು ವಹಿಸುತ್ತಿರುವುದನ್ನು ಸಹ ಗುರುತಿಸಲಾಯಿತು.

ಪ್ರಸ್ತುತ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳೆಯರಿಗೆ ದೊರೆಯುತ್ತಿರುವ ದೊರೆಯಬೇಕಾದ ಸೌಲಭ್ಯ, ಉತ್ತಮ ವ್ಯವಸ್ಥೆ, ಮುಂತಾದವುಗಳನ್ನು ಸುಧಾರಿಸಲು ಮಹಿಳಾ ಸಂಘಟನೆಗಳು ಒತ್ತುನೀಡಬೇಕೆಂದು ಸಹ ಸಭೆಯಲ್ಲಿ ಭಾವಿಸಲಾಯಿತು.

ತೂ ಜಿಂದಾ ಹೈ (ನೀನು ಜೀವಂತವಾಗಿರುವೆ) ಕಿರುಚಿತ್ರ ಭಾಗವಹಿಸಿದ ಸದಸ್ಯರನ್ನು ಭಾವನಾತ್ಮಕ ನೆಲೆಯಲ್ಲಿ ಕೊಂಡೊಯ್ಯಿತು. ವೈಯಕ್ತಿಕ ನೋವಿನಿಂದ ನೊಂದ ಮೂವರು ಮಹಿಳೆಯರು ತಮ್ಮ ನೋವನ್ನು ಸಾರ್ವತ್ರಿಕ ಅರ್ಥ ನೀಡಿ, ಸಾರ್ವತ್ರಿಕಗೊಳಿಸುವುದರ ಮೂಲಕ ಮಹಿಳೆಯರಿಗೆ ಧೈರ್ಯ, ಸಾಹಸ, ಆತ್ಮವಿಶ್ವಾದ ಸಂಕೇತವಾಗಿದ್ದಾರೆ.

ನನ್ನ ಸಂಕಟದ ದಿನಗಳಲ್ಲಿ ನನಗೆ ಒಬ್ಬಳು ಆಸರೆ ನೀಡಿದಳು, ಕೈಹಿಡಿದು ಎತ್ತಿದಳು ಹಾಗೆಯೇ ನಾನು ಮತ್ತೊಬ್ಬ ಹೆಂಗಸಿಗೆ ಆಸರೆಯಾಗಬೇಕು, ಸಂಕಟದಲ್ಲಿ ನೆರವಾಗಬೇಕು. ನನ್ನೊಬ್ಬಳ, ನನ್ನ ಮನೆ ಉದ್ಧಾರವನ್ನ ನೋಡಿಕೊಳ್ಳಬಾರದು, ಮನೆಯೆನ್ನುವುದು ಇಡಿ ಹಳ್ಳಿಯ ಒಂದು ಭಾಗ, ಹಳ್ಳಿಯ ಸುಖದುಃಖದಲ್ಲೂ ನಾನು ಭಾಗಿಯಾಗಬೇಕು. ಹಳ್ಳಿ ಕೆರೆಯ ನೀರನ್ನು ಉಪಯೋಗಿಸಬಹುದು ಆದರೆ ಅದನ್ನು ಶುಚಿ ಪಡಿಸುವುದು ನನ್ನದಲ್ಲ ಎನ್ನುವುದು ಸರಿಯಲ್ಲ. ಗಂಡನನ್ನು ದೇವರೆಂದುಕೊಳ್ಳಬೇಕೆಂದರೆ ಅವನು ದೇವರ ಹಾಗಿರಬೇಕು. ದುಡಿತ ಮಾತ್ರ ಬೇಕು, ದುಡಿತದ ಫಲ ಬೇಕು ಆದರೆ ನನ್ನ ಸಂಕಟಕ್ಕೆ ಸ್ಪಂದಿಸದಿದ್ದರೆ ಹೇಗೆ? ಸುಖ ಮಾತ್ರ ಬಯಸಿ ಸಂಕಟಕ್ಕೆ ಕಿವುಡಾದರೆ ಹೇಗೆ?

ನನ್ನ ಸಂಕಟವನ್ನೇ ನನ್ನ ಹೋರಾಟಕ್ಕೆ ಆಯುಧ ಮಾಡಿಕೊಂಡೆ. ಕುಡಿತದ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿದ್ದೇನೆ. ಕುಡಿತ ಬದುಕನ್ನು ಹಾಳುಮಾಡುವುದನ್ನು ಕುರಿತ ಬೀದಿನಾಟಕ ಮಾಡಿ ಎಲ್ಲೆಡೆ ಪ್ರದರ್ಶಿಸಿದ್ದೇನೆ. ಮಹಿಳೆಯರೆಲ್ಲ ಒಂದಾಗಿ ಕುಡಿತದ ವಿರುದ್ಧ ಒಂದು ಚಳುವಳಿಯನ್ನೇ ಪ್ರಾರಂಭಿಸಿದ್ದೇವೆ. ಕುಡಿಯುವವರಿಗೆ 501/- ರೂ. ದಂಡ ವಿಧಿಸಿದ್ದೇವೆ ಎಂದು ನುಡಿಯುತ್ತಾಳೆ.

ಅತ್ಯಾಚಾರಕ್ಕೆ ಒಳಗಾದ ಆದಿವಾಸಿ ಮಹಿಳೆ ತನಗಾದ ಅನ್ಯಾಯವನ್ನು ನ್ಯಾಯಾಲದ ಕಟ್ಟೆಯೇರಿ ನ್ಯಾಯ ಪಡೆಯುವ ಹಾದಿಯಲ್ಲಿ ಇತರ ಮಹಿಳೆಯರು ಜೊತೆ ಸೇರುತ್ತಾರೆ. ತನ್ನ ಮೇಲಾದ ಅನ್ಯಾಯವನ್ನು ವಕೀಲರ ನೆರವಿಲ್ಲದೆ, ತಾನೇ ತನ್ನ ಪರವಾಗಿ ವಾದಿಸಿ, ಗೆಲ್ಲುತ್ತಾಳೆ. ಅಪರಾಧಿಗೆ ಶಿಕ್ಷೆಯಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ದೂರದ ಶಾಲೆಗೆ ಹೋಗುವ ಆಸೆಯಿಂದ ಕದ್ದು ಸೈಕಲ್ ಕಲಿಯುವ ಮಹಿಳೆ ಛತ್ತಿಸ್ ಘಡ್ ಚಳುವಳಿಯಲ್ಲಿ ಸಕ್ರೀಯವಾಗಿ ಕೆಲಸ ಮಾಡುತ್ತಾಳೆ. ತನ್ನ ಬಾಲ್ಯದೊಂದಿಗೆ ಹೋರಾಟದ ದಿನಗಳನ್ನು ಪೊಲೀಸ್ ಕಿರುಕುಳವನ್ನು, ತಮ್ಮ ಹೋರಾಟದ ಉದ್ದೇಶಗಳನ್ನು ಕುರಿತು ವಿವರವಾಗಿ ಸಂದರ್ಶನದ ಮೂಲಕ ದಾಖಲಿಸಲಾಗಿದೆ. ಈ ಚಿತ್ರವನ್ನು ಮೌನವಾಗಿಯೇ ಸದಸ್ಯರು ಮೆಚ್ಚಿದರು. ●

ಮಹಿಳಾ ಧ್ವನಿ

ವಾಯ್ಸ್ ಆಫ್ ವುಮೆನ್ ಎಂಬ (Awaz-A-Nishwah) ಮುಸ್ಲಿಂ ಮಹಿಳೆಯರ ಗುಂಪು, ಇತ್ತೀಚೆಗೆ ಮುಸಲ್ಮಾನ ಜನಸಂಖ್ಯೆ ಹೆಚ್ಚಾಗಿರುವ ಮಲಬ್ರಾದಲ್ಲಿ, ತ್ರಿಬಲ್ ತಲಾಕ್ ಹಾಗೂ ಮುಸ್ಲಿಮರ ವೈಯಕ್ತಿಕ ಕಾನೂನಿನ ವಿರುದ್ಧ ಒಂದು ರ್‍ಯಾಲಿ ಹಮ್ಮಿಕೊಂಡಿದ್ದರು. ಪ್ರಾರಂಭದಲ್ಲಿ ಸ್ಲಂ ಮುಸ್ಲಿಂ ಮಹಿಳೆಯರೊಂದಿಗೆ ಸಂಘಟನೆಯನ್ನು ಕಟ್ಟಿದ ಈ ಗುಂಪು ಬಾಂಬೆ ದಂಗೆಯ ನಂತರ ಡೋಗ್ರಿ ಪ್ರದೇಶದಲ್ಲಿ ಕೆಲಸ ಮಾಡುತ್ತಿದೆ.

ತ್ರಿಬಲ್ ತಲಾಕ್‌ನ ದುರುಪಯೋಗ, ಅದರಿಂದಾಗಿ ಮಹಿಳೆ ಅನುಭವಿಸುವ ಭಯಾನಕ ಜೀವನವನ್ನು ವಿರೋಧಿಸಿ ಈ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು. 50-60 ಮುಸ್ಲಿಂ ಮಹಿಳೆಯರು ಬೀದಿಗಿಳಿದರು. ಕೆಲ ಪುರುಷರ (ಮುಸ್ಲಿಂ) ಹಾಗೂ ಇತರ ಮಹಿಳಾ ಸಂಘಟನೆಗಳು ಇವರಿಗೆ ಬೆಂಬಲಿಸಿದವು. ಘೋಷಣೆ ಕೂಗುತ್ತಾ ಕರಪತ್ರ ಹಂಚಿ ಹೊರಟ ಮಹಿಳೆಯರು ಮುಬ್ರಾ ಏರಿಯಾದಲ್ಲಿ ಮೆರವಣಿಗೆ ತೆಗೆದರು. ಸಂಕೋಚ, ಭಯ ಹೆದರಿಕೆಯಿಂದ ಮನೆಯ ಮಹಡಿಯಲ್ಲೋ ಕಿಟಕಿಯಲ್ಲೋ ಹಣಿಕಿ ನೋಡುತ್ತಿದ್ದ ಇತರೆ ಮಹಿಳೆಯರು ಕರಪತ್ರವನ್ನು ಮಾತ್ರ ಮಕ್ಕಳನ್ನು ಕಳಿಸಿ ಇಸ್ಕೊಂಡಿದ್ದು ಆಶಾಕಿರಣವೇ ಸರಿ. ಪೋಲೀಸರು ಯಥಾ ಪ್ರಕಾರ ಕಾನೂನು ಉಲ್ಲಂಘನೆಯ ನೆಪ ಒಡ್ಡಿ ಮೆರವಣಿಗೆಕಾರರನ್ನು "ಬಂಧಿಸಿ ಬಿಟ್ಟ" ನಾಟಕವಾಡಿದರು.

* * *

ಎಂ.ಎ. ಪದವಿ ಗಿಟ್ಟಿಸಿದ ಸಾವಿತ್ರಿ

ಇತ್ತೀಚೆಗೆ ಡಿಗ್ರಿಗಳು, ಡಬಲ್ ಡಿಗ್ರಿಗಳು ಹುಡುಗಿಯರು ಪಡೆಯುತ್ತಿರುವುದು ಸಾಮಾನ್ಯವಾಗಿದ್ದರೂ, ಶಾಲೆಯ ಮುಖ ಕಾಣದ, ಓದಬೇಕೆಂದು ಹಂಬಲಿಸಿದರೂ ಕೈಗೆಟುಕದ ಶಿಕ್ಷಣ ಲಕ್ಷಾಂತರ ಜನರಿಗೆ ಮರೀಚಿಕೆಯಾಗೇ ಇದೆ. 'ಸ್ಕೂಲ್‌ಗೀಲು ನಮಗಲ್ಲ ಮನೆ ಕೆಲ್ಸ ನೋಡು' ಅನ್ನೋದೊ ಇರೋ ಸ್ಲಂ ವಾತಾವರಣದಲ್ಲಿ ಹುಡುಗಿಯೊಬ್ಬಳು ಎಂ.ಎ. ಸೈಕಾಲಜಿ ಪದವಿ ಪಡೆದಿರುವುದು ಪ್ರಶಂಸನಾರ್ಹ.

ಧಾರವಾಡದ ನಾರಾಯಣಪುರದಲ್ಲಿ ಜೋಪಡಿಯಲ್ಲಿ ವಾಸಿಸುತ್ತಿದ್ದ ನೀಲವ್ವ-ಬಸಪ್ಪನದು ಬಡಕುಟುಂಬ. ಇವರ 10 ಮಕ್ಕಳಲ್ಲಿ ಒಂಬತ್ತನೆಯವಳಾದ ಸಾವಿತ್ರಿ ಬೀದಿ ತಿರುಗುವ ಬದಲು ಶಾಲೆಯಲ್ಲಿ ಕುಳಿತುಕೊಳ್ಳಲೆಂದು ಅಟ್ಟಿದ ಅವ್ವನಿಗೆ ಮಗಳು ಹೀಗಾಗುತ್ತಾಳೆಂಬ ಕಲ್ಪನೆಯೇ ಇರಲಿಲ್ಲ. ದಿನಕಳೆದಂತೆ ಸಾವಿತ್ರಿ ಓದಿನಲ್ಲಿ ಹಾಗೂ ಇತರೆ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಬೆಳೆಯತೊಡಗಿದಳು. ಶಿಕ್ಷಕರ ಪ್ರೋತ್ಸಾಹ ಕೂಡ ಜೊತೆಯಾಯ್ತು. ಮನೆಯಲ್ಲಿ ಲೈಟ್ ಇಲ್ಲ, ಎಲ್ಲರೂ ಅನಕ್ಷರಸ್ಥರೇ ಇದ್ದ ಕುಟುಂಬದಲ್ಲಿ ಸೂರ್ಯನ ಬೆಳಕೇ ಲೈಟಾಗಿತ್ತು. ಆರ್ಥಿಕ ಅಡಚಣೆಯಿಂದ ಓದುವಾಗಲೇ ಸಣ್ಣ ಪುಟ್ಟ ಕೆಲಸ ಮಾಡ್ತಾ ಇದ್ದು ಸಾವಿತ್ರಿ. ಎಸ್.ಎಸ್.ಎಲ್.ಸಿ. ಇರುವಾಗ ತಿಂಗಳಿಗೆ 70 ರೂ.ಗಳಿಗೆ ರೋಟರಿ ಶಾಲೆಯ ಆಯಾ ಆಗಿ ಕೆಲಸ ಮಾಡಿದ ಸಾವಿತ್ರಿ ಬಿ.ಎ. ಫಸ್ಟ್ ಕ್ಲಾಸ್‌ನಲ್ಲಿ ಪಾಸಾದಳು. ಎಂ.ಎ. ಓದಬೇಕೆಂಬ ಪ್ರಯತ್ನದಲ್ಲಿದ್ದಾಗ "ಸರಿಯಾದ ಮಾರ್ಗದರ್ಶನ ಸಿಗದೆ ಇಂಡಸ್ಟ್ರಿಯಲ್ ಸೈಕಾಲಜಿ ಮಾಡ್ದೆ; ಆದ್ರೆ ನನಗೆ ಮಕ್ಕಳೆಂದರೆ ಮಮತೆ ಚೈಲ್ಡ್ ಸೈಕಾಲಜಿ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು" ಎಂದು ಈಗ ಮರುಗುತ್ತಾಳೆ. 1999ರಲ್ಲಿ ಎಂ.ಎ. ಮಾಡಿರುವ ಸಾವಿತ್ರಿ ಪಿಎಚ್.ಡಿ. ಮಾಡುವ ಹಂಬಲ ಹೊಂದಿದ್ದಾಳೆ.

ಓಡಾಡಲು ವಾಹನ, ಕೇಳಿದ ಬುಕ್ಸ್ ಟ್ಯೂಷನ್ಸ್, ಕೈತುಂಬಾ ಹಣ ಎಲ್ಲಾ ಇದ್ದು ನಪಾಸಾಗುವವರಿಗೆ ಈಕೆ ಆದರ್ಶ. ಈಕೆಯ ಜೊತೆಗಿದ್ದದ್ದು ಓದಬೇಕೆಂಬ ಹಂಬಲ; ಸಾಧಿಸುವ ಛಲ. ಈಕೆಯ ಸಾಧನೆಗೆ ನಮ್ಮೆಲ್ಲರ ಅಭಿನಂದನೆ.

* * *

ವಿಮೋಚನಾ ಮಹಿಳಾ ಹಕ್ಕುಗಳ ವೇದಿಕೆ

ಒಮ್ಮೆ ನಿಂತು ಇವರ ಕತೆಗಳನ್ನು ಕೇಳೋಣ

ಮನಸ್ಸುಕೊಟ್ಟು ಕೇಳಿದರೆ ತಾನೆ ನಮಗೆ ಅರ್ಥವಾಗುವುದು

ಅವರ ಅಂತರಂಗದ ನೋವು, ನಿರಾಶೆಗಳು, ಬದುಕು, ಭಾವನೆಗಳು, ಆಸೆ ಭರವಸೆಗಳು ಏನೆಂದು

ಹೀಗೆಂದು ಕರೆಕೊಟ್ಟುವರು ಬೆಂಗಳೂರಿನ ವಿಮೋಚನಾ ಮಹಿಳಾ ಸಂಘಟನೆಯವರು. ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ 18-3-2000ದಂದು ಮೌನ ಮೆರವಣಿಗೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆಸೆ, ಕನಸುಗಳ ತುಂಬಿಕೊಂಡು ಮದುವೆಯಾದ ಅನೇಕ ಹೆಣ್ಣುಮಕ್ಕಳು ಬೆಂಕಿಯಲ್ಲಿ ಉರಿದು ಹೋಗಿದ್ದಾರೆ, ವಿಷ ಕುಡಿದು ನೀಲಿಗಟ್ಟಿದ್ದಾರೆ, ನೇಣಿನ ಕುಣಿಕೆಗೆ ಕೊರಳು ಕೊಟ್ಟಿದ್ದಾರೆ. ದಿನ ದಿನಕ್ಕೆ ಹೆಣ್ಣುಮಕ್ಕಳ ಅಸಹಜ ಸಾವಿನ ಸಂಖ್ಯೆ ಏರುತ್ತಲೆ ಇದೆ. ಬಲಿಯೊದ ಹೆಣ್ಣುಮಕ್ಕಳ ನೆನಪಿಗಾಗಿ ಮಹಿಳಾ ದಿನಾಚರಣೆಯನ್ನು ಕಪ್ಪು ದಿನವನ್ನಾಗಿ ಆಚರಿಸಲಾಯ್ತು. 4 ಗಂಟೆಗೆ ನಗರದ ಹೈಕೋರ್ಟ್ ಆವರಣದಲ್ಲಿ ಕಾರ್ಯಕ್ರಮ ಪ್ರಾರಂಭವಾಯ್ತು. ಕಪ್ಪು ಬಟ್ಟೆಯನ್ನು ತೊಟ್ಟ ಮಹಿಳೆಯರು, ಮಹಿಳೆಯರ ಕಪ್ಪು ಕಟೌಟ್‌ಗಳನ್ನು ಹಿಡಿದು (ಪ್ರತಿಯೊಂದು ಕಟೌಟ್‌ನ ಮೇಲೂ ಅಸಹಜ ಸಾವನ್ನಪ್ಪಿದ ಹೆಣ್ಣುಮಕ್ಕಳ ಹೆಸರು, ವಯಸ್ಸು ಮತ್ತು ಹೇಗೆ ಸತ್ತಳೆಂಬ ವಿವರವನ್ನು ಬರೆಯಲಾಗಿತ್ತು.) ಸಾಲುಸಾಲಾಗಿ ಟೌನ್‌ಹಾಲ್‌ವರೆಗೂ ಮೆರವಣಿಗೆಯಲ್ಲಿ ಬಂದರು. ಟೌನ್‌ಹಾಲ್ ಮೆಟ್ಟಿಲುಗಳ ಮೇಲೆ ಕಟೌಟ್‌ಗಳನ್ನು ಹಿಡಿದುಕೊಂಡು ಎಲ್ಲರೂ ನಿಂತರು. ವಿಮೋಚನಾದ ಶಾಂತಮ್ಮ ಅವರು ಕಪ್ಪು ದಿನಾಚರಣೆಯ ಉದ್ದೇಶವನ್ನು ಹೇಳಿದರು. ಮತ್ತೊಬ್ಬ ಸದಸ್ಯೆ ಮಮತಾ ಅವರು ಅಸಹಜ ಸಾವುಗಳನ್ನು ಕುರಿತು ಮಾತನಾಡಿದರು. 1 ತಿಂಗಳ ಹಿಂದೆಯಷ್ಟೆ ಮಗಳನ್ನು ಕಳೆದುಕೊಂಡ ತಾಯೊಬ್ಬರು ಮಾತನಾಡಿದರು. "ನನ್ನ ಮಗಳ್ನ ಅನ್ಯಾಯವಾಗಿ ಸಾಯಿಸಿಬಿಟ್ರು ನಂಗೆ ತುಂಬಾ ದುಃಖ ಆಗ್ತಾ ಇದೆ, ತಡ್ಕೋಳೇಕೆ ಆಗ್ತಾ ಇಲ್ಲ, ನನ್ನ ಮೊಮ್ಮಗು ಮುಖ ನೋಡ್ಕೊಂಡು ಸುಮ್ನೆ ಇದೀನಿ, ನಾನು ಹೆಂಗೆ ಸಂಕ್ಟ ಸಹಿಸಿಕೊಳ್ಳಿ ಎಂದು ಮಾತನಾಡಿದ್ದು ಎಲ್ಲರ ಮನಸ್ಸಲ್ಲು ಸಂಕಟ ತುಂಬಿಸಿತು.

ಕೆಲವು ಹಾಡುಗಳನ್ನು ಹಾಡಲಾಯ್ತು. ಕೊನೆಯಲ್ಲಿ ಉರಿವ ಮೇಣದಬತ್ತಿಗಳನ್ನು ಹಿಡಿದು ಮೌನ ಆಚರಿಸಿದರು. ಕಾರ್ಯಕ್ರಮದ ಅಂಗವಾಗಿ ಹೊರತಂದಿದ್ದ ಕರಪತ್ರವನ್ನು ಮೆರವಣಿಗೆಯಲ್ಲಿ ಹಂಚಲಾಯ್ತು. ಕರಪತ್ರವನ್ನು ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.

ಈ ಮಹಿಳೆಯರು ಯಾರು?

ಸವಿತ, 19 ವರ್ಷ ವಯಸ್ಸು, ಮದುವೆಯಾಗಿ $1^1/_2$ ತಿಂಗಳು; ನೇಣಿಗೆ ಬಲಿಯಾದಳು.
ಶುಭ, 23 ವರ್ಷ ವಯಸ್ಸು, ಮದುವೆಯಾಗಿ 1 ತಿಂಗಳು; ನೇಣಿಗೆ ಹಾಕಿ ಸಾಯಿಸಿದರು.
ಅಫೀಸ, 22 ವರ್ಷ ವಯಸ್ಸು, ಮದುವೆಯಾಗಿ 10 ತಿಂಗಳು; ಅವಳನ್ನು ಸುಟ್ಟುಹಾಕಲಾಯಿತು.
ಎಲಿಜಬೆತ್ ರಾಣಿ, 26 ವರ್ಷ ವಯಸ್ಸು, ಮದುವೆಯಾಗಿ $2^1/_2$ ವರ್ಷ, ಅವಳನ್ನು ಬೆಂಕಿ ಹಾಕಿ ಸಾಯಿಸಲಾಯಿತು.

ಪಟ್ಟಿ ಎಷ್ಟು ದೀರ್ಘವೆಂದರೆ ನಮಗೆ ಅವರ ಸಾವು ಸಹ ಬರಿ ಸುದ್ದಿಯಾಗಿಬಿಟ್ಟಿದೆ. ದಿನೇ ದಿನೇ ಹೆಚ್ಚುತ್ತಿರುವ ಕ್ರೌರ್ಯಗಳನ್ನು, ಸಾವುಗಳನ್ನು ದುಃಖಿಸಲೂ ನಮಗೆ ಮನಸ್ಸಿಲ್ಲ, ಪುರುಸೊತ್ತಿಲ್ಲ. ಈ ನಮ್ಮ ದಿವ್ಯ ನಿರ್ಲಕ್ಷ್ಯ, ನಿರ್ಲಿಪ್ತತೆಗಳು ಈ ಹೆಣ್ಣುಮಕ್ಕಳ ಸಾವಿಗಿಂತಲೂ ಭೀಕರವಾದುದು. ಏನು ಮಾಡಿದರೆ ಎಷ್ಟು ಲಾಭ ಯಾವ ಲಾಭ ಎಂದು ಗುಣಿಸುತ್ತ ಎಣಿಸುತ್ತ ದಿನಗಳನ್ನು ದೂಡುತ್ತಿದ್ದೇವೆ - ಶಾಪಗ್ರಸ್ಥರಾಗಿ.

ಗೆಳತಿಯರೇ, ಸ್ನೇಹಿತರೇ ಬನ್ನಿ ಹೃದಯಗಳಲ್ಲಿ ಸಂಕಟಗಳನ್ನೂ, ಸಿಟ್ಟನ್ನೂ ಬಚ್ಚಿಟ್ಟುಕೊಂಡು ಪ್ರೇಮ, ಕೊಂಚ ಭರವಸೆ ಹೊತ್ತು ನಡೆಯುವ. ನಮ್ಮ ಕಾಲುಗಳಿಗೊಂದು ಗುರಿಯಿದೆ, ನಮ್ಮ ಅಶಾಂತಿಗೊಂದು ಧ್ಯೇಯವಿದೆ - ಇಂದಲ್ಲ ನಾಳೆ ಈ ಲೋಕದ ಜನತೆ- ಸ್ತ್ರೀಯರು ಪುರುಷರೂ ಸೇರಿದಂತೆ ಎಲ್ಲರೂ ಆತ್ಮಗೌರವದಿಂದ ಹೆಮ್ಮೆಯಿಂದ ಬಾಳಬಹುದು ಎಂಬ ದೂರದೊಂದು ವಿಶ್ವಾಸವಿದೆ. ಬನ್ನಿ ಒಂದಾಗಿ ನಡೆಯೋಣ - ಸುತ್ತಮುತ್ತ, ಕಣ್ಣೆದುರೇ ಜರುಗುತ್ತಿರುವ ಘೋರ ದೌರ್ಜನ್ಯಗಳನ್ನು ಪ್ರಶ್ನಿಸುತ್ತ - ಶೋಕಗ್ರಸ್ಥರಾಗಿ.

'ಅರಗಿಣಿ - ಆಧುನಿಕ ಮಹಿಳೆ'ಯನ್ನು ವ್ಯಾಪಾರಿಗಳು, ಸರ್ಕಾರಗಳು, ಮಾಧ್ಯಮಗಳು ಸೃಷ್ಟಿಸಿವೆ. ಆಕೆ ಜಾಣೆ, ಸುಂದರಿ, ಪುರುಷರ ಸ್ಥಾನಮಾನಗಳಿಗೆ ಲಗ್ಗೆ ಇಡುವ ಧೀರೆ, ಗಂಡನಿಗೆ ಪ್ರಿಯವಾದ ಹೆಂಡತಿ, ಮಕ್ಕಳು ಮುದ್ದಿಸುವ ಮದರ್ ಇಂಡಿಯಾಗಳು, ಪ್ರೀತಿಯ ಸೊಸೆ, ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ಸನಾತನ ಸಂಸ್ಕೃತಿಯ ಕಿರೀಟದ ಭಾರ ಹೊತ್ತ ನಾರೀಮಣಿ. ಈ ಸದ್ದುಗದ್ದಲದಲ್ಲಿ, ಸುಳ್ಳು ಸಂಭ್ರಮಗಳಲ್ಲಿ ನಿಜವಾದ ಮಹಿಳೆ, ಸಾಮಾನ್ಯ ಮಹಿಳೆ, ಬದುಕಿನ ಅವಶ್ಯಕತೆಗಳಿಗೆ ಪರದಾಡುವ ಹೆಂಗಸರು, ಕುಟುಂಬದ, ಸಮಾಜದ ಕ್ರೌರ್ಯ, ಅನೀತಿಗಳಿಗೆ ಮೂಕವಾಗಿ ಕಾಣೆಯಾಗುವ ಹೆಣ್ಣುಮಕ್ಕಳು ಯಾರು? ಯಾರು-ಮೇಲೆ ಹೆಸರಿಸಿರುವ, ಹೆಸರು ಪರಿಚಯವಿಲ್ಲದ ಸತ್ತ 'ಸುಮಂಗಲಿ'ಯರು ಯಾರು?

ಕುಟುಂಬ, ಮನೆ, ರಕ್ಷಣೆ ಕೊಡುವ ಬಂಧು ಬಳಗದಿಂದ ಹಿಂಸೆಗೆ ಬಲಿಯಾದ, ಅತ್ಯಾಚಾರಕ್ಕೊಳಗಾದ, ಅವಮಾನಗಳಿಗೆ ತುತ್ತಾದ, ಸಾವಿಗೆ ಶರಣುಹೋದ ಮಹಿಳೆಯರ ಸಂಖ್ಯೆ 1991 ರಿಂದ 1998ರ (ಕೇವಲ ೭ ವರ್ಷಗಳು) ಒಳಗೆ ಸುಮಾರು 71.5% ಹೆಚ್ಚಾಗಿದೆ. ನಾಲ್ಕು ಗೋಡೆಯ ರಕ್ಷಣೆಯಲ್ಲಿ ಸಾವನ್ನಪ್ಪಿದ ಈ ಮಹಿಳೆಯರು ಯಾರು? ಜಗತ್ತಿನ ಪ್ರತಿ ಮೂರು ಮಹಿಳೆಯರಲ್ಲಿ ಒಬ್ಬಳು ದೈಹಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ ಹಿಂಸೆ ಅನುಭವಿಸುತ್ತಾಳೆ.

ಈ ಐವತ್ತು ವರ್ಷಗಳಲ್ಲಿ ಜಗತ್ತಿನಲ್ಲಿ ನಡೆದ ಭೀಕರ ಯುದ್ಧಗಳಿಂದಾಗಿ ಮೂರು ಮಿಲಿಯನ್ ಅಮಾಯಕರು ಸತ್ತಿದ್ದಾರೆ. ಸತ್ತ ಹತ್ತು ಮಂದಿಯಲ್ಲಿ ಎಂಟು ಜನ ಮಹಿಳೆಯರು ಮತ್ತು ಮಕ್ಕಳು. 1940 ರಿಂದ 1950ರ ವರೆಗೆ ಅಮೆರಿಕ ನಡೆಸಿದ ಅಣು ಪರೀಕ್ಷೆಗಳ ವಿಷಗಾಳಿಗೆ ತುತ್ತಾದ ಮೈಕ್ರೋನೇಸಿಯದ ಸಹಸ್ರಾರು ಹೆಂಗಸರು ಕರಗುವ ಮಾಂಸದ ಮುದ್ದೆಯಂತಿರುವ ಮಕ್ಕಳನ್ನು ಹೆತ್ತರು. ಜಪಾನಿನಲ್ಲಿ ಅಣು ವಿಕಿರಣಕ್ಕೆ ಈಗಲೂ ವಿಕೃತಗೊಂಡ ಮಕ್ಕಳು ಜನಿಸುತ್ತಿದ್ದಾರೆ. ಪೋಕ್ರಾನ್ ಮತ್ತು ಚಗೈನಲ್ಲಿ ವಿಜೃಂಭಿಸಿದ 'ದೇಶಪ್ರೇಮ'ದ ಹಾನಿಗಳು ಆಗಲೇ ಕಾಣತೊಡಗಿದೆ. ದೇಶಪ್ರೇಮಿಗಳ ಅಂತರರಾಷ್ಟ್ರೀಯ ಗಡಿಗಳ ವ್ಯಾಪಾರದ ವಿಜ್ಞಾನದ ಮಹತ್ವಗಳ ಸತ್ವ ಪರೀಕ್ಷೆಗೆ ಬಲಿಯಾದ ಈ ಅಮಾಯಕ ಮಹಿಳೆಯರು ಯಾರು?

ಬೋಸ್ನಿಯ, ರುವಾಂಡದಲ್ಲಿ ಮಿಲಿಟರಿ ನಡೆಸಿದ ಜನಾಂಗೀಯ ಶುದ್ಧೀಕರಣ (ಕುಲೀನರ ವಂಶ ಉದ್ಧಾರ) ಎಂಬ ಯುದ್ಧಗಳಲ್ಲಿ ಸಾವಿರಾರು ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಇತ್ತ ನಮ್ಮದೇ ನಾಡಿನಲ್ಲಿ ಇಂದಿರಾ ಗಾಂಧಿಯ ಹತ್ಯೆಯ ನಂತರ ನಡೆದ ಸಿಖ್ ಜನರ ನರಮೇಧ, ಬಾಬರಿ ಮಸೀದಿ ಕೆಡವಿದಾಗ ನಡೆಸಿದ ಹಿಂದು ಮುಸ್ಲಿಮ್ ಗಲಭೆಗಳಲ್ಲಿ, ಕಾವೇರಿ ವಿವಾದದಲ್ಲಿ ತಮಿಳರ ಮೇಲೆ ನಡೆದ ಹಿಂಸಾಕೃತ್ಯ ಲೈಂಗಿಕ ಅತ್ಯಾಚಾರ, ಮಾರಣ ಹೋಮಗಳಿಗೆ ಬಲಿಯಾದ ಮಹಿಳೆಯರು ಯಾರು? ಮಧ್ಯಪ್ರದೇಶದ ಜಾಬುವ ಗ್ರಾಮದಲ್ಲಿ ದೀನದಲಿತರ ಸೇವೆಯಲ್ಲಿ ತೊಡಗಿದ್ದ ಏಳು ಕ್ರೈಸ್ತ ಸನ್ಯಾಸಿನಿಯರು ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದರು. ಇಂಥ ಪ್ರಕರಣಗಳು ನಮಗೆ ತಿಳಿಸುವುದಾದರೂ ಏನನ್ನು.

ಅಫಘಾನಿಸ್ಥಾನದಲ್ಲಿ ಇಸ್ಲಾಂ ಧರ್ಮದ ಸ್ವಯಂ ಘೋಷಿತ ವಾರಸುದಾರರಾಗಲಿ ಭಾರತದ 'ದಂಡನಾಯಕರು'ಗಳಾಗಲೀ, ಅವರು ವಿಧಿಸುವ ಕಟ್ಟುಪಾಡುಗಳನ್ನು ಮಹಿಳೆ ಕೊಂಚ ಮೀರಿದರೂ ಇಲ್ಲ, ಹುಬ್ಬೆತ್ತಿದರೂ ಸಾಕು ಅವಳನ್ನು ಹೀನಾಮಾನ ಹಿಂಸಿಸಿ ಬುದ್ಧಿ ಕಲಿಸುವ ಸಂಸ್ಕೃತಿ ಬೆಳೆಸುತ್ತಿದ್ದಾರೆ. ಉಸಿರುಗಟ್ಟಿಸುವ ಈ ಸಂಸ್ಕೃತಿಯ ನೇಣಿಗೆ ನೇತಾಡುತ್ತಿರುವ ಅರೆಜೀವದ ಮಹಿಳೆಯರು ಯಾರು? ಇವರು ಏನೆನ್ನುತ್ತಾರೆ?

ಪ್ರಗತಿ, ಅಭಿವೃದ್ಧಿಯ ಹೆಸರಿನಲ್ಲಿ ಅಮಾಯಕ, ಅಸಹಾಯಕ ಜನರ ನೆಲ, ಜಲ, ಬದುಕು ದಿಕ್ಕಾಪಾಲಾಗಿ ಹೋಗಿದೆ. ಕಾರ್ಖಾನೆಗಳಲ್ಲಿ ದಿನಗೂಲಿ ಕೆಲಸಕ್ಕೆ ಕ್ಯೂ ನಿಲ್ಲುವ ಈ ಗುಳೆ ಎದ್ದ ಜನರ ಹೃದಯಕ್ಕೆ ಆದ ಆಘಾತಗಳೇನು? ಅವರ ಬದುಕಿಗಾದ ಅವಮಾನಗಳೇನು? ತಮ್ಮದೇ ನೆಲದಲ್ಲಿ ನಿರಾಶ್ರಿತರಾಗಿ ಬದುಕುವ ಈ ಬಹುಪಾಲು ಹೆಂಗಸರು ಮಕ್ಕಳು ಕೇಳುವ ಪ್ರಶ್ನೆಗಳಾದರೂ ಏನು? ಇವರು ಯಾವ ವ್ಯಾಪಾರಿಯ 'ಜಾಣ ಮಹಿಳೆ'ಯರಾಗಲು ಸಾಧ್ಯ? ಯಾವ ಸರ್ಕಾರದ 'ಶಕ್ತಿ-ಸ್ತ್ರೀ'ಯಾಗಲು ಸಾಧ್ಯ? ಯಾವ ಮಾಧ್ಯಮದ 'ಇಂದಿನ ಮಹಿಳೆ'ಯಾಗಲು ಅರ್ಹಳು?

ಬಡ ಮಹಿಳೆಯರು ಹರಿದ ಚಪ್ಪಲಿಗಿಂತ ಕೀಳು. ಸುಮ್ಮನೆ ಬಿಸಾಡಿದರಾಯಿತು-ದೇಶ ಸಲೀಸಾಗಿ ಮುಂದುವರೆಯಬಹುದು - ನೀಟಾಗಿ, ಮಾಡರ್ನ್ ಆಗಿ.

'ಆಧುನಿಕ ಮಹಿಳೆ', 'ಪರಿಪೂರ್ಣ ಮಹಿಳೆ' ಎಂಬ ಆದರ್ಶಗಳಿಗೆ ಸಂಪೂರ್ಣ ಅನರ್ಹರಾಗಿರುವ ಈ ಮಿಲ್ಲಿಯಾಂತರ ಮಹಿಳೆಯರು ಯಾರು? ಕಾಸುಳ್ಳವರ ಕಣ್ಮಣಿಯಾಗದ ಈ ನತದೃಷ್ಟರು ಯಾರು? ನಿತ್ಯವೂ ಬೇಯುತ್ತಲೇ ಬದುಕುವ ಈ ಬಲಹೀನ ಮಹಿಳೆಯರು ಯಾರು?

ವಿಶಿಷ್ಟ ಮಹಿಳಾದಿನ

- ಬಿ. ಎಸ್. ಶಾರದ

ಚೈತನ್ಯ ಯುವತಿಯರ ಸಂಘ ಸ್ಲಂ ಯುವತಿಯರ ಜೀವನೋತ್ಸಾಹದ ತಾಣ. ಇದು ಸ್ತ್ರೀ ಜಾಗೃತಿ ಸಮಿತಿಯ ಅಂಗ ಸಂಸ್ಥೆ, ಯುವತಿಯರ ಕನಸುಗಳಿಗೆ, ಹುಡುಕುವಿಕೆಗೆ, ನೋವು ನಲಿವನ್ನು ಹಂಚಿಕೊಳ್ಳುವ ಜಾಗವಾಗಿ ಮೊಳಕೆಯೊಡೆದು ಚಿಗುರಿದ ಇದಕ್ಕೇ ಇದೇ ಮಾರ್ಚ್ 8ಕ್ಕೆ ಎರಡು ವರ್ಷ ಮುಗಿಸಿದ ಸಂಭ್ರಮ. ಮನೆಕೆಲಸವನ್ನೇ ಅವಲಂಬಿಸಿರುವ ಇವರು ಮಾರ್ಚ್ 8ನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಅದರ ಇತಿಹಾಸ ಹಾಗೂ ಇಂದಲ್ಲ ನಾಳೇ ತಮ್ಮ ವೃತ್ತಿಗೆ ಕಾರ್ಮಿಕರೆಂಬ ಮನ್ನಣೆ ಸಿಗಲೆಂಬ ಗುರಿಯೇ ಪ್ರೇರೊಪಣೆ.

ಇವರು ತಮ್ಮ ಎರಡನೇ ಹುಟ್ಟು ಹಬ್ಬವನ್ನು ಹಂಚಿಕೊಳ್ಳ ಬಯಸಿದ್ದು ಇತರೆ ಸ್ಲಂ ಯುವತಿಯರೊಂದಿಗೆ. ಸ್ಲಂನ ಯುವತಿಯ ರೊಂದಿಗೆ ಈಗಾಗಲೇ ಕೆಲಸ ಮಾಡುತ್ತಿರುವ ಇತರೆ ಸಂಘ ಸಂಸ್ಥೆಗಳಿಗೆ ಪತ್ರ ಬರೆದು, ತಮ್ಮ ಈ ಸಂಭ್ರಮದ ಪ್ರಯುಕ್ತ ಹಾಡ್ಡು, ಭಾಷಣ, ಕಿರುನಾಟಕದ ಸ್ಪರ್ಧೆಯಿದೆ, ವಿಷಯವು ನಮ್ಮ ನೋವು-ನಲಿವನ್ನು ಕೇಂದ್ರೀಕರಿಸಿರಬೇಕೆಂದು ಕೇಳಿಕೊಂಡಿದ್ದರು. ಬೇರೆ ಬೇರೆ ಏರಿಯಾದ ಯುವತಿಯರ ದಂಡೇ ನೆರೆದಿತ್ತು. ಆಯೋಜಿಸಿದ್ದ ಯುವತಿಯರ ರಂಗು ರಂಗಿನ ಉಡುಗೆ, ಸಡಗರ, ಉತ್ಸಾಹಗಳು ಹಬ್ಬದ ವಾತಾವರಣವನ್ನು ನಾಚಿಸುವಂತಿತ್ತು. ತಾವು ಮಾತ್ರ ಸ್ಪರ್ಧೆಯಿಂದ ದೂರ ಉಳಿದು ಮಹಿಳಾ ದಿನದ ವಿಶೇಷತೆ, ಚೈತನ್ಯ ಯುವತಿಯರ ಸಂಘದ ಹುಟ್ಟು, ಅನಿವಾರ್ಯ ಹಾಗೂ ಕ್ರಾಂತಿ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದರು. ಬಂದಂತಹ ಗುಂಪುಗಳು ತಮ್ಮ ಸ್ವಪರಿಚಯ ಮಾಡಿಕೊಟ್ಟರು.

ಸ್ಪರ್ಧೆಗಳು ಪ್ರಾರಂಭವಾಧವು. ಹಾಡು, ನಾಟಕ ವಿಷಯ ಮಂಡನೆ ಎಲ್ಲವೂ ಅದ್ಭುತವಾಗಿದ್ದವು. ಇವು ಬರೀ ಮನರಂಜನೆಯಾಗದೆ, ಮನದಾಳದ ನೋವು ತೆರೆದಿಟ್ಟಿದ್ದರಿಂದ ಹಾಗೂ ತಮ್ಮದೇ ವಾಸ್ತವದೆಡೆಗೆ ಬೆಳಕು ಚೆಲ್ಲಿದ್ದರಿಂದ ಎಲ್ಲರನ್ನೂ ತಟ್ಟಿದ್ದವು. ಬಂದಿದ್ದ ನೂರಾರು ಜನರಲ್ಲಿ ಒಬ್ಬರಲ್ಲ ಮತ್ತೊಬ್ಬರ ಜೀವನದ ನಿತ್ಯ ಬವಣೆಯ ಮುಖಗಳೇ ಅವಾಗಿದ್ದರಿಂದ ಎಲ್ಲರೂ ಸ್ತಬ್ಧರಾಗಿದ್ದರೆಂದರೆ ಆಶ್ಚರ್ಯವೇನೂ ಅಲ್ಲ.

ತಮ್ಮ ಜೀವನ ಹೋರಾಟದಿಂದ, ಕಷ್ಟ ಕೋಟಲೆಗಳಿಂದ ತುಂಬಿರುವುದರಿಂದ ಭ್ರಮಾಲೋಕದ ಜನ ತಮ್ಮ ಮಾಡಲ್ ಗಳಲ್ಲ ಎಂಬ ಖಚಿತ ನಿಲುವಿದ್ದ, ಸಂಘ ಪರಿಶ್ರಮದ ಬೆಲೆ ಅರಿತ, ಯಾವ ಉದ್ಯೋಗವೂ ಮೇಲು ಕೀಳೆಂಬ ಭಾವನೆಯಿಲ್ಲದ ಒಬ್ಬಿಬ್ಬರಾದರೂ ಇಂದು ತಮ್ಮೊಂದಿಗೆ ಆದರ್ಶವಾಗಿ ಇದ್ದು ನಮ್ಮ ಸಂತೋಷದಲ್ಲಿ ಭಾಗಿಗಳಾಗಬೇಕೆಂಬ ಆಸೆ ಹೊತ್ತ ಯುವತಿಯರು ಆಹ್ವಾನಿಸಿದ್ದು ಅರ್ಷಫಿ ಹಾಗೂ ಆರುಂಧತಿನಾಗ್ ಅವರನ್ನು. ಅವರನ್ನು ಸ್ಟೇಜ್‌ಗೆ ಕಳಿಸಿ ಭಾಷಣಕಾರರಾಗಿ ಕೂರಿಸದೆ ತಮ್ಮೊಂದಿಗೆ ಕೂರಿಸಿಕೊಂಡು ಅವರ ಜೀವನ, ಕನಸನ್ನು ತಮ್ಮೊಂದಿಗೆ ಹಂಚಿಕೊಳ್ಳುವಂತೆ ಒತ್ತಾಯಿಸಿದರು.

ಅರ್ಷಫಿ ಹೇಳಿದ್ದು-ಬಾಲ್ಯದಿಂದಲೂ ಗಂಡಸರಿಗೇ ಎಂದೇ ಮೀಸಲಾದ ಯಾವುದಾದ್ದರೊಂದು ಕೆಲಸ ತಾನು ಮಾಡಿ ಸಾಧಿಸಬೇಕೆಂಬ ಹಂಬಲವಿತ್ತು. ಹಾಗಾಗಿ ಆಕೆ ಆರಿಸಿಕೊಂಡಿದ್ದು ಟೂ ವೀಲರ್ ರಿಪೇರಿ. ಮನೆಯವರ ವಿರೋಧದ ಮಧ್ಯೆಯೇ 6 ತಿಂಗಳು ಕಾಲ ಮದ್ರಾಸ್‌ನಲ್ಲಿ ತರಬೇತಿ ಹೊಂದಿ ಆಮೇಲೆ ಕೆಲಸಕ್ಕಾಗಿ ಅಲೆದು, ಕಡೆಗೆ ಕೆಲಸ ಸಿಕ್ಕ ಕಡೆ ಸ್ವಲ್ಪ ತಪ್ಪಾದ್ರು "ಹೆಂಗಸಿಗ್ಯಾಕ್ರಿ ಸ್ಪಾನರ್ಸ್, ಅಡಿಗೆ ಮಾಡ್ಕೊಂಡು ಇರ್‍ಬಾರ್‍ದಾ ಅಂತ" ಮೂದಲಿಸಿದರೂ ಛಲ ಬಿಡದೆ ಸೈ ಎನ್ನಿಸಿಕೊಂಡರು. ಬೆಂಗಳೂರಿನಲ್ಲಿ ಈಗಾಗಲೇ ಇತರೆ 8 ಹುಡುಗಿಯರಿಗೆ ತನ್ನ ಜಾಣ್ಮೆ ಧಾರೆಯೆರೆದಿದ್ದಾರೆ. ಅವರಲ್ಲಿ 6 ಹುಡುಗಿಯರು ಕೆಲಸವನ್ನು ಮಾಡುತ್ತಿದ್ದಾರಂತೆ. ತನ್ನದೇ ವರ್ಕ್‌ಶಾಪ್ ತೆಗಿಲೇಬೇಕು ಅನ್ಕೊಂಡಿದ್ದ ಆಕೆ ಸಂಜಯನಗರದಲ್ಲಿ "ಅರ್ಷಫಿ ಮೋಟಾರ್ಸ್" ಅಂತಾನೆ ತೆರೆದು ದ್ವಿಚಕ್ರವಾಹನ ರಿಪೇರಿ ಕೆಲಸ ಮಾಡ್ತಾ ಇದಾರೆ. ಆಕೆ ಟ್ರೇನಿಂಗ್‌ಗೆ ಹೋದಾಗ ಮಗಳು ಹೀಗೆ ಹೋಗಿದ್ದಾಳೆಂದು ಹೇಳಲು ಹಿಂಜರಿದ ಅಪ್ಪ ಅಮ್ಮ ಈಗ ಹೆಮ್ಮೆಯಿಂದ ಮಗಳು ವರ್ಕ್‌ಶಾಪ್‌ಗೆ ಹೋಗಿದ್ದಾಳೆಂದು ಹೇಳುತ್ತಾರೆಂದು ಹೇಳಿದ ಅರ್ಷಫಿ, ಯಾವುದೂ ಮೇಲಲ್ಲ ಯಾವುದೂ ಕೀಳಲ್ಲ ಯಾವ ಕೆಲಸವೂ ಯಾರ ಗುತ್ತಿಗೆಯಲ್ಲ ಎಂದು ಕಿವಿಮಾತು ಹೇಳಿದರು. ನಿಷ್ಠೆಯಿಂದ ಪ್ರೀತಿಯಿಂದ ನೀವು ಮಾಡುವ ಕೆಲಸ ನೋಡಿ ಎಂದು ಹೇಳಲು ಮರೆಯಲಿಲ್ಲ.

ಆರುಂಧತಿನಾಗ್-ನಮ್ಮ ಅಪ್ಪ ಅಮ್ಮ ನನಗೆ ವಿದ್ಯೆ ಕೊಟ್ಟಿದ್ದಾರೆ. ಹಾಗಂತ ನಾನು ಜಂಬ ಪಡಬೇಕಾಗಿಲ್ಲ. ಯಾಕೆ ಅಂದ್ರೆ ನಿಮ್ಮ ಹಾಗೆ ಜೀವನ ನೋಡುವ, ಎದುರಿಸುವ ಛಲದಿಂದ ವಂಚಿತಳಾಗಿದ್ದೀನಿ. ನೀವು ನಿಮ್ಮ ಬವಣೆಗಳನ್ನೆಲ್ಲ ಯಾವ ಡೈರೆಕ್ಟರ್ ಸಹಾಯ ಇಲ್ದೆ ಎಷ್ಟು ಚೆನ್ನಾಗಿ ನಮ್ಮ ಮುಂದೆ ಇಟ್ಟಿದ್ದೀರಿ ಎಂದು ಅವರು ಪರಿಹಾರದ ಮಾರ್ಗ ಕೂಡ ನಾವೇ ಹುಡ್ಕೋಬೇಕು ಅಂತ ತಿಳಿಹೇಳಿದರು. ಹಾಗೇನೇ ಹೆಣ್ಣಿಗೆ ಸಮಾನತೆ ಬೇಕು ಆದ್ರೆ ಹೆಣ್ತನದ ಒಳ್ಳೆಯ ಗುಣ ಬದಿಗೊತ್ತಿ ಗಂಡಿನ ದರ್ಪ, ದೌರ್ಜನ್ಯ ನಮ್ಮದಾಗಿಸಿಕೊಳ್ಳುವುದಲ್ಲ;

ಬದಲಿಗೆ ಇವುಗಳಿಲ್ಲದ ಸಮಾಜಕ್ಕೆ ಎಲ್ಲರನ್ನು ಎಳೆದು ತರುಬೇಕಾಗಿದೆ. ಈರುಳ್ಳಿ ಹೆಚ್ಚೋಕೆ ಬರಲ್ಲ ಎಂದು ಹೇಳಿಕೊಳ್ಳುವವರು ನಮಗೆ ಆದರ್ಶ ಆಗಬೇಕಾಗಿಲ್ಲ, ಬದಲಿಗೆ ಅರ್ಷಫಿ ಅಂತವರು ಆದರ್ಶ ಆಗಬೇಕು. ನಾನು ಕೂಡ ನನ್ನದೇ ರಂಗದಲ್ಲಿ ಹೋರಾಟ ಮಾಡಿ ಜಯಸಿದ್ದೇನೆ, ಹೋರಾಟ ಮಾಡ್ತಾನೂ ಇದೀನಿ. ಕಷ್ಟಗಳ ಸಂಕೋಲೆಗಳ ಮಧ್ಯೆ ನಾನು ಇದ್ದೇನೆ, ಎದುರಿಸಿದ್ದೇನೆ. ನಿಮ್ಮ ಪ್ರತಿಭೆಗೆ ಯಾವ ಮಾನದಂಡವೂ ಬೇಡ. ಪರಿಹಾರೋಪಾಯಗಳ ಬಗ್ಗೆ ಚಿಂತಿಸೋಣ, ನಾನು ನಿಮ್ಮೊಂದಿಗೆ ಇದ್ದೇನೆ. ಮುಂದೂ ಇರ್ತೀನಿ ಅನ್ನೋ ಭರವಸೆಯ ಮಾತುಗಳನ್ನಾಡಿದರು.

ಮಧ್ಯಾಹ್ನ ಬೆಳಿಗ್ಗೆ ತಾವೇ ತೆರೆದಿಟ್ಟ ತಮ್ಮ ಜೀವನದ ಮಾಲೆಗಳಿಗೆ ಏನಾದರೂ ದಾರಿ ಹುಡಕಲು ಸಾಧ್ಯವೇ ಅನ್ನೊ ಪ್ರಶ್ನೆ ಇಟ್ಟಕೊಂಡು, ಎಲ್ಲರೂ ತಮ್ಮ ಗುಂಪಿನೊಂದಿಗಷ್ಟೆ ಉಳಿಯದೆ ಇತರರೊಡನೆ ಬೆರೆಯುವಂತೆ ಮಾಡಲಾಯಿತು. ಅವರಿಗೆ ಹೇಳಿದ್ದೇನೆಂದರೆ ಪ್ರತಿಯೊಬ್ಬರು ತಮ್ಮ ತಮ್ಮ ಬಗ್ಗೆ ಗುಂಪಿನಲ್ಲಿ ಚರ್ಚಿಸಬೇಕು. ಇತರರೆಲ್ಲರೂ ಏನಾದ್ರು ಅದಕ್ಕೆ ಪರಿಹಾರ ಹೊಳೆದರೆ ಹೇಳಬೇಕು, ಮತ್ತು ಅದನ್ನು ದಾಖಲಿಸಿ ಅವರಲ್ಲೇ ಒಬ್ಬರು ಪ್ರತಿನಿಧಿಯಾಗಿ ಬಂದು ಎಲ್ಲರೊಂದಿಗೂ ಹಂಚಿ ಕೊಳ್ಳಬೇಕೆಂಬ ಅನ್ನೋ ತಾಕೀತಾಯ್ತು.

ಮೊದಲಿಗೆ ಒಂದು ಬೆಂಕಿಕಡ್ಡಿ, ತಟ್ಟೆ ಹಾಗೂ ಒಂದು ನಿಂಬೆ ಹಣ್ಣು ಕೊಟ್ಟು ಅವುಗಳಿಂದ ಆಗುವ ಗರಿಷ್ಠ ಉಪಯೋಗ ಬಂದು ಹೇಳುವಂತೆ ಪ್ರತಿ ಗುಂಪಿಗೂ ಹೇಳಲಾಯ್ತು. ಅಬ್ಬಬ್ಬ ಅಷ್ಟೆಲ್ಲ ಮೂರು ವಸ್ತುಗಳಿಂದ ಸಾಧ್ಯನಾ? ಅನ್ನುಸಿಬಿಟ್ರು ಹುಡುಗಿಯರು. ನಂತರ ಅವರಿಗೆ ಮೊದಲೇ ಹೇಳಿದಂತೆ ಸಮಸ್ಯೆ ಗುಂಪಿನ ಪರಿಹಾರ ಎರಡೂ ಆಗಬೇಕೆಂದ ತಕ್ಷಣ ಗಿಜಿ, ಗಿಜಿ, ಗುಜುಗುಜು ಶುರುವಾಯ್ತು. ನಂತರ ಬಂತಲ್ಲಾ ಪ್ರವಾಹದೋಪಾದಿ. ಅವುಗಳಲ್ಲಿ ಆಯ್ದು ಕೆಲವು ಮನೆಯಲ್ಲೂ ಕೆಲಸ ಮಾಡ್ಬೇಕು. ಬೇರೆಯವರ ಮನೆಯಲ್ಲೂ ಅದೇ ಮಾಡ್ಬೇಕು; ಮೂದಲಿಕೆಗಳಿಗೆ ಕೊನೇನೆ ಇಲ್ಲ; ಅಪ್ಪ ಇಲ್ಲ, ಇದ್ರು ನಮ್ಮ ಜೊತೆಯಿಲ್ಲ, ಸಾಲ ಮಾಡಿ ಓಡಿ ಹೋಗಿದಾನೆ; ಅಪ್ಪ ಅಮ್ಮನ ಪ್ರೀತಿ ಅಂದ್ರೆ ಏನು ಅಂತ ಗೊತ್ತೇ ಇಲ್ಲ; ಕೆಲಸ ಜಾಸ್ತಿ ಓದಕ್ಕೆ ಆಸೆ ಇದ್ರೂ time ಇಲ್ಲ; ಓದಿ ಸಂಪಾದಿಸಿ ಒಳ್ಳೆ ಜೀವನ ಮಾಡ್ಬೇಕು; ಅಮ್ಮನಿಗೆ ಸಹಾಯ ಮಾಡ್ಬೇಕು; ನಿಟ್ಟಿಂಗ್, ಟೈಲರಿಂಗ್ ಕಲಿಬೇಕು; ಹುಡ್ಗಿರೂ ಅಂತ ಕಟ್ಟಳೆಗಳೇ ಜಾಸ್ತಿ; ಚುಡಾಯಿಸುತ್ತಾರೆ; SC ಅಂತ ಸ್ಕೂಲಿನಲ್ಲಿ ದೂರ ಇಡ್ತಾರೆ; ಸ್ಲಂ ಡೆಮಾಲಿಷನ್ ಭಯ;........ಹೀಗೆ ಕಷ್ಟಗಳ, ಆಸೆಗಳ ಸರಮಾಲೆ. ಅವರದೇ ಪರಿಹಾರ ಕೇಳಿ (ಉಳಿದವರು ಪರಿಹಾರ ಸೂಚಿಸಿದ್ದರು) ಅಪ್ಪ ಅಮ್ಮನ ಪ್ರೀತಿ ಯಾರೂ ಕೊಡಕ್ಕ ಸಾಧ್ಯಯಿಲ್ಲ ಹಾಗಾಗಿ ಗುಂಪಿನೊಂದಿಗೆ ಬೆರೆತು ಪ್ರೀತಿ ಸ್ನೇಹ ಪಡೆ; ಕೆಲಸ ಜಾಸ್ತಿ ಇದ್ರೆ ಬೆಳಿಗ್ಗೆ ಬೇಗ ಎದ್ದು ಓದು; SC ಅಂತ ದೂರ ಮಾಡಿದ್ರೆ ಮ್ಯಾನೇಜ್‌ಮೆಂಟ್‌ಗೆ ತಿಳಿಸು; ಅಮ್ಮನಿಗೆ ಸಹಾಯ ಮಾಡೋದು ಒಳ್ಳೆದು; ಜಾಸ್ತಿ ಸಂಘ ಸಂಸ್ಥೆಗಳು ನಮಗೆ ಸಹಾಯ ಒದಗಿಸಲಿ; ಇತ್ಯಾದಿ.

ದಂಗು ಬಡಿಯುವ ಸರದಿ ಸಭಿಕರದಾಗಿತ್ತು. ಎಷ್ಟೊಂದು ಪ್ರೌಢವಾಗಿ ಎಲ್ಲಾ ಮಾತಾಡಿ ಮುಗಿಸಿದ್ರು ಮಕ್ಕಳು. ಎಲ್ಲದನ್ನೂ ಕ್ರೋಢೀಕರಿಸಿ ಅವರು ಬಿಟ್ಟ ಲೈಂಗಿಕ ದೌರ್ಜನ್ಯ ಲಿಂಗಾಧಾರಿತ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿ ಮಹಿಳಾ ಸಂಗ್ರಾಮದ ಗಾಯತ್ರಿ ಮಾತನಾಡಿದರು. ಬಿ. ಎನ್. ಶಾರದಾ ಕಾರ್ಯಕ್ರಮ ನಿರ್ವಹಣೆ ಮಾಡಿದರೆ, ಈ ಚೈತನ್ಯಗಳನ್ನೆಲ್ಲ ಒಟ್ಟಿಗೆ ತಂದು ಮುಂದೆ ಎಲ್ಲಾರೂ ಸೇರಿ ಏನಾದ್ರೂ ಮಾಡಲು ಸಾಧ್ಯನಾ ಅನ್ನುವ ಪ್ರಶ್ನೇನ ಅವರಿಗೇ ಬಿಟ್ಟು, ಅವರೆಲ್ಲರಿಗೂ ಸ್ಫೂರ್ತಿಯಾದ ಗೀತಾ ಮೆನನ್ ಸಭೆಯಲ್ಲಿ ಪಾದರಸದಂತಿದ್ದರು. ಆತ್ಮೀಯ ಅರ್ಥಪೂರ್ಣ ಕಾರ್ಯಕ್ರಮ ಹೋರಾಟದ ಹಾಡುಗಳೊಂದಿಗೆ ಮುಕ್ತಾಯ ವಾಯ್ತು.

ಮನು ವಿರುದ್ಧ ಜಾಥಾ

ರಾಜಸ್ತಾನದ ರಾಜಧಾನಿ ಜಯಪುರದ ಹೈಕೋರ್ಟಿನ ಮುಂದೆ, ಅಸಮಾನತೆಯ ಸಮಾಜ ವ್ಯವಸ್ಥೆಯ ಹರಿಕಾರನೆಂಬ ಕುಖ್ಯಾತಿಯ ಮನು ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳ ಆಧಾರ ಹೊಂದಿರುವ ನಮ್ಮ ಸಂವಿಧಾನವು ಸರ್ವಶ್ರೇಷ್ಠವೆಂದು ಪರಿಗಣಿಸಿ, ಸಮಸ್ತರಿಗೆ ನ್ಯಾಯ ಒದಗಿಸುವ ಹೈಕೋರ್ಟಿನ ಎದುರಿಗೆ ಮನು ಪ್ರತಿಮೆ ಶುದ್ಧ ಅಸಂಬದ್ಧ ಹಾಗೂ ತೀವ್ರ ಖಂಡನಾರ್ಹ.

ಮನು ಪ್ರತಿಮೆ ಮತ್ತು ಅವನ ಚಿಂತನೆಯ ಅಮಾನವೀಯತೆಯ ಬಗ್ಗೆ ಹಾಗೂ ಭಾರತದ ಸಂವಿಧಾನದ ವೈಶಿಷ್ಟ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು, ಮನು ಪ್ರತಿಮೆ ತೆಗೆದುಹಾಕುವ ಬಗ್ಗೆ ಜನಾಭಿಪ್ರಾಯ ಮೂಡಿಸಲು ಮಹಾರಾಷ್ಟ್ರದ ಖ್ಯಾತ ಸಮಾಜ ಚಿಂತಕ ಡಾ|| ಬಾಬಾ ಅಧಾವ್ ನೇತೃತ್ವದಲ್ಲಿ ಪುಣೆಯಿಂದ ಜಯಪುರಕ್ಕೆ ಜಾಥಾ ನಡೆದಿದೆ.

ಈ ಜಾಥಾಕ್ಕೆ ನೈತಿಕ ಹಾಗೂ ಆರ್ಥಿಕ ಬೆಂಬಲ ನೀಡಬೇಕಾಗಿ ಕೋರುತ್ತೇವೆ. (ವಿಳಾಸ: ರಾ.ಪ. ನೇನೆ, ೫೪೪:೨, ಸದಾಶಿವ ಪೇಠ್, ಲಕ್ಷ್ಮಿ ರಸ್ತೆ, ಪುಣೆ-೪೧೧ ೦೩೦).

ಭಾಯಿ ವೈದ್ಯ, ಪ್ರೊ. ಸತ್ಯರಂಜನ ಸಾಠೆ, ರಾ.ಪ. ನೇನೆ, ತಾಹೇರಭಾಯಿ ಪೂನಾವಾಲಾ ವಿಲಾಸ ವಾಘ್ನ ವಸುಧಾ ಸರದಾರ ಆಸಕ್ತಿಯಿರುವ ಎಲ್ಲರೂ ಮೇಲಿನ ವಿಳಾಸದೊಂದಿಗೆ ಸಂಪರ್ಕಿಸಿ.

ಸಂಭ್ರಮದ ದಿನವಲ್ಲ, ಸಂಕಟದ ದಿನ

ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ದಿನಾಂಕ 18-3-2000 ಮತ್ತು 19-3-2000ದಂದು "ಸಮತಾ ಸಂಭ್ರಮ"ದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ರಾಜ್ಯದ ಎಲ್ಲೆಡೆಯಿಂದ ದಲಿತ ಕಲಾವಿದರು, ಬರಹಗಾರರು, ಪತ್ರಿಕೆ ನಡೆಸುವವರನ್ನು ಕರೆಸಿ 2 ದಿನಗಳ ಕಾವ್ಯವಾಚನ, ಚರ್ಚೆ, ಹಾಡು, ಕುಣಿತ ಇತ್ಯಾದಿಗಳ ಉತ್ಸವವನ್ನು ಆಚರಿಸಲು ಏರ್ಪಾಟು ಮಾಡಲಾಗಿತ್ತು.

ಕೋಲಾರ ಜಿಲ್ಲೆಯ ಕಂಬಾಲಪಲ್ಲಿ ಗ್ರಾಮದಲ್ಲಿ 7 ಜನ ದಲಿತರ ಸಜೀವ ದಹನವಾದ ಪ್ರಕರಣದಲ್ಲಿ ಹಿನ್ನೆಲೆಯಲ್ಲಿ ಸರ್ಕಾರ ಸಮತಾ ಸಂಭ್ರಮದ ಕಾರ್ಯಕ್ರಮವನ್ನು ರದ್ದು ಮಾಡುವ ಇಲ್ಲವೇ ಮುಂದೂಡುವ ನಿಲುವು ತೆಗೆದುಕೊಳ್ಳದಿದ್ದುದು ಅಮಾನವೀಯವಾದುದು. ಇಲಾಖೆಯವರು ಉರಿದು ಹೋದ ದಲಿತರ ಬೂದಿ ತಣ್ಣಗಾಗುವ ಮೊದಲೇ ಸಂಭ್ರಮಕ್ಕೆ ಸಿದ್ಧತೆಯನ್ನು ಮಾಮೂಲಿನಂತೆ ನಡೆಸಿಬಿಟ್ಟರು. ಸರಕಾರದ ಮಾನಗೇಡಿ ನಿಲುವನ್ನು ಖಂಡಿಸಿ, ಸಂಭ್ರಮಕ್ಕೆ ಆಹ್ವಾನಿಸಲ್ಪಟ್ಟಿದ್ದ ಬರಹಗಾರರು ಮತ್ತು ದಲಿತ ಸಂಘರ್ಷ ಸಮಿತಿಯವರು ಕಾರ್ಯಕ್ರಮವನ್ನು ಬಹಿಷ್ಕರಿಸಲು ನಿರ್ಧರಿಸಿದರು. ಸಂಕಟ ಪಡಬೇಕಾದ ಸಂದರ್ಭದಲ್ಲಿ ಸಂಭ್ರಮ ಪಡುವುದನ್ನು ವಿರೋಧಿಸಿದ ಡಿ.ಎಸ್.ಎಸ್. ಕಾರ್ಯಕರ್ತರು, ಬರಹಗಾರರು, ಕಲಾವಿದರು ಕಾರ್ಯಕ್ರಮ ನಡೆಯಬೇಕಿದ್ದ ರವೀಂದ್ರ ಕಲಾಕ್ಷೇತ್ರಕ್ಕೇ ಹೋಗಿ, ಕಾರ್ಯಕ್ರಮ ಆರಂಭವಾಗುತ್ತಿದ್ದಂತೆಯೇ ಹಾಲ್‌ನಲ್ಲಿ ಎಲ್ಲೆಡೆಯಿಂದ ದಲಿತರ ಸಜೀವದಹನವನ್ನು ವಿರೋಧಿಸಿ ಘೋಷಣೆಗಳನ್ನು ಕೂಗಲಾಯ್ತು. ಸಾಹಿತಿ ಎಲ್. ಹನುಮಂತಯ್ಯನವರು ಕಾರ್ಯಕ್ರಮವನ್ನು ಬಹಿಷ್ಕರಿಸುತ್ತಿರುವುದರ ಉದ್ದೇಶವನ್ನು ಸ್ಪಷ್ಟಪಡಿಸಿದರು. ನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ರಾಣಿ ಸತೀಶ್ ಅವರು ಮಾತನಾಡಿದರು. ಸಂತಾಪ ಸೂಚಿಸಿ, ಕಾರ್ಯಕ್ರಮವನ್ನು ರದ್ದು ಪಡಿಸಲು ಬಂದಿದ್ದೇನೆಂದು ಅವರು ಹೇಳಿದ್ದು ಹಾಸ್ಯಾಸ್ಪದವಾಗಿತ್ತು. ವೇದಿಕೆ ಏರುವ ಮುನ್ನ "ಇದು ನಿಮಗಾಗಿಯೇ ಮಾಡಿರುವ ಕಾರ್ಯಕ್ರಮ ದಹಿಸಿ ಹೋದವರಿಗಾಗಿ ಸಂತಾಪ ಸೂಚಿಸಿ, ಪ್ರಕರಣ ಕುರಿತು ಚರ್ಚಿಸೋಣ" ಎಂದಿದ್ದ ಮತ್ತು ಟೌನ್‌ಹಾಲ್‌ನಿಂದ ಕಲಾವಿದರ ಕುಣಿತದೊಂದಿಗೆ ಮೆರವಣಿಗೆಯಲ್ಲಿ ಆಗಮಿಸಿದ್ದ ಸಚಿವೆ ವೇದಿಕೆಯ ಮೇಲೆ ಕಾರ್ಯಕ್ರಮ ರದ್ದುಪಡಿಸಲು ಬಂದಿದ್ದೇನೆಂದು ಹೇಳಿದರು. ಬಹಿಷ್ಕಾರವಿಲ್ಲದಿದ್ದರೆ ಸುಸೂತ್ರವಾಗಿ ಸಂಭ್ರಮ ಮುಂದುವರೆದುಕೊಂಡು ಹೋಗುತ್ತಿತ್ತು. ದಲಿತರಿಗೆ ವೇದಿಕೆ ನೀಡಿದ್ದೇವೆಂದು ತಮ್ಮ ದಲಿತಪರ ಒಲವನ್ನು ಪ್ರೂವ್ ಮಾಡಿಬಿಡುತ್ತಿದ್ದರು. ಬಹಿಷ್ಕರಿಸಿದ ಮೇಲೂ ಕಾರ್ಯಕ್ರಮ ಮುಂದುವರಿಸಿದರೆ ದಲಿತರ ಮೇಲಿನ ಪ್ರೇಮದ ನಿಜವಾದ ಬಣ್ಣ ಬಯಲಾಗುವುದೆಂದು ಕಾರ್ಯಕ್ರಮವನ್ನು ರದ್ದು ಪಡಿಸಲಾಯ್ತು. ಪ್ರತಿಭಟಿಸಿದವರೆಲ್ಲಾ ಹೊರಬಂದು ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ಸಭೆ ನಡೆಸಿದರು. ಕಾರ್ಯಕ್ರಮದಲ್ಲಿ ಹಾಡಲು ಬಂದಿದ್ದವರು ದಲಿತರ ಹೋರಾಟದ ಹಾಡುಗಳನ್ನು ಹಾಡಿದರು. ಹನುಮಂತಯ್ಯ, ಕಮಲಾ ಹಂಪನಾ, ಮೋಹನ ನಾಗಮ್ಮನವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ಕ್ರಿಯಾತ್ಮಕವಾಗಿ, ಬದ್ಧರಾಗಿ ದುಡಿಯಲು ಅಗತ್ಯವಿದೆ ಎಂದು ಅಭಿಪ್ರಾಯ ಪಡಲಾಯ್ತು.

ಒಂದೇ ಒಂದು ದಿನದಲ್ಲಿ ಸಣ್ಣ ಕರಪತ್ರವನ್ನು ಸಿದ್ಧಪಡಿಸಿ, ಕರಪತ್ರದಲ್ಲಿ ಹೆಸರು ಹಾಕಲು ಫೋನುಗಳ ಮೂಲಕ ಸಾಧ್ಯವಾದಷ್ಟು ಬರಹಗಾರರನ್ನು ಸಂಪರ್ಕಿಸಿ, ತುರ್ತು ಸಭೆಗಳನ್ನು ಏರ್ಪಡಿಸಿ, ಕಾರ್ಯಕ್ರಮ ರದ್ದುಪಡಿಸಿದ ಯಶಸ್ಸಿನ ಹಿಂದೆ ಶ್ರಮವಹಿಸಿದವರು ಅಣ್ಣಯ್ಯ, ದೇವೇಂದ್ರ ಹೆಗಡೆ, ಸುಬ್ಬು, ವಿಜಯ್, ಡಿ.ಎಸ್.ಎಸ್.ನ ಬೆಂಗಳೂರು ವಿಭಾಗದ ಶಿವಶಂಕರ್, ಲಕ್ಷ್ಮೀನಾರಾಯಣ ಹಾಗೂ ಇನ್ನೂ ಅನೇಕ ಕಾರ್ಯಕರ್ತರು. ●

ಮಾನಸ ಓದುಗರಿಗಾಗಿ ಕರಪತ್ರವನ್ನು ಪ್ರಕಟಿಸಿದ್ದೇವೆ

ಕೋಲಾರ ಜಿಲ್ಲೆಯ ಕಂಬಾಲಪಲ್ಲಿ ಗ್ರಾಮದಲ್ಲಿ 7 ಜನ ದಲಿತರ ಸಜೀವ ದಹನವಾಗಿ ಕೇವಲ 6 ದಿನಗಳಾಗಿವೆ. ಶೋಕದ, ಸಂಕಟದ ಉರಿ ಇನ್ನೂ ಆರಿಲ್ಲ, ಆಗಲೇ ಇಲ್ಲೊಂದು ಸಂಭ್ರಮದ ಆಚರಣೆ.

ನಾವು ಭಾಗವಹಿಸುತ್ತಿದ್ದೇವೆಂದು ಇಂದಿನ ಕಾರ್ಯಕ್ರಮ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ಸೇರಿಸಲಾಗಿದೆ. ಆದರೆ ನಮ್ಮಲ್ಲಿ ಹಲವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಪ್ಪಿಗೆ ನೀಡಿರುವುದಿಲ್ಲ. ಇದು ಸಂಭ್ರಮದ ದಿನವಲ್ಲ ಸಂಕಟದ ದಿನ. ಉರಿದು ಹೋದ ದಲಿತರ ಬೂದಿ ಇನ್ನೂ ಆರದೆ ನೋವಿನ ಗುರುತು ಬಿಟ್ಟು ಹೋಗಿರುವಾಗ ಹೇಳಿ ಇದು ಸಂಭ್ರಮಕ್ಕೆ ಸಮಯವೇ? ಹಾಡಿ ಕುಣಿಯುವ ದಿನವೇ?

ಈ ಸಂಭ್ರಮ ಆಚರಣೆಯಲ್ಲಿ ಹಲವಾರು ಜನರನ್ನು ಆಹ್ವಾನಿಸಲಾಗಿದೆ. ಇಂಥ ಹೊತ್ತಿನಲ್ಲಿ ಸಂಭ್ರಮಪಡುವ ಕಾರ್ಯಕ್ರಮದಲ್ಲಿ ಭಾಗವಹಿಸುವುದೆಂದರೆ ಮಾನವೀಯತೆ ಇಲ್ಲದ ನಡವಳಿಕೆ ಎಂದು ನಾವು ಭಾವಿಸಿದ್ದೇವೆ.

ಸಂಕಟದ ದಿನಗಳಲ್ಲಿ ನೊಂದವರ ಜೊತೆ ಸೇರಬನ್ನಿ. ಜಾತಿಯ ದಳ್ಳುರಿಯನ್ನು ನಂದಿಸಲು ಕೈ ಜೋಡಿಸಬನ್ನಿ. ಸಮತಾ ಸಂಭ್ರಮ ಕಾರ್ಯಕ್ರಮ ಧಿಕ್ಕರಿಸಿ ಹೊರಬನ್ನಿ.

ಓದುಗರ ಅನಿಸಿಕೆಗಳು

ನಿಮ್ಮ ಪತ್ರಿಕೆ 'ಮಾನಸ' ಓದಿ, ಇಷ್ಟು ದಿನಗಳವರೆಗೆ ಪತ್ರಿಕೆಗೆ ಚಂದಾದಾರಳಾಗದೆ ವ್ಯರ್ಥಮಾಡಿಕೊಂಡೆನಲ್ಲ ಅನಿಸಿತು. ನಿಮ್ಮ ಪತ್ರಿಕೆ ನಿಮ್ಮ ಪ್ರಯತ್ನ ಎರಡೂ ಶ್ಲಾಘನೀಯ. ಎಲ್ಲದರಲ್ಲೂ ಪೈಪೋಟಿ ಇರುವ ಈ ದಿನಗಳಲ್ಲಿ ನಿಮ್ಮ ಪತ್ರಿಕೆ ಇಷ್ಟೊಂದು ಗಟ್ಟಿಯಾಗಿ ನೆಲೆಯೂರಿರುವುದು ಹೆಮ್ಮೆಯ ವಿಚಾರ.

ಮಹಿಳೆಯರಿಂದಲೇ ಮಹಿಳೆಯರಿಗಾಗಿಯೇ ನಡೆಯುತ್ತಿರುವ ನಿಮ್ಮ ಪತ್ರಿಕೆಯ ಸ್ತ್ರೀಪರ ಧೋರಣೆ ಎಲ್ಲವೂ ನನಗಿಷ್ಟವಾಗಿದೆ. ಅಭಿನಂದನೆಗಳು. ನಿಮ್ಮ ಪತ್ರಿಕೆಗೆ ಯಾವುದೇ ರೀತಿಯ ಸಹಕಾರ ಕೊಡಲು ನಮ್ಮ ಪರಿಷತ್ತಿನ ಪರವಾಗಿ ನಾವು ಸಿದ್ಧರಿದ್ದೇವೆ.

ಎಸ್. ಶೈಲಜಾ ಹಾಸನ್
ಹಾಸನ

* ✉ *

ಮಾನಸ ಸುಂದರವಾಗಿ ಮೂಡಿಬರುತ್ತಿದೆ. ಇದೊಂದು ಸಾಮಾಜಿಕ ಕಳಕಳಿಯುಳ್ಳ ಪತ್ರಿಕೆಯಾಗಿದೆ. ಲೇಖನಗಳು ವಿಮರ್ಶಾತ್ಮಕವಾಗಿಯೂ ವಿವೇಚನಾ ಯೋಗ್ಯವಾಗಿಯು ಮೂಡಿಬರುತ್ತಿದೆ. ತಮ್ಮ ಪ್ರಯತ್ನ ಸಫಲವಾಗಲಿ ಎಂದು ಹಾರೈಸುವೆ.

ಕೆ.ಬಿ. ವೀರಣ್ಣ ಕಣ್ಣಾಗಾಲ
ಹೊನ್ನಾವರ

* ✉ *

ಪಿ. ಲಂಕೇಶ್‌ರ 'ಅವ್ವ' ಹೊಸ ಓದು. ವಿಶಿಷ್ಟ ಲೇಖನವಾಗಿದ್ದು ಕವನದ ಹಲವು ಮಗ್ಗುಲುಗಳನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದೆ. ಉಳಿದಂತೆ ಎಲ್ಲಾ ಲೇಖನಗಳು ಉತ್ತಮವಾಗಿ ಮೂಡಿಬಂದು, ವಿಚಾರ ಯೋಗ್ಯವಾಗಿದೆ.

ರೂಪಾ ಹಾಸನ
ಹಾಸನ

* ✉ *

ಉತ್ತಮ ಲೇಖನಗಳು, ಮಹಿಳಾ ಸಮಸ್ಯೆಗಳನ್ನು ಎತ್ತಿಹಿಡಿಯುವ ನಿಮ್ಮ ಸಾಹಸಗಳು ನಿಜಕ್ಕೂ ಶ್ಲಾಘನೀಯ ಹೆಣ್ಣು ಮಕ್ಕಳ ಮೇಲೆ ನಡೆಯುವ ಅತ್ಯಾಚಾರಗಳು ಇಂದೂ ಅವ್ಯಾಹತವಾಗಿ ನಡೆಯುತ್ತಿದೆ. ನಾಗರೀಕತೆ ಬೆಳೆದಂತೆ (?!) ಈ ಪಿಡುಗುಗಳು ಹೆಚ್ಚುತ್ತಿವೆ ಎಂಬುದು ತೀರಾ ವಿಷಾದನೀಯ ಸಂಗತಿ.

ನಿಮ್ಮ ಎಲ್ಲಾ ಸಾತ್ವಿಕ ಕಾರ್ಯಕ್ಕೆ ಯಶ ಸಿಗಲೆಂಬುದು ನನ್ನ ಹಾರೈಕೆ.

ಜಯಶ್ರೀ

* ✉ *

ತಾವು ವಿಶ್ವಾಸವಿರಿಸಿ ಕಳುಹಿಸುತ್ತಿರುವ ಪತ್ರಿಕೆಗಳು ಕೈ ಸೇರಿವೆ. ತಮ್ಮ ಶ್ಲಾಘನೀಯ ಪ್ರಯತ್ನಕ್ಕೆ ಮುಂದೆಯೂ ಸಹಕಾರ ಸಹಾಯ ನೀಡುವ ಉದ್ದೇಶವಿದೆ. ತಮಗೆ, ತಮ್ಮ ಪತ್ರಿಕೆಗೆ ಶುಭವಾಗಲಿ.

ನರೇಂದ್ರ

* ✉ *

ಸ್ತ್ರೀಯರಿಗೆ ಸಂಬಂಧಿಸಿದಂತೆ, ಅವರ ಹಿತಾಸಕ್ತಿ, ಆಶೋತ್ತರಗಳು, ಭವಿಷ್ಯಗಳನ್ನು ಕುರಿತಂತೆ ಮಾನಸದಲ್ಲಿ ಪ್ರಕಟವಾಗಿರುವ ಸಶಕ್ತ ಲೇಖನಗಳು ನನಗೆ ತುಂಬಾ ಇಷ್ಟವಾಗಿವೆ. ಈ ಪ್ರತಿ ಹೀಗೆಯೇ ಮುಂದುವರಿಯಲಿ ಎಂದು ನಾನು ಹಾರೈಸುತ್ತೇನೆ.

ಜಯಶ್ರೀ ದೇಶಪಾಂಡೆ

ಸಿನಿಮಾ

ಅಕ್ಕ 'ದೇವೀರಿ'ಯಾದಾಗನಿಂದ ಎಲ್ಲೆಡೆ ಅದೇ ಸುದ್ದಿ. 'ಅಕ್ಕನ' ನೆನಪು ಮತ್ತು ದೇವೀರಿ ಹೇಗಿರಬಹುದೆಂಬ ಕುತೂಹಲದೊಂದಿಗೆ ಸಿನಿಮಾ ನೋಡಲು ಹೋಗಿದ್ದೆವು. ಹಾಗೆಯೇ ಅಬ್ಬರದ ಪ್ರಚಾರ ಮತ್ತು ಅದ್ಭುತ ಸಿನಿಮಾ ಎಂಬ ಕುತೂಹಲವನ್ನು Create ಮಾಡಿದ್ದ ಹೇ ರಾಮ್ ಸಿನಿಮಾವನ್ನು ನೋಡಿದೆವು. ಸಿನಿಮಾ ಮಾಧ್ಯಮದ ತಾಂತ್ರಿಕತೆಯ ಬಗ್ಗೆಯಾಗಲಿ, ಸಿನಿಮಾ ವಿಮರ್ಶೆಯ ಭಾಷೆಯ ಬಗ್ಗೆಯಾಗಲಿ ಹೆಚ್ಚಿನ ಜ್ಞಾನವಿಲ್ಲವೆಂಬ ಅರಿವಿನೊಂದಿಗೆ, ನಾವು ನೋಡಿದ ಸಿನಿಮಾಗಳ ಕುರಿತು ನಮಗನಿಸಿದ್ದನ್ನು ಮಾನಸ ಓದುಗರೊಂದಿಗೆ ಹಂಚಿಕೊಂಡಿದ್ದೇವೆ.

ದೇವೀರಿ

ಇರುವ ಒಬ್ಬ ತಮ್ಮನ ಬದುಕಿಗಾಗಿ, ತನ್ನ ಬದುಕಿಗಾಗಿ, ಆಸರೆಯಾಗಿದ್ದ ಸೂರಿಗಾಗಿ ಗಂಡಸರ ತೆವಲಿನೊಂದಿಗೆ ರಾಜಿ ಮಾಡಿಕೊಳ್ಳುವ ದೇವೀರಿ, ರಂಗಿನ ಸಿನಿಮಾ ಲೋಕದೊಳಗೆ ಮಿನುಗುವ ತಾರೆಯಾಗಿ, ಕ್ಯಾತನನ್ನು ಸೆಕ್ರೆಟರಿ ಮಾಡಿಕೊಂಡು, ಆಟೋಗ್ರಾಫ್ ಸಹಿ ಮಾಡುತ್ತ, ಕಾರಿನಲ್ಲಿ ಓಡಾಡುವ ಕನಸು ಕಾಣುವ ಪದ್ದಿ, ರೇಸ್‌ನ ಥ್ರಿಲ್‌ನಲ್ಲಿ, ಗುಂಡಿನ ಅಮಲಿನಲ್ಲಿ, ನಾಲ್ಕುಕಾಸು ಬೆಟ್ ಕಟ್ಟಿದ ಕುದುರೆ ಓಡಿ ನಾಲ್ಕುಲಕ್ಷ ಸಂಪಾದಿಸುವ ಕನಸು ಕಾಣುವ ರಂಗಣ್ಣ, ಊದುಬತ್ತಿ ಹೊಸೆದು, ಕುಡುಕ, ರೇಸ್ ಹುಚ್ಚಿನ ಗಂಡನನ್ನು ನೆಚ್ಚಿಕೊಳ್ಳದೆ ನಾಲ್ಕುಕಾಸು ಜೋಪಾನ ಮಾಡಿ ಬದುಕುವ ರಂಗಣ್ಣನ ಹೆಂಡತಿ, ಪದ್ದಿಗೆ ಸಿನಿಮಾದಲ್ಲಿ ಚಾನ್ಸ ಕೊಡಿಸಲು ಅವರಿವರ ಬಳಿ ಕೈಹೊಸೆಯುವುದಲ್ಲದೆ ಮೈನೆರೆದ ಇನ್ನೊಬ್ಬ ಮಗಳನ್ನು ತಾರೆ ಯಾಗಿಸಲು ರೆಡಿ ಮಾಡುವ ಪದ್ದಿಯ ಅಪ್ಪ.

ಗೂಂಡಾಗಳು, ತಲೆ ಹಿಡುಕರೊಂದಿಗೆ ಸ್ಲಂ ಜನರಿಗೆ ಸಹಾಯ ಮಾಡುವ ಮೂಲಕ ಎಲೆಕ್ಷನ್ ಗೆಲ್ಲುವ ಕನಸು ಕಾಣುವ ಪುಢಾರಿ ರಾಮಪ್ಪ, ಮಕ್ಕಳಿಗೆ ಪಾಠ ಮಾಡುತ್ತ ಸೀರೆ ನೆರಿಗೆಗಳನ್ನು ಸರಿಪಡಿಸಿಕೊಳ್ಳುವ, ಪಾಠದ ಮಧ್ಯದಲ್ಲೇ ಸೀರೆ ಖರೀದಿಸುವ ಮೇಡಂಗಳು-ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸುವ, ಒಳಗೊಳಗೆ ಪ್ರಶ್ನಿಸಿಕೊಳ್ಳುವ ಮೌನ ಪ್ರೇಕ್ಷಕ ಕ್ಯಾತ.

ಚಿತ್ರದ ಮೊದಲರ್ಧ ಭಾಗ ಬಿಡಿ ಬಿಡಿಯಾಗಿ, ನಾಟಕದ ಅಂಕಗಳನ್ನು ಜೋಡಿಸಿದಂತಿದೆ. ಸಂಭಾಷಣೆ ಹೇಳಿ ಹೋಗಲು ಪಾತ್ರಗಳು ಬಂದು ಹೋಗುತ್ತವೆನಿಸುತ್ತದೆ. ಸ್ಲಂ ಜನರ ಬದುಕು-ಬವಣೆಗಳ ಪರಿಚಯವಾಗುವುದಿಲ್ಲ. ಗುಡ್ಡೆಹಾಕಿ ತರಕಾರಿ ಮಾರೋದು, ಬೋಂಡ ಬಜ್ಜಿ ಮಾರೋದು, ನೀರಿಗೆ ಕ್ಯೂ ನಿಲ್ಲೋದು, ಮಕ್ಕಳು ಆಡೋದು, ಮನೆ ಮುಂದೆ ಕಾಲುಚಾಚಿ ಕೂತು ಮಾತನಾಡೋದು, ಹೊರಗೆ, ಕೂತು ಜೋರಾಗಿ ಟ್ರಾನ್ಸಿಸ್ಟರ್ ಹಾಕೋದು ಇತ್ಯಾದಿಯೆಲ್ಲ ಸಾಮಾನ್ಯವಾಗಿ ಕಂಡು ಬರುವ ದೃಶ್ಯ. ದೇವೀರಿ ಮನೆ ಸ್ಲಂನಲ್ಲಿದೆ ಎನ್ನುವುದನ್ನು ಬಿಟ್ಟರೆ ಅವಳಿಗೆ ಸ್ಲಂನಲ್ಲಿ ಯಾರೊಂದಿಗೂ, ಯಾವುದರೊಂದಿಗೂ ಸಂಬಂಧವೆ ಇಲ್ಲದಂತಿದೆ. ಮನೆಯಲ್ಲಿ ತಮ್ಮನೊಂದಿಗಿನ, ತಲೆ ಹಿಡುಕ ಧಾಂಡಿಗರೊಂದಿಗಿನ ಒಡನಾಟ ಬಿಟ್ಟರೆ ಇನ್ನಾರೊಂದಿಗೂ ಆಕೆಯ ಒಡನಾಟವಿಲ್ಲ. ಆಕೆ ಮೈಮಾರಿಕೊಳ್ಳುವ ದಂಧೆಗೆ ಇಳಿಯಲೇಬೇಕಾದ ಅನಿವಾರ್ಯತೆ establish ಆಗುವುದೇ ಇಲ್ಲ. ರಾಜಿ ಮಾಡಿಕೊಂಡರೂ ಹೆಚ್ಚಿನ ಅನುಕೂಲವನ್ನೂ ಆಕೆ ಪಡೆಯುವುದಿಲ್ಲ. ಮನೆಯಲ್ಲಿ, ತಿನ್ನಲು ಯಾವಾಗಲೂ ಇರುವುದು Bread ಒಂದೆ.

ದೇವೀರಿಯಾಗಿ ನಟಿಸಿರುವ ನಂದಿತಾಗೆ ತಮ್ಮ Sophistication ಅನ್ನು ಮೀರಲಾಗಿಲ್ಲ. ಸ್ನಾನ ಮಾಡಿಕೊಳ್ಳುವ ದೃಶ್ಯದಲ್ಲಿ ಕಲ್ಲಿನಲ್ಲಿ ಉಜ್ಜಿಕೊಂಡರೂ ಸೋಪಿನಲ್ಲಿ ಉಜ್ಜಿ ಕೊಂಡಂತಿದೆ. ಮಧ್ಯಂತರದ ಹೊತ್ತಿಗೆ, ಆನಂತರದ ಭಾಗದಲ್ಲಿ ಉತ್ತಮವಾಗಿ ಅಭಿನಯಿಸಿದ್ದಾರೆ. ವಿಶೇಷವಾಗಿ ಕ್ಯಾತ ತಿರುಗಿಸಿ 'ನೀನೇನ್ ಮಾಡ್ತೀಯಾ ನಂಗೊತ್ತಿಲ್ವೇನೆ' ಅಂದಾಗ ಥಟ್ಟನೆ ಮೌನವಾಗಿ, ಸೀರೆ ಬದಲಾಯಿಸಿಕೊಳ್ಳುವ ದೃಶ್ಯದಲ್ಲಿ, ಕ್ಯಾತನಿಗೆ ಸುಳಿವು ಕೊಡದೆ, ಒಳಗೆ ನೋವು ನುಂಗುತ್ತಾ ವಿದಾಯ ಹೇಳುವ ದೃಶ್ಯದಲ್ಲಿ ನಂದಿತಾ ಮನಮುಟ್ಟುವಂತೆ ನಟಿಸಿದ್ದಾರೆ.

ಕ್ಯಾತ ತಿರುಗಿಸಿ ಪ್ರಶ್ನಿಸಿದ ದೃಶ್ಯದಲ್ಲಿ - ಕ್ಯಾತ ದೊಡ್ಡವನಾದ. ತನ್ನನ್ನು ತಾನು ನಿಭಾಯಿಸಿಕೊಳ್ಳಬಲ್ಲನೆಂದು ಅಥವಾ ದೊಡ್ಡವನಾದಮೇಲೆ ದೇವೀರಿಯನ್ನು ಹೇಗೆ ನಡೆಸಿಕೊಳ್ಳ ಬಹುದೆಂಬುದನ್ನು ಸೂಕ್ಷ್ಮವಾಗಿ ಸೂಚಿಸಿದರೂ ಸಹ, ಕ್ಯಾತನನ್ನು

ಒಂಟಿಯಾಗಿ, ಸುಳಿವು ನೀಡದಂತೆ ಬಿಟ್ಟು ಗುಂಪಿನಲ್ಲಿ ಕರಗಿ ಹೋಗುವುದು Inhuman ಎನಿಸುತ್ತದೆ.

ಸಿನಿಮಾ ನಟಿಯಾಗುವ ಕನಸಿನಲ್ಲಿ ಐಸ್‌ಕ್ರೀಂ ನಂತೆಯೇ ಕರಗಿ ಹೋಗುವ ಪದ್ದಿಯ ಪಾತ್ರದಲ್ಲಿ ಭಾವನ ಚೆನ್ನಾಗಿ ನಟಿಸಿದ್ದಾರೆ. ಈ ಪದ್ದಿ ದೇವೀರಿ-ಎರಡೂ ಪಾತ್ರಗಳನ್ನು ನೋಡಿದಾಗ, ರಾಜಿ ಮಾಡಿಕೊಂಡರೆ ಬೇಕೆನಿಸಿದ್ದನ್ನು ಪಡೆದು ಬಿಡಬಹುದೆಂಬ ಭ್ರಮೆಯನ್ನಾಗಲೀ, ಕನಸನ್ನಾಗಲಿ ಕಾಣಲು ಸ್ಲಂ ಜೀವನದ ನಿಜ ಸ್ಥಿತಿ ಸಾಧ್ಯವಾಗಿಸುತ್ತದೆಯೇ ಎಂಬ ಅನುಮಾನ ಮೂಡುವುದಲ್ಲದೆ, ಲೈಂಗಿಕವಾಗಿ ಬಳಕೆಯಾಗದ ಹೆಂಗಸರಿಗೆ ಏನೂ ಗಿಟ್ಟದೆಂಬುದಕ್ಕೆ ಒತ್ತು ನೀಡಿದೆ ಎನಿಸಿಬಿಡುತ್ತದೆ.

ಎಲ್ಲದಕ್ಕೂ ಮೂಕಸಾಕ್ಷಿಯಾಗಿ, ಮೌನವಾಗಿ ಮಾತನಾಡುತ್ತ ಓಣಿ, ಓಣಿಗಳಲ್ಲಿ ಓಡುತ್ತಾ ಕೊನೆಗೆ ಅನಾಥಾಶ್ರಮ ಸೇರುವ ಕ್ಯಾತನಾಗಿ ಮಂಜನ ಅಭಿನಯ ನಟನೆಯೇ ಅಲ್ಲ. ಮಂಜನೇ ಕ್ಯಾತನಾಗಿದ್ದಾನೆ, ಕ್ಯಾತನೇ ಮಂಜನಾಗಿ ಬಿಟ್ಟಿದ್ದಾನೆ. ಕ್ಯಾತನ ಪಾತ್ರದ Treatment ತುಂಬಾ ಚೆನ್ನಾಗಿದೆ.

ತುಂಬಾ Melodramatic ಆಗುವ, ಸ್ತ್ರೀಪಾತ್ರಗಳು ಮಾಂಸದ ದೇಹವಾಗಿಬಿಡುವ ಸಾಧ್ಯತೆ ಇದ್ದ ಸಿನಿಮಾವನ್ನು ಕವಿತಾ ಅವರು ನೀಟಾಗಿ, Sensible ಆಗಿ ಮಾಡಿದ್ದಾರೆ. ಒಟ್ಟಾರೆ ಒಂದು ಪ್ರಾಮಾಣಿಕ ಪ್ರಯತ್ನ. ಒಳ್ಳೆಯ ಸಿನಿಮಾಗಳನ್ನು ಮಾಡಬಲ್ಲರೆಂಬ ಭರವಸೆ ಮೂಡಿಸಿದ್ದಾರೆ. ಇದೊಂದು ಬೋರ್ ಆಗದ ಸೀರಿಯಸ್ ಚಿತ್ರ; ಕಮರ್ಷಿಯಲ್ ಎನಿಸದ ಸಾರ್ವಜನಿಕರ ಚಿತ್ರ.

ಯಾವುದು ನಿಜವಾದ ಸ್ಲಂ, ಯಾವುದು ನಿರ್ಮಿತವಾದ ಸ್ಲಂ ಎಂಬುದು ಗೊತ್ತಾಗದಂತೆ ಸೆಟ್ ಹಾಕಿರುವ ಶಶಿಧರ ಅಡಪರ ಕಲಾನಿರ್ದೇಶನ ಚಿತ್ರಕ್ಕೆ ಜೀವ ನೀಡಿದೆ.

ಹೇ ರಾಮ್

ಯಾವುದೋ ಪತ್ರಿಕೆಯಲ್ಲಿ ಓದಿದ ನೆನಪು. ಪೇಪರ್‌ನವರು ಕಮಲಹಾಸನರನ್ನು 'ನೀವು ಹೇ ರಾಮ್ ಸಿನಿಮಾ ಮಾಡಲು ಗಾಂಧಿಯನ್ನು ಬಹಳವಾಗಿ ಅಭ್ಯಸಿಸರಬೇಕಲ್ಲವೇ' ಎಂದದಕ್ಕೆ ಕಮಲ್ 'ನಾನು ಭಾರತೀಯ, ಗಾಂಧೀಜಿ ನನಗೆ ಹೊರಗಿನವರಲ್ಲ; ನಾವು ಅವರನ್ನು ಬದುಕುತ್ತಿದ್ದೇವೆ; ಗಾಂಧಿಯನ್ನು ಓದಿ ತಿಳಿದುಕೊಳ್ಳುವ ಪ್ರಮೇಯ ನನಗಿಲ್ಲ' ಎಂದು ಉತ್ತರಿಸಿದ್ದರು. ವ್ಹಾ ಎಂದುಕೊಂಡಿದ್ದೆ. ಆದರೂ ಇದು ಅಟೆನ್‌ಬರೋನ ಗಾಂಧಿಯನ್ನು ಟೀಕಿಸಲು ಹೇಳಿದ ಮಾತು ಎಂಬ ಸಂಶಯ ಬರದೇ ಇರಲಿಲ್ಲ.

ಕಾಲ-ಸ್ವಾತಂತ್ರ್ಯ ಚಳುವಳಿ ಬಿರುಸಾಗಿ ನಡೆಯುತ್ತಿದ್ದ 1940ರ ದಿನಗಳು. ಹೀರೋ ಸಾಕೇತ ರಾಮ ಬ್ರಿಟಿಷ್ ಆಡಳಿತದಲ್ಲಿ ವಿದ್ಯಾವಂತ ಸರ್ಕಾರಿ ನೌಕರ. ರಾಜಕೀಯವಾಗಿ ನಿರ್ಲಿಪ್ತ, ಕೆಲಸ, ಸ್ನೇಹಿತರು ಸುಖವಾದ ಒಂದು ಸೀಮಿತ ಬದುಕು ಬದುಕುತ್ತಿರುತ್ತಾನೆ. ತನ್ನ ಗೆಳತಿ ಹಿಂದೂ ಮುಸ್ಲಿಂ ಗಲಭೆಯಲ್ಲಿ ಕೊಲೆಗೀಡಾದ ನಂತರ 'ರಾಜಕೀಯ ಪ್ರಜ್ಞೆ' ಬೆಳೆಸಿಕೊಳ್ಳುತ್ತಾನೆ. ಮುಸ್ಲಿಂರನ್ನು ಕುಲಬಾಂಧವರಂತೆ ಕಾಣಬೇಕೆಂದು ತೊಂದರೆ, ಕಿತಾಪತಿ (ಉಪವಾಸ ಕೂರುವುದು, ಸತ್ಯಾಗ್ರಹ ಹಮ್ಮಿಕೊಳ್ಳುವುದು, ಅಹಿಂಸೆಯನ್ನೇ ಪ್ರತಿಪಾದಿಸುವುದು) ಮಾಡುವ ಹಟಮಾರಿ ಮುದುಕ ಮಹಾತ್ಮ ಗಾಂಧಿಯನ್ನು ಕೊಲ್ಲುವ ಮುಖ್ಯ ವ್ಯಕ್ತಿಯಾಗಿ ಮಾರ್ಪಾಟುಗೊಳ್ಳುತ್ತಾನೆ. ಆದರೆ ತನ್ನ ಆಪ್ತ ಗೆಳೆಯ ಅಮ್ಜದ್‌ಖಾನ್‌ನಿಂದ (ಶಾರುಕ್‌ಖಾನ್) ಅವನ 'ಗುರಿ' ವಿಚಲಿತಗೊಳ್ಳುತ್ತದೆ. ಗಾಂಧೀಜಿಯಲ್ಲಿ ಕ್ಷಮೆ ಬೇಡಬೇಕೆಂದು ಬಂದಾಗ ನಾಥೂರಾಮ ಗಾಂಧಿಯನ್ನು 'ಎಗರಿಸಿಬಿಡುತ್ತಾನೆ'. ಇದು ಕತೆ.

ಚಿತ್ರದ ಉದ್ದೇಶ ಗಾಂಧಿಯ ತತ್ವವನ್ನು ಎತ್ತಿಹಿಡಿಯುವುದು ಎಂದು ಹಬ್ಬಿಸಿದ್ದರೂ ಚಿತ್ರದಲ್ಲಿ ಗಾಂಧಿಯನ್ನು ಹಾಸ್ಯಾಸ್ಪದ ವ್ಯಂಗ್ಯಚಿತ್ರವನ್ನಾಗಿ ಮಾಡಲಾಗಿದೆ. ಸಂಭಾಷಣೆ, ಹಾಡುಗಳು ಸ್ಪಷ್ಟವಾಗಿಲ್ಲ. ಚಿತ್ರದಲ್ಲಿ ಬರುವ ಎಲ್ಲ ಪಾತ್ರಗಳು, ಗಾಂಧೀಜಿಯನ್ನು ಒಳಗೊಂಡು, ಹೀರೋನ Contextಗೇ ಸೀಮಿತವಾಗಿವೆ. ಪ್ರತಿಯೊಂದು ಫ್ರೇಮಿನಲ್ಲೂ ತನ್ನನ್ನೇ ಮೆರೆಸಿಕೊಂಡಿರುವ ಕಮಲರ ಸ್ವಪ್ರೇಮ ಮಿತಿ ಮೀರಿದ್ದು. ಪಾಪ ಆ ಇಬ್ಬರು ಹುಡುಗಿಯರು ಹೀರೋನ ಚೇಷ್ಟೆ, ತೀಟೆ, ಕಾಮಗಳಿಗೇ ಸೀಮಿತವಾಗಿಬಿಟ್ಟಿದ್ದಾರೆ. ಬೇರೆ ಕೆಲಸವೇ ಇದ್ದಂತಿಲ್ಲ. ಗಿರೀಶ್ ಕಾರ್ನಾಡ್ ಮತ್ತು ಹೇಮಮಾಲಿನಿಯರು ಬರೀ ವೇಸ್ಟ್. ಕಮಲಹಾಸನರ ಅಭಿನಯವೂ ಅಷ್ಟಕ್ಕಷ್ಟೇ. ಬಯಲಿನಲ್ಲಿ ನಿಂತು ಬಂದೂಕು ಹಾರಿಸುವ ದೃಶ್ಯಗಳಲ್ಲಂತೂ ಕಮಲ್ ನಟಿಸುವುದನ್ನು ಮರೆತು ಮಾಡೆಲಿಂಗ್ ಮಾಡಿದಂತಿದೆ. ಸಿನಿಮಾ Photo-exhibitionನಂತಿದೆ.

ಚಾರಿತ್ರಿಕವಾಗಿ ಬಹು ಮುಖ್ಯವಾದ ಸ್ವಾತಂತ್ರ್ಯ ಸಂಗ್ರಾಮದ ತೀವ್ರತೆಗಳು, ಸಂಕೀರ್ಣತೆಗಳನ್ನು ಮರೆಮಾಚಿ ಇದನ್ನು

Fictionalise ಮಾಡಿದ್ದಾರೆ. ತಾಂತ್ರಿಕತೆಗಳಿಂದ ವೀಕ್ಷಕರ ಮನಮುಟ್ಟುವುದು ಸಾಧ್ಯವಿಲ್ಲ. ರಾಜಕೀಯ ಬದ್ಧತೆಗಳಿಲ್ಲದ, ಹೈಟೆಕ್ ದೃಶ್ಯಗಳನ್ನು ಸೃಷ್ಟಿಸಿ ಹೆಸರು, ಹಣ ಮಾಡುವ ಕಮಲರ ಉದ್ದೇಶ ನಿಚ್ಚಳವಾಗಿ ಕಾಣುತ್ತದೆ. ಚಿತ್ರಕಥೆ, ಪಾತ್ರ ವಿವರಣೆ ಎಷ್ಟೇ ಜಾಳಾಗಿದ್ದರೂ ಆಧುನಿಕ ತಾಂತ್ರಿಕತೆಯಿಂದ ಅದ್ಭುತ ಸಿನಿಮಾ ನೀಡಬಹುದು ಎಂದು ಅಂದುಕೊಂಡರೆ 'ಸಾರ್ ಇದು ಇಂಡಿಯಾ, ಇಲ್ಲಿ ಇಂಥ ಗಿಮಿಕ್‌ಗಳೆಲ್ಲ, ಜಾಸ್ತಿ ದಿನ ಗಿಟ್ಟಲ್ಲ. ಯಾವುದಾದರೂ ಪಶ್ಚಿಮ ದೇಶಕ್ಕೆ ಹೋಗಿ-ಅಲ್ಪಸ್ವಲ್ಪ ವ್ಯಾಪಾರಿ ಆಗಬಹುದು. ಲೈಟ್, ಸೌಂಡ್‌ಗಳೇ ಸಿನಿಮಾ ಆಗಿಬಿಡುವುದು ಮೂರ್ಖರ, ಹುಂಬರ ಗ್ಯಾಂಗ್‌ನಲ್ಲಿ ಮಾತ್ರ. ಇದೇ ಕಾರಣಕ್ಕೆ ಕಮಲಹಾಸನ್ ಒಬ್ಬ ಒಳ್ಳೆಯ ಶೋ ಮ್ಯಾನ್! ಆಗಿಬಿಟ್ಟಿದ್ದಾರೆ. ಕೆಲವು ಮೆಚ್ಚಬಹುದಾದ ಸೀನ್‌ಗಳೆಂದರೆ : 1) ಗಾಂಧಿಯನ್ನು ಕೊಲ್ಲುವ ಪ್ರಮಾಣ ಮಾಡುವ ಸಾಕೇತ ರಾಮ ಸೋಡಾ ಫಾಕ್ಟರಿಯಲ್ಲಿ ಗೆಳೆಯ ಅಮ್ಜದ್‌ನನ್ನು ಎದುರಿಸಿದಾಗ ನಡೆದ ಪ್ರಕರಣಗಳಿಂದ ಗೊಂದಲಗೊಳ್ಳುತ್ತಾನೆ; ವಿಚಲಿತಗೊಳ್ಳುತ್ತಾನೆ; ಪಾಪ ಪ್ರಜ್ಞೆ ಬೆಳೆಸಿಕೊಳ್ಳುತ್ತಾನೆ. 2) ತನ್ನ ಗೆಳತಿ ಕೊಲೆಯಾದಾಗ ಶಾಕ್‌ಗೊಂಡ ಹೀರೋ ಹುಚ್ಚನಂತೆ ಅಲೆದಾಡುವುದು, ಎಲ್ಲರನ್ನೂ, ಭೀತಿ, ಸಂಶಯಗಳಿಂದ ಕಾಣುತ್ತಾನೆ. ತನ್ನ ಬಾಳಗೆಳತಿಯ ಕೊಲೆಯಿಂದ ಆಘಾತಗೊಂಡು, ತಕ್ಷಣಕ್ಕೆ ಸೇಡು ತೀರಿಸಿಕೊಳ್ಳಬೇಕೆಂಬ ಸಾಕೇತ ರಾಮನ ಮನಸ್ಸನ್ನು ತಣ್ಣಗೆ ಉದ್ರೇಕಿಸುತ್ತಾ ಮತಾಂಧ ಸೇಡನ್ನಾಗಿ ಪರಿವರ್ತಿಸುವ ಆರ್.ಎಸ್.ಎಸ್. ನಾಯಕ ಮತ್ತು ರಾಜನ ಪಾತ್ರಗಳ ಚಿತ್ರಣ ಪರಿಣಾಮಕಾರಿಯಾಗಿ ಬಂದಿದೆ. ಮನುಷ್ಯರ ಒಂದು ದುರ್ಬಲ ಮನಸ್ಥಿತಿಯನ್ನೆ ನಿಧಾನವಾಗಿ ಉದ್ರೇಕಿಸುತ್ತಾ ಸ್ಫೋಟಿಸುವ ಹಂತಕ್ಕೆ ತರುವ ಮತಾಂಧರ ರಾಜಕೀಯ ನಡುಕ ಹುಟ್ಟಿಸುತ್ತದೆ. ಹೀಗೇ ಕೆಲವು.

ಕಮಲಹಾಸನ್ ಸ್ವಲ್ಪ ಪಾಡು ಪಟ್ಟಿದ್ದರೆ ಅಥವಾ ಸಂಪೂರ್ಣ ಪ್ರಮಾಣಿಕತೆಯಿಂದ ಕೆಲಸ ಮಾಡಿದ್ದರೆ ಖಂಡಿತ ಒಂದು ಒಳ್ಳೆಯ ಸಿನಿಮಾವನ್ನು ನೀಡಬಹುದಿತ್ತೇನೋ.

* ಮಣಿರತ್ನಂನಂಥವರಿಗಾಗಲೀ ಕಮಲಹಾಸನ್‌ನಂಥವರಿಗಾಗಲಿ ಕೋಮು ಗಲಭೆಯ, ಸಾವು ಸಂಕಟಗಳ ನೋವು ತಟ್ಟುವುದಿಲ್ಲ. ದಂಗೆಗಳ ಮಾಹಿತಿ ಮಾತ್ರದಿಂದ ಸಿನಿಮಾ ಮಾಡುವವರಿಂದ ಇನ್ನೇನು ತಾನೇ ನಿರೀಕ್ಷಿಸಬಹುದು? ಎಲ್ಲವನ್ನು ಸರಕಾಗಿಸಿ ವ್ಯಾಪಾರ ಮಾಡುವ ಜಾಣತನಕ್ಕಷ್ಟೇ ಇವರ Creativity ಸೀಮಿತವಾಗಿದೆ.

* ಮರ ಸುತ್ತುವ ಪ್ರೇಮಕತೆಗಳ, ಸಾಂಸಾರಿಕ ಕಣ್ಣೀರು ಚಿತ್ರಗಳ, ತಿಳಿಹಾಸ್ಯದಿಂದ ರಂಜಿಸುವ ಸಿನಿಮಾ ವಸ್ತುಗಳು ಕಮಲರಿಗೆ ಬೋರಾಗಿಬಿಟ್ಟಿದೆಯೇ? ಸರಿ, ಆದರೆ Publicity, ಹಣ ಬೋರಾಗಿಲ್ಲವೇ?

ಒಳ್ಳೆಯ ನಟರಾದ ಕಮಲಹಾಸನ್ ಮನರಂಜನೆಯ ಚಿತ್ರಗಲ್ಲೇ ತೊಡಗಿಸಿಕೊಳ್ಳುವುದು ಒಳ್ಳೆಯದು. ಕಮಲ್ ನಟನೆ ನಿರ್ದೇಶನದ ಕಲ್ಯಾಣರಾಮನ್, ಮಗಳಿರ್ ಮಟ್ಟುಂ, ಸತಿ ಲೀಲಾವತಿ, ಪುಷ್ಪಕ ವಿಮಾನ ದಂತಹ ಚಿತ್ರಗಳು ಈಗಲೂ ಖುಷಿ ಕೊಡುತ್ತವೆ. ಅದು ಬಿಟ್ಟು ಇದೇನಿದು ರಾಮ ರಾಮ.

ಚಿತ್ರ, ಸವಿತ, ಸರಸ್ವತಿ

ಓದುಗರಲ್ಲಿ;

ಸಕಾಲದಲ್ಲಿ ಮಾನಸದ ಚಂದಾ ನವೀಕರಿಸಿ.

ವರ್ಷಕ್ಕೆ 100-00 ರೂ. ಕೊಡುಗೆಯಾಗಿ ನೀಡುವುದರ ಮೂಲಕ ಪತ್ರಿಕೆಗೆ ಹಾಗೂ ಮಾನಸದ ಚಟುವಟಿಕೆಗಳಿಗೆ ಬೆಂಬಲ ನೀಡಿ.

ದಿಕ್ಕೆಟ್ಟ ದೊಡ್ಡಮ್ಮ

- ವೆಂ. ವನಜ

ಮೈಸೂರಿನಲ್ಲೊಂದು ಗಾಂಧಿನಗರ. ಇದು ದಲಿತ ವರ್ಗದವರು, ಮುಸ್ಲಿಮರು, ಮತ್ತು ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುವ ಪ್ರದೇಶ. ಇಲ್ಲೊಂದು ಮಾರ್ಕೆಟ್-ಮಹಿಳಾ ಮಾರ್ಕೆಟ್. ಸುಮಾರು ಐವತ್ತು ವರ್ಷಗಳ ಹಿಂದೆ ಕಟ್ಟಿರ ಬಹುದಾದ ಈಗ ಶಿಥಿಲಗೊಂಡು ಸೊಳ್ಳೆ, ನೊಣಗಳಿಗೆ ಆಗರವಾಗಿರುವ, ಕಾರ್ಪೊರೇಷನ್ನಿನ ಬೇಜವಾಬ್ದಾರಿಗೆ, ನಿರ್ಲಕ್ಷ್ಯಕ್ಕೆ ಸಾಕ್ಷಿಯಂತಿರುವ ಕಟ್ಟಡ. 17 ರಿಂದ 20ರ ಸಂಖ್ಯೆಯಲ್ಲಿರುವ ಮಹಿಳಾ ವ್ಯಾಪಾರಿಗಳು ಇಲ್ಲಿ 'ಮಳಿಗೆ' ಎಂದುಕೊಳ್ಳುವ ಜಾಗದಲ್ಲಿ ತರಕಾರಿ, ಹಣ್ಣು, ಸೊಪ್ಪು ಮುಂತಾದವುಗಳ ಮಾರಾಟ ಮಾಡುತ್ತಾರೆ. ಇಲ್ಲಿ ಮಹಿಳೆಯರೇ ಗ್ರಾಹಕರು. ಹಾಗೆಂದು ಪುರುಷರು ಬರುವುದೇ ಇಲ್ಲವೆಂದಲ್ಲ. ಅವರ ಸಂಖ್ಯೆ ಅತಿ ಕಡಿಮೆ.

ವ್ಯಾಪಾರದಲ್ಲಿ ತೊಡಗಿರುವ ಮಹಿಳೆಯರಲ್ಲಿ ಇಬ್ಬರು ಮಾತ್ರ ಮುಸ್ಲಿಮ್ ಜನಾಂಗಕ್ಕೆ ಸೇರಿದವರು. ಉಳಿದವರೆಲ್ಲಾ ದಲಿತ ಜನಾಂಗದವರು. ಇವರಲ್ಲಿ ಇಬ್ಬರು ಮಾತ್ರ ಹಣ್ಣುಗಳ-ಸೀಬೆ, ಮರಸೇಬು ಮುಂತಾದ ಹಣ್ಣುಗಳ ಮಾರಾಟ ಮಾಡಿದರೆ, ಉಳಿದವರೆಲ್ಲಾ ತರಕಾರಿ ಮಾರಾಟ ಮಾಡುತ್ತಾರೆ. ತರಕಾರಿ ಎಂದರೆ ಎಲ್ಲಾ ಬಗೆಯ ತರಕಾರಿಗಳೊಂದಿಗೆ ತೆಂಗಿನಕಾಯಿ ಚೂರುಗಳನ್ನು ಪ್ರತಿಯೊಬ್ಬ ಮಹಿಳೆಯೂ ವ್ಯಾಪಾರ ಮಾಡುವುದು ಈ ಮಾರ್ಕೆಟ್ಟಿನ ವಿಶೇಷ. ಒಂದು ಅಥವಾ ಎರಡು ರೂಪಾಯಿಗಳಿದ್ದರೆ ಸಾಕು. ಎಲ್ಲ ತರಕಾರಿಗಳನ್ನೂ ಒಮ್ಮೆಗೇ ಕೊಂಡು ತರಬಹುದು-ನಾಲ್ಕು ಬೀನ್ಸ್, ಎರಡು ಬದನೆಕಾಯಿ, ಎರಡು ಬೀಟ್‌ರೂಟ್, ಒಂದು ಚೂರು ಶುಂಠಿ, ಇತ್ಯಾದಿ. ತಕ್ಕಡಿ, ತೂಕದ ಬೊಟ್ಟುಗಳ ಸುಳಿವಿಲ್ಲ, ತೂಕ ಹಾಕಿಸಿಕೊಂಡೂ ಮೋಸಹೋಗುವ ಸಂಭವವೂ ಇಲ್ಲ. ಇಂಥ ಒಂದು ಮಾರ್ಕೆಟ್ ಮೈಸೂರಿನಲ್ಲಿರುವ ವಿಷಯ ಪ್ರತಿದಿನ/ತಿಂಗಳು ತಪ್ಪದೆ ಸುಂಕ ವಸೂಲಿ ಮಾಡುವ ಕಾರ್ಪೊರೇಷನ್ ಮತ್ತು ಆ ಪ್ರದೇಶದ ಸುತ್ತಮುತ್ತಲಿನ ಜನರನ್ನು ಬಿಟ್ಟರೆ ಉಳಿದವರಿಗೆ ತಿಳಿದಿರುವುದು ಅನುಮಾನ.

'ಮಳಿಗೆ' ಎನ್ನುವ ಜಾಗದಲ್ಲೋ ಅಥವಾ ಮಾರ್ಕೆಟ್ಟಿನ ದ್ವಾರದ ಬಳಿಯೋ, ಅಥವಾ ಅದರ ಮುಂಭಾಗದಲ್ಲೋ ತಮ್ಮ ವ್ಯಾಪಾರದ ವಸ್ತುಗಳನ್ನು ಹರಡಿಕೊಂಡು ಗ್ರಾಹಕರನ್ನು ಚಾತಕ ಪಕ್ಷಿಯಂತೆ ಕಾಯುತ್ತಾ ಕುಳಿತುಕೊಳ್ಳುವ ಮಹಿಳೆಯರಲ್ಲಿ ಒಬ್ಬಳು ದೊಡ್ಡಮ್ಮ.

ದೊಡ್ಡಮ್ಮ ಸುಮಾರು 65 ರಿಂದ 70 ವರ್ಷ ವಯಸ್ಸಿನ ವಿಧವೆ. ನಸುಗೆಂಪು ಬಣ್ಣದ, ಕಡ್ಡಿದೇಹದ ಇವಳು ಬಲು ಚುರುಕು. ಮಾತು ಕಡಿಮೆ. ಹೇಳಬೇಕಾದುದೆಲ್ಲವನ್ನು ಕಣ್ಣಿನಲ್ಲೇ ಹೇಳುವ ಜಾಣ್ಮೆ.

ಮೈಸೂರಿನಲ್ಲೇ ಹುಟ್ಟಿಬೆಳೆದ ಇವಳು ಬಹಳ ಚಿಕ್ಕವಯಸ್ಸಿನಲ್ಲೇ ಗಾಂಧಿನಗರದ ಚೆನ್ನಗಯ್ಯನನ್ನು ವಿವಾಹವಾದಳು. ಚೆನ್ನಗಯ್ಯ ಗಾರೆ ಕೆಲಸ ಮಾಡುತ್ತಿದ್ದ. ವರ್ಷ ಎಲ್ಲಾ ದಿನಗಳಲ್ಲೂ ಕೈಗೆ ಕೆಲಸವಿರುತ್ತಿರಲಿಲ್ಲ. ಕುಟುಂಬದ ನಿರ್ವಹಣೆಗೆ ಇವನ ಸಂಪಾದನೆ ಎಟಕುತ್ತಿರಲಿಲ್ಲ. ಇದರ ಮಧ್ಯೆ ಎರಡು ಮಕ್ಕಳೂ ಆದವು-ಒಂದು ಗಂಡು, ಒಂದು ಹೆಣ್ಣು. ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ಕುಟುಂಬದ ನಿರ್ವಹಣೆಗೆ ದೊಡ್ಡಮ್ಮ ದುಡಿಯುವುದು ಈಗ ಅನಿವಾರ್ಯವಾಯಿತು. ತನ್ನ ತಾಯಿ ಮಾಡುತ್ತಿದ್ದ ವ್ಯಾಪಾರ, ಅವಳಿಂದ ಕಲಿತ ವ್ಯಾಪಾರದ ಜಾಣ್ಮೆ ಅವಳಿಗೆ ನೆರವಾಯಿತು. ಮನೆಗೆ ಹತ್ತಿರವೇ ಇದ್ದ ಈ ಮಾರ್ಕೆಟ್ಟಿನಲ್ಲಿ ಮಳಿಗೆಯೂ ಸಿಕ್ಕಿತು. ಹೀಗೆ ಅವಳ ವೃತ್ತಿಜೀವನ ಆರಂಭವಾಯಿತು.

ಇದಿಷ್ಟು ಸುಮಾರು 26-28 ವರ್ಷಗಳ ಹಿಂದಿನ ಮಾತು. ಮಕ್ಕಳೀಗ ದೊಡ್ಡವರಾಗಿದ್ದಾರೆ. ಮಗಳ ಮದುವೆ ಆಗಿದೆ. ಅವಳು ಗಂಡನ ಮನೆಯಲ್ಲಿದ್ದಾಳೆ. ಮಗನ ಮದುವೆಯೂ ಆಗಿ ಅವನು ತನ್ನ ಹೆಂಡತಿ ಮಕ್ಕಳೊಂದಿಗಿದ್ದಾನೆ. ಗಂಡ ಚೆನ್ನಗಯ್ಯ ಈಗ ಬದುಕಿಲ್ಲ. ದೊಡ್ಡಮ್ಮನದು ಈಗ ಒಂಟಿಜೀವ. ಮಲಗಲೊಂದು ಹುಲ್ಲಿನ ಸೂರು. ಬೆಳಗಿನಿಂದ ಬೈಗಿನವರೆಗೆ ದುಡಿದರೆ ಹೊಟ್ಟೆ ತುಂಬಲು ಅಡ್ಡಿಯೇನಿಲ್ಲ. ಮೈದಣಿಯು ವವರೆಗೂ ದುಡಿಯುವ ಅವಳಿಗೆ ತನ್ನ ದುಃಖ ದುಮ್ಮಾನಗಳ, ಕುಂದುಕೊರತೆಗಳ ಕಡೆ ಮನಸ್ಸು ಹರಿಯುವುದಿಲ್ಲ. ಅದಕ್ಕೆ ಪುರುಸೊತ್ತಾದರೂ ಎಲ್ಲಿ?

ಅವಳ ದಿನದ ಆರಂಭ ಬೆಳಗಿನ ಐದು ಗಂಟೆಗೆ ಎದ್ದು ಸಗಟು ವ್ಯಾಪಾರ ನಡೆಯುವ ದೇವರಾಜ ಮಾರ್ಕೆಟ್ಟಿಗೋ ಅಥವಾ ರೆಗ್ಯುಲೇಟೆಡ್ ಮಾರ್ಕೆಟ್ಟಿಗೋ ಹೊರಟುಬಿಡುತ್ತಾಳೆ. ಇವಳ ಜೊತೆಯಲ್ಲಿ ಇವಳಂತೆಯೇ ವ್ಯಾಪಾರ ಮಾಡುವ ಮಹಿಳಾ ಸಂಗಡಿಗರು ಇರುತ್ತಾರೆ. ನಡೆದೇ ಮಾರುಕಟ್ಟೆ ತಲುಪುವ ಇವರು ತಾವು ಮಾರಬೇಕೆಂದಿರುವ ತರಕಾರಿಗಳನ್ನು ಕೊಂಡುಕೊಳ್ಳುತ್ತಾರೆ. ದೊಡ್ಡಮ್ಮ ತಾನು ಸಾಮಾನ್ಯವಾಗಿ ಮಾರುವ ಈರುಳ್ಳಿ, ತೆಂಗಿನಕಾಯಿ, ಟೊಮ್ಯಾಟೊ, ಚೌಳಿಕಾಯಿ ಮುಂತಾದ ಎಲ್ಲ ತರಕಾರಿಗಳನ್ನು ಸ್ವಲ್ಪ ಸ್ವಲ್ಪ ಪ್ರಮಾಣಗಳಲ್ಲಿ ಕೊಳ್ಳುತ್ತಾಳೆ. ಅವಳು ಹಾಕಬಹುದಾದ ಬಂಡವಾಳ 50 ರಿಂದ 100 ರೂಪಾಯಿಗಳಾಗಿರುತ್ತವೆ. ಅದಕ್ಕಿಂತ ಹೆಚ್ಚು ಬಂಡವಾಳ ಅವಳಿಗೆ ನಿಲುಕದ್ದು. ಕೊಂಡ ತರಕಾರಿಗಳನ್ನು ಎಲ್ಲರೊಂದಿಗೆ ಆಟೋವೊಂದರಲ್ಲಿ ಮಾರ್ಕೆಟ್ಟಿಗೆ ತರುತ್ತಾಳೆ. ಆಟೋ ಬಾಡಿಗೆಯನ್ನು ಇತರರೂ ಹಂಚಿಕೊಳ್ಳುವುದರಿಂದ ಅದು ಹೊರೆ ಎನಿಸುವುದಿಲ್ಲ.

ಬೆಳಿಗ್ಗೆ 10 ರಿಂದ ವ್ಯಾಪಾರ ಆರಂಭ. 12 ರಿಂದ 12-30ರ ವರೆಗೆ ವ್ಯಾಪಾರ ಮಾಡಿ ಮನೆಗೆ ವಾಪಸಾಗುತ್ತಾಳೆ. ಕೇವಲ ಒಂದು ಕಿಲೋಮೀಟರ್ ದೂರದಲ್ಲಿರುವ ಅವಳ ಮನೆಗೆ ಬಂದು ಊಟ ಮುಗಿಸಿ ಮತ್ತೆ 2 ಗಂಟೆಗೆ ಮಾರ್ಕೆಟ್ಟಿಗೆ ಬರುತ್ತಾಳೆ. ಅವಳು ಮತ್ತೆ ಮನೆ ಸೇರುವುದು ರಾತ್ರಿ 9 ಗಂಟೆಯ ನಂತರವೇ. ಈಗ ಅವಳ ರಾತ್ರಿಯ ಊಟ ಸಿದ್ಧವಾಗುತ್ತದೆ. ಅದು ಮರುದಿನಕ್ಕೂ ಉಳಿಯುವಂತಿರುತ್ತದೆ. ಉಂಡು ಮಲಗುವಾಗ ರಾತ್ರಿ ಹತ್ತೋ

ಹನ್ನೊಂದೋ ಗಂಟೆ ಹೊಡೆದಿರುತ್ತದೆ. ಹೀಗೆ ಒಂಟಿಜೀವನ, ಯಾಂತ್ರಿಕ ಬದುಕು ಹಲವು ವರ್ಷಗಳಿಂದ ಸಾಗುತ್ತಾ ಬಂದಿದೆ.

'ನಿನ್ನ ದಿನದ ದುಡಿಮೆ ಎಷ್ಟು?' ಎಂಬ ಪ್ರಶ್ನೆಗೆ ಅವಳ ಉತ್ತರ, 'ಗೊತ್ತಿಲ್ಲ'. ಎಂದಾಗಿರುತ್ತದೆ. ಅನಕ್ಷರಸ್ಥೆಯಾದ ದೊಡ್ಡಮ್ಮ ಚಿಕ್ಕವಯಸ್ಸಿನಲ್ಲಿ ಶಾಲೆಯ ಮುಖವನ್ನೇ ಕಾಣಲಿಲ್ಲ. 'ನನ್ನ ತಂದೆತಾಯಿ ನನ್ನನ್ನು ಮುದ್ದಿನಿಂದ ಬೆಳೆಸಿದರು. ಇಸ್ಕೂಲಿಗೆ ಕಳಿಸಲಿಲ್ಲ' ಎನ್ನುತ್ತಾಳೆ. ಅವಳು ಮಾಡುವುದು ವ್ಯಾಪಾರವೇ ಆದರೂ ವ್ಯಾಪಾರೀ ಮನೋಧರ್ಮ ಅವಳಲ್ಲಿ ಕಾಣುವುದಿಲ್ಲ. ತನಗೆ ಬರುವ ಆದಾಯ ಎಷ್ಟೆಂಬುದರ ಬಗ್ಗೆ ತಿಳಿದುಕೊಳ್ಳುವ ಕುತೂಹಲವೂ ಅವಳಲ್ಲಿಲ್ಲ. 'ಅದದೇ ತರಕಾರಿಗಳನ್ನು ಮಾರುವ ಬದಲು ಬೇರೇನನ್ನಾದರೂ ಮಾರುವುದಿಲ್ಲವೇಕೆ?' ಎಂದು ಕೇಳಿದರೆ, 'ಅದು ಹೇಗೆ ಸಾಧ್ಯ? ಬೇರೆಯವರು ಮಾರುವ ತರಕಾರಿಗಳನ್ನು ನಾನೂ ಮಾರಿದರೆ ಅವರಿಗೆ ಮೋಸ ಮಾಡಿದಂತಲ್ಲವೆ?' ಎಂದು ನಮಗೇ ಸವಾಲೆಸೆಯುತ್ತಾಳೆ.

ದೊಡ್ಡಮ್ಮನಿಗಿರುವ ಆಸ್ತಿಯೆಂದರೆ ಒಂದು ಪುಟ್ಟ ಗುಡಿಸಲು. ಅದರಲ್ಲಿರುವ ವಸ್ತುಗಳೆಂದರೆ, ನಾಲ್ಕೈದು ಮಡಕೆಗಳು ಮತ್ತು ಅಲ್ಯೂಮಿನಿಯಂ ತಟ್ಟೆ-ಲೋಟಗಳು. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮನೆಗೆ ಕಾಲಿಟ್ಟರೆ, ಖಾಲಿ ಮಡಕೆಗಳೇ ನನ್ನ ಕಣ್ಣಿಗೆ ಬಿದ್ದವು. 'ಕಾಫಿ ಕುಡಿಯಿರಿ ಮಾಡುತ್ತೇನೆ' ಎಂದಾಗಲೂ ಅದು ಸೌಜನ್ಯದ ಮಾತು ಮಾತ್ರ ಎಂಬ ಅನುಮಾನ ಕಾಡಿತು. ಕಾಫಿಗೆ ಬೇಕಾದ ಸಕ್ಕರೆ, ಕಾಫಿಪುಡಿ ಇರುವ ಬಗ್ಗೆ ನಂಬಿಕೆ ಬರಲಿಲ್ಲ. 'ಬೇಡ, ಹೋಟೆಲ್ಲಿನಲ್ಲಿ ಕುಡಿಯೋಣ' ಎಂದಾಗ ಬೇಡ ಎನ್ನಲಿಲ್ಲ.

ದೊಡ್ಡಮ್ಮಳ ವೃತ್ತಿಜೀವನದ ಒಂದು ದೊಡ್ಡ ಸಮಸ್ಯೆ ಎಂದರೆ, ಹೆಸರಿಗೆ ಮಾತ್ರ ಇರುವ 'ಮಳಿಗೆ' ಅದಕ್ಕೆ ಗೋಡೆಯೂ ಇಲ್ಲ, ಬಾಗಿಲೂ ಇಲ್ಲ. ವಿದ್ಯುದ್ದೀಪ ಮೊದಲೇ ಇರುವುದಿಲ್ಲ. ದುಡ್ಡು ಕೊಟ್ಟು ತಂದು ಹಾಕಿದ ಬಲ್ಬು ಮರುದಿನವೇ ಮಂಗಮಾಯವಾಗಿರುತ್ತದೆ. ವ್ಯಾಪಾರವಾಗದೆ ಉಳಿದ ತರಕಾರಿಗಳನ್ನು ಅಲ್ಲಿಯೇ ಇಡುವಂತಿಲ್ಲ. ಮರುದಿನ ಅದೂ ಕಡಿತಗೊಂಡಿರುತ್ತದೆ. ಇಂಥ ಸಮಸ್ಯೆಗಳಿಂದ ದೂರವಿರಲು ದಿನದಲ್ಲಿ ಮಾರಾಟವಾಗದೆ ಉಳಿದ ತರಕಾರಿಗಳನ್ನು ಮನೆಗೇ ಹೊತ್ತೊಯ್ಯುತ್ತಾಳೆ. ಮರುದಿನ ಮತ್ತೆ ಮಾರ್ಕೆಟ್ಟಿಗೆ ತರುತ್ತಾಳೆ. ಮಳಿಗೆಯಲ್ಲಿ ಕುಳಿತು ವ್ಯಾಪಾರ ಮಾಡುವುದನ್ನೇ ಬಿಟ್ಟಿದ್ದಾಳೆ. ಮಾರ್ಕೆಟ್ಟಿನ ದ್ವಾರದ ಬಳಿ ಅಥವಾ ಕಟ್ಟಡದ ಪಕ್ಕ ಕುಳಿತು ವ್ಯಾಪಾರ ನಡೆಸುತ್ತಾಳೆ. ಬಂದ ಲಾಭದಲ್ಲಿ ದಿನವೂ ಕಾರ್ಪೊರೇಷನ್ನಿಗೆ 50 ಪೈಸೆ ಕೊಡುತ್ತಾಳೆ. 40 ಪೈಸೆಗೇ ರಸೀದಿ ಪಡೆಯುತ್ತಾಳೆ. ಸಾಲಗಾರನಿಂದ ಪಡೆದ ಹಣವನ್ನು ದಿನದ ಕಂತಿನಲ್ಲಿ ತೀರಿಸುತ್ತಾಳೆ. ಕಡುಬಡತನದ ಬದುಕು ಹೀಗೇ ಮುಂದುವರೆದಿದೆ.

ಇದಿಷ್ಟು ಒಂದು ವರ್ಷದ ಹಿಂದೆ ಕಂಡ ದೊಡ್ಡಮ್ಮನ ಕಥೆ. ಇಂದು ದೊಡ್ಡಮ್ಮ ತರಕಾರಿ ವ್ಯಾಪಾರ ಬಿಟ್ಟುಬಿಟ್ಟಿದ್ದಾಳೆ. ಇದ್ದ ಒಬ್ಬ ಮಗ ತೀರಿಕೊಂಡಿದ್ದಾನೆ. ದಿಕ್ಕೆಟ್ಟವಳಂತೆ ದೊಡ್ಡಮ್ಮ ಅಲ್ಲಿಲ್ಲಿ ಸುತ್ತುತ್ತಾಳೆ. ಅಕ್ಕಪಕ್ಕದವರಲ್ಲಿ ವಿಚಾರಿಸಿದರೆ, 'ಅವಳು ಭಿಕ್ಷೆ ಬೇಡಲು ಹೋಗಿದ್ದಾಳೆ. ಇನ್ನು ಮನೆ ಸೇರುವುದು ರಾತ್ರಿಯೇ' ಎಂದನ್ನುತ್ತಾರೆ. ●

BOOK-POST
PRINTED MATTER

H.S. Pushpa
No. 95. Y.V. Annaiah Rd
Yelachenahalli
J.P. Nagar post
Bangalore - 78

REGD No. CPMG/KA/BGE/289/2000

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067